ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ



ಸಂಪುಟ 12 ಸಂಚಿಕೆ 48 ಡಿಸೆಂಬರ್ 2 1990 ಬೆಲೆ ರೂ. 1.50

ಪ್ರಜಾಪ್ರಭುತ್ವದ ಕೆಳಹಂತಗಳ ಕತ್ತು ಹಿಸುಕುವ ಪ್ರಯತ್ನ

"ರಾಷ್ಟ್ರ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಜಾಪ್ರಭುತ್ವ, ಅದಕ್ಕಿಂತ ಕೆಳಗಿನ ಮಟ್ಟಗಳಲ್ಲಿ ಅಧಿಕಾರಶಾಹಿಯ ದರ್ಬಾರು" ಇದೇ ಸ್ವಾತಂತ್ರ್ಯಾ ನಂತರ ಕಾಂಗ್ರೆಸ್ ಪಕ್ಷ ಅನುಸರಿಸುತ್ತಿರುವ ನೀತಿಯ ತಿರುಳು ಎಂದು ಕಾಂ. ಇ.ಎಂ.ಎಸ್, ಅಶೋಕ್ ಮೆಹ್ತಾ ಸಮಿತಿಯ ವರದಿಯಲ್ಲಿ ಬರೆದ ಟಿಪ್ಪಣಿಯಲ್ಲಿ ಉದ್ಗಾರ ತೆಗೆದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆ ಸರಕಾರ ತಾನು ಅಧಿಕಾರಕ್ಕೆ ಬಂದ ದಿನದಿಂದಲೇ ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಈ ಮಾತು ಎಷ್ಟು ನಿಜ ಎಂಬುದು ಸ್ಪಷ್ಟವಾಗುತ್ತದೆ. ಜಿಲ್ಲಾ ಪರಿಷತ್ ವ್ಯವಸ್ಥೆಯೊಡಗೂಡಿದ ರಾಜ್ಯದ ಅಧಿಕಾರ ಅವರಿಗೆ ಮುಳ್ಳಿನ ಮೇಲೆ ಕುಳಿತಂತಾಗಿತ್ತು. ಅಧಿಕಾರ ವಿಕೇಂದ್ರೀಕರಣವೆಂಬ ಈ ಮುಳ್ಳನ್ನು ಕಿತ್ತೊಗೆಯಲು 12 ತಿಂಗಳುಗಳಿಂದ ನಿರಂತರವಾಗಿ ಪ್ರಯತ್ನಿಸಿ ಈಗ ವಿಧಾನಸಭೆಯಲ್ಲಿಟ್ಟದ್ದಾರೆ. 73 ತಿದ್ದುಪಡಿಗಳು ಜಿಲ್ಲಾ ಪರಿಷತ್ ವ್ಯವಸ್ಥೆಯ ಎಲ್ಲಾ ಸಂಸ್ಥೆಗಳ ಹೆಸರುಗಳನ್ನು ಮಾತ್ರವೇ ಅಲ್ಲ ಅದರ ಜೀವವನ್ನು ಕಿತ್ತೊಗೆದು ಕೇವಲ ಶವವನ್ನು ಮಾತ್ರ ಅಲಂಕಾರವಾಗಿ ಧರಿಸಲನುವಾಗುವಂತೆ ಸಿದ್ಧಗೊಳಿಸುವ ಪ್ರಯತ್ನವಾಗಿವೆ.(ಕೆಲವು ಮನೆಗಳಲ್ಲಿ ಹುಲಿ, ಆನೆಗಳ ಹುಲ್ಲು ತುಂಬಿಸಿದ ಶವವನ್ನು ಅಲಂಕಾರವಾಗಿಡುವಂತೆ) ಜಿಲ್ಲಾಧಿಕಾರಿ ಮೊದಲಾದ ಐಎಎಸ್ ಅಧಿಕಾರಿಗಳು ಹಾಗೂ ರಾಜ್ಯದ ವಿವಿಧ ಇಲಾಖೆಗಳ ಮೂಲಕ ಬೆಂಗಳೂರೇ ನೇರವಾಗಿ ಪ್ರತಿ ಹಳ್ಳಿಯ ಜೀವನವನ್ನು ನಿರ್ಧರಿಸುವ ಪ್ರಯತ್ನ ಇದು. ಶಾಸಕರ ಭ್ರಷ್ಟಾಚಾರಕ್ಕೆ ಅವರಿಗೆ ನೆರವಾಗುವ ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಯಾವುದೇ ಮಿತಿಯನ್ನು ಜನಗಳ ನಿಯಂತ್ರಣವನ್ನು ಸಹಿಸದ ಪ್ರಯತ್ನವಿದು.

ವಿಧಾನಸಭೆಯಲ್ಲಿ ಹಾಡ ಹಗಲೇ ಕೆಳ ಹಂತಗಳ ಪ್ರಜಾಸತ್ತೆಯ ಕತ್ತು ಹಿಸುಕುವ ಈ ಪ್ರಯತ್ನ ನಡೆದಿದೆ. ಜಿಲ್ಲಾ ಪರಿಷತ್ ವ್ಯವಸ್ಥೆಯ ಜನಕರಾದ ಜನತಾದಳ ಇಷ್ಟು ದಿನಗಳವರೆಗೂ ಹೆಚ್ಚಿನ ಪ್ರಯತ್ನವನ್ನೇನೂ ಮಾಡದರೆ ಈಗಲಾದರೂ ಧರಣಿ ಸತ್ಯಾಗ್ರಹ ಹೂಡಿದ್ದಾರೆ. ಆದರೆ ಈ ಜಿಲ್ಲಾ ಪರಿಷತ್ ವ್ಯವಸ್ಥೆಯ ಜೀವ ಹರಣದ ಈ ಪ್ರಯತ್ನವನ್ನೇ ಆಮೂಲಾಗ್ರವಾಗಿ ವಿರೋಧಿಸುವ ಬದಲು ವಿಧಾಸಭೆ--ವಿಧಾನ ಪರಿಷತ್‌ಗಳ ಜಂಟಿ ಪರಿಶೀಲಕ ಸಮಿತಿಗೊಪ್ಪಿಸಬೇಕು ಎಂದು ಕೇಳುತ್ತಿದ್ದಾರೆ. ಮತ್ತೂ ಕೆಲವರು ತಿದ್ದುಪಡಿ ತರುವ ಮೊದಲು ಜಿಲ್ಲಾ ಪರಿಷತ್‌ಗಳು ಒಂದು ಅವಧಿಯನ್ನಾದರೂ ಮುಗಿಸಲು ಬಿಡಿ ಎಂದು ದೈನಾಸಪಡುತ್ತಿದ್ದಾರೆ. ಈ ಎಲ್ಲಾ ಪ್ರಯತ್ನಗಳಲ್ಲಿ ವಿವಿಧ ಜಿಲ್ಲೆಗಳ ಜಿಲ್ಲಾ ಪರಿಷತ್ ಸದಸ್ಯರು ಮಾಡುತ್ತಿರುವ ಪ್ರತಿಭಟನೆಯ ಪ್ರಯತ್ನ ಶ್ಲಾಘನೀಯವಾದದ್ದು.


ಮೈಸೂರು ಜಿಲ್ಲಾ ಪರಿಷತ್‌ನ ಎಲ್ಲಾ ಸದಸ್ಯರ ರಾಜೀನಾಮೆ--ಕಾಂಗ್ರೆನ 26 ಸದಸ್ಯರೂ ಸೇರಿ--ಇದು ರಾಜ್ಯದ ಜನತೆಯ ಭಾವನೆಗಳನ್ನು ಪ್ರತಿನಿಧಿಸುತ್ತದೆ. ಕಾಂಗ್ರೆಯೊಳಗೆ ಕೆಳಮಟ್ಟಗಳಲ್ಲಿರುವ ಅಧಿಕಾರ ವಿಕೇಂದ್ರೀಕರಣದ ಪರ ಇರುವ ಸದಸ್ಯರ ಕೂಗು ಇಲ್ಲಿ ಪ್ರತಿಧ್ವನಿತವಾಗಿದೆ.

ಮೈಸೂರು ಜಿಲ್ಲಾ ಪರಿಷತ್‌ನ ಸದಸ್ಯರೆಲ್ಲರಿಗೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ ಕಾಂಗ್ರೆನ ಜಿಲ್ಲಾ ಪರಿಷತ್ ಸದಸ್ಯರು ಹಾಗೂ ಜಿಲ್ಲಾ ಪರಿಷತ್ ದಲ್ಲಿ ವಿರೋಧ ಪಕ್ಷದ ನಾಯಕರು ಇದನ್ನು ಅವರದೇ ಪಕ್ಷದ ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ಹೇಳಿದ್ದಾರೆ.

ಕನ್ನಡ ಪ್ರಭ ಪತ್ರಿಕೆಯಲ್ಲಿ ವರದಿಯಾಗಿರುವ ಈ ಸಂವಾದ ಪಾಠವನ್ನು ಪುಟ 4 ರಲ್ಲಿ ಕೊಡಲಾಗಿದೆ. ಜಿಲ್ಲಾ ಪರಿಷತ್ ವ್ಯವಸ್ಥೆ ತಿದ್ದುಪಡಿ ಮಾಡುವಾಗ ಕೇವಲ ಕಾಂಗ್ರೆ ಶಾಸಕರ ಅಬಿಪ್ರಾಯವನ್ನು ಮಾತ್ರ ಅಲ್ಲ ನಮ್ಮ ಅಭಿಪ್ರಾಯವನ್ನು ಕೇಳಬೇಕು ಎಂದು ಒತ್ತಾಯಿಸಿರುವ ಈ ಸದಸ್ಯರು ಕಾಂಗ್ರೆ ಪಕ್ಷದ ಒಳಗೆ ಎಂದೂ ಇರದ ಪ್ರಜಾಸತ್ತಾತ್ಮಕ ಸಮಾಲೋಚನೆಯ ಹಕ್ಕಿಗಾಗಿ ಒತ್ತಾಯಿಸುತ್ತಿದ್ದಾರೆ, ಪ್ರತಿಭಟಿಸುತ್ತಿದ್ದಾರೆ. ಈ ಪ್ರತಿಭಟನೆ ಕೇವಲ ಮೈಸೂರಿನ ಜಿಲ್ಲಾ ಪರಿಷತ್‌ಗೆ ಸೀಮಿತವಾಗಿ ಉಳಿಯುವ ಲಕ್ಷಣಗಳಿಲ್ಲ.

ಜನತೆ 80-83ರವರೆಗೆ ವಿವಿಧ ಚಳುವಳಿಗಳ ಮೂಲಕ ಗಳಿಸಿದ ಪ್ರಜಾಸತ್ತೆಯ ವಿಸ್ತರಣೆಯ ಲಾಭವನ್ನು ಸುಮ್ಮನೆ ಬಿಟ್ಟು ಕೊಡುವುದಿಲ್ಲ. ಇಲ್ಲಿನ ಜಿಲ್ಲಾ ಪರಿಷತ್ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಅಧಿಕಾರ ಮದವೇರಿದ ಜನ ತಮ್ಮ ಭಾನಗಡಿ ನಡೆಸಿಲ್ಲವೆಂಬುದೂ ಇದರ ಅಭಿಪ್ರಾಯವಲ್ಲ. ಆದರೆ ಜಿಲ್ಲಾ ಪರಿಷತ್ ವ್ಯವಸ್ಥೆಯ ಲೋಪದೋಷಗಳನ್ನು ತಿದ್ದಿ ಅದನ್ನು ಜನತೆಯ ಕೈಯಲ್ಲಿ ಪ್ರಜಾಸತ್ತಾತ್ಮಕ ನಿಯಂತ್ರಣದ ಉತ್ತಮ ಸಾಧನವಾಗಿಸುವ ಬದಲು ಉತ್ತಮಗೊಳಿಸುತ್ತೇವೆ ಎಂದು ಹೇಳುತ್ತಾ ಜನತೆಯ ಕೈಗೆ ಸಿಕ್ಕ ಅಲ್ಪ ಸ್ವಲ್ಪ ಅಧಿಕಾರವನ್ನು ಕಸಿದುಕೊಳ್ಳುವುದನ್ನು ಜನತೆ ಸಹಿಸುವುದಿಲ್ಲ.

ಜನತಾದಳ ಅಧಿಕಾರ ವಿಕೇಂದ್ರೀಕರಣ ಕೇವಲ ತಮ್ಮ ತವ್ಮೊಳಗಿನ ವ್ಯಾಜ್ಯವಾಗಿಸದೆ ಇತರ ಸಮಾನ ಅಭಿಪ್ರಾಯದ ಎಡ-ಜಾತ್ಯಾತೀತ ಪಕ್ಷಗಳ ಜೊತೆ ಸೇರಿ ಜನತೆಯ ಹಕ್ಕಿನ ಪ್ರಶ್ನೆಯಾಗುವಂತೆ ಹೋರಾಟ ನಡೆಯುತ್ತದೆ ಎಂದು ನಿರೀಕ್ಷಿಸುತ್ತೇವೆ.



ಡಿಸೆಂಬರ್ 6: ಮಹತ್ವದ ಹೆಜ್ಜೆಯಾಗಲಿ

ದೇಶದ ರಾಜಕೀಯದಲ್ಲಿ ಆಕ್ರಮಣಕಾರಿ ಕೋಮುವಾದದ ಅಪಾಯಕಾರಿ ಪ್ರವೃತ್ತಿ ಬೆಳೆಯುತ್ತಿದೆ. ದೇಶದ ಐಕ್ಯತೆ ರಕ್ಷಣೆಗೆ ಬಿ.ಜೆ.ಪಿ., ಜಾತ್ಯಾತೀತಶಕ್ತಿಗಳ ದೀರ್ಘಕಾಲದ ಪ್ರಯತ್ನಗಳನ್ನು ಬುಡಮೇಲು ಮಾಡಲು ತೀವ್ರ ಯತ್ನ ನಡೆಸುತ್ತಿದೆ. ಇದುವರೆಗೂ ಬಿಜೆಪಿ ಮಾತಿನಲ್ಲಾದರೂ ಜಾತ್ಯತೀತತೆಯ ರಾಗ ಹಾಡುತ್ತಿತ್ತು. ಜಾತ್ಯತೀತತೆಗೆ ತನ್ನದೇ ಅರ್ಥ ಕಟ್ಟಿದ್ದರೂ. ಒಂದು ರಾಜಕೀಯ ಪಕ್ಷ ಬಿ.ಜೆ.ಪಿ.ಗೂ, ಆರ್.ಎಸ್.ಎಸ್, ವಿ.ಹೆಚ್.ಪಿ.ಯಂತಹ ನೇರ ಕೋಮುವಾದಿ ಸಂಘಟನೆಗಳಿಗೂ ಮೇಲ್ನೋಟಕ್ಕೆ ಇರುವ ವ್ಯತ್ಯಾಸವೂ ಈಗ ಮಾಯವಾಗಿದೆ. ಅಯೋಧ್ಯೆಯಲ್ಲಿ ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ.ಅಡ್ವಾನಿಬಹಿರಂಗವಾಗಿ ಆರ್.ಎಸ್.ಎಸ್.,ವಿ.ಹೆಚ್.ಪಿ.ಯ ಕೋಮುವಾದಿ ವೇದಿಕೆಯಿಂದ ಮಾತನಾಡಿದರು. ಬೆಂಗಳೂರು ಮತ್ತಿತರ ಕಡೆಗೆ ಅದನ್ನು ಮುಂದುವರೆಸುತ್ತಿದ್ದಾರೆ.ಆರ್.ಎಸ್.ಎಸ್.ನ 'ಹಿಂದೂ ರಾಷ್ಟ್ರ'ತನ್ನ ನಿಲುವು ಎಂದು ಸಾರಲು ಅವರೀಗ ಹಿಂಜರಿಯುತ್ತಿಲ್ಲ. ಭಾರತೀಯ ಸಂಸ್ಕೃತಿಗೆ ಇತರ ಧಾರ್ಮಿಕ ಗುಂಪುಗಳ ಕಾಣಿಕೆಯನ್ನು ಒಪ್ಪಲೂ ಅವರೀಗ ಸಿದ್ಧರಿಲ್ಲ.

ಬಿ.ಜೆ.ಪಿ.ಯಾಗಿ ಅವತರಿಸಿದಾಗ ಇಟ್ಟುಕೊಂಡಿದ್ದ ಗಾಂಧೀ ಸಮಾಜವಾದದ ಗುರಿ ಈ ಮೂರು ವರ್ಷಗಳಲ್ಲಿ ಹಿಂದೂ ಕೋಮುವಾದದತ್ತ ಧಾವಿಸಿದೆ. ಸೋಮನಾಥಪುರದಿಂದ ಆರಂಭಿಸಿದ ರಥಯಾತ್ರೆ, ಅಯೋಧ್ಯೆಯಿಂದ ಆರಂಭಿಸಿರುವ ಪ್ರಚಾರಯಾತ್ರೆ ಈ ಧಾವಂತವನ್ನು ಪೂರ್ಣಗೊಳಿಸಿದೆ.

ಬಿ.ಜೆ.ಪಿ., ವಿ.ಹೆಚ್.ಪಿ. ನಮ್ಮ ಸಮಾಜದಲ್ಲಿ ವಿಷ ಹರಡುತ್ತಿದೆಯೆಂಬುದರ ಬಗ್ಗೆ ಇನ್ನೂ ಸಂಶಯವುಳಿದಿದ್ದರೆ ಅಂತಹವರು ಈ ಸಂಘಟನೆಗಳು ಶ್ರೀರಾಮನ ಹೆಸರೆತ್ತಿ ಕೇಳಿಸುತ್ತಿರುವ, ತೋರಿಸುತ್ತಿರುವ ಕ್ಯಾಸೆಟ್, ವಿಡಿಯೋಗಳನ್ನು ನೋಡಿದರೆ ಅಳಿದುಳಿದ ಸಂಶಯವೂ ಮಾಯವಾಗುತ್ತದೆ.

ಜಾತ್ಯತೀತ ಶಕ್ತಿಗಳು ಈ ಕೋಮುವಾದೀ ಬೆದರಿಕೆಯನ್ನು ಸೂಕ್ತ ಪ್ರಮಾಣದಲ್ಲಿ ಎದುರಿಸುತ್ತಿಲ್ಲವಾದ್ದರಿಂದ ಪ್ರಪ್ನೆಯಲ್ಲಿ ಹಿಂದುಳಿದ ಜನ ವಿಭಾಗಗಳು ಅವರ ವಿಷ ಪ್ರಚಾರಕ್ಕೆ ಬಲಿಯಾಗುತ್ತಿವೆ. ದೇಶದ ಇಂದಿನ ಸಮಯಸಾಧಕ ರಾಜಕಾರಣವನ್ನು ಇದು ತೀವ್ರವಾಗಿ ಹೆಚ್ಚುತ್ತದೆ. ಆದರೆ ಎಲ್ಲಾ ಜಾತ್ಯತೀತ ಶಕ್ತಿಗಳೂ ಈ ಅಪಾಯದ ಅರಿವನ್ನು ಅರಿಯದಾಗಿವೆ. ಕೆಲವರಂತೂ ಅಧಿಕಾರದ ಆಸೆ-ಆಮಿಷ ಕುರುಡಾಗಿದೆ. ಇದು ದುರದೃಷ್ಟಕರ.

ಪ್ರಧಾನಮಂತ್ರಿ ಚಂದ್ರಶೇಖರ್ "ಮುಸ್ಲಿಂ ಸಮುದಾಯ ಮಸೀದಿಯಿರುವಲ್ಲೇ ದೇವಸ್ಥಾನ ಕಟ್ಟಲು ಒಪ್ಪಿದರೆ ನನಗೆ ಬಹಳ ಸಂತೋಷವಾಗುತ್ತದೆ" ಎಂದಿದ್ದಾರೆ. ಈ ವಿವಾದವನ್ನು ರಾಜಕೀಯಮಯಗೊಳಿಸಬೇಡಿ ಎಂದು ಬಿ.ಜೆ.ಪಿ.ಯನ್ನು ಮನವಿ ಮಾಡಿಕೊಂಡಿದ್ದಾರೆ!

ಇದು ಒಂದೋ ಚಂದ್ರಶೇಖರರ ಅಜ್ಞಾನವನ್ನು ಪ್ರದರ್ಶಿಸುತ್ತದೆ. ಇಲ್ಲವಾದರೆ ಅವರು ಬಿ.ಜೆ.ಪಿ., ವಿ.ಹೆಚ್.ಪಿ.ಯನ್ನು ತೃಪ್ತಿಗೊಳಿಸಲು ಯತ್ನಿಸುತ್ತಿದ್ದಾರೆ ಎಂದಾಗುತ್ತದೆ.

ಏಕೆಂದರೆ ಮುಸ್ಲಿಮರ ಆಕ್ಷೇಪವಿಲ್ಲದಿದ್ದರೆ ದೇವಸ್ಥಾನ ಕಟ್ಟಲು ಯಾರೂ ಬೇಡವೆನ್ನುವುದಿಲ್ಲ.ಖಂಡಿತವಾಗಿಯೂ ಯಾರೂ ಬೇಡವೆನ್ನುವುದಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ಬಿ.ಜೆ.ಪಿ., ವಿ.ಹೆಚ್.ಪಿ.ಯ ನಿಲುವಿನ, ಹಿಂಸಾತ್ಮಕ ಪ್ರದರ್ಶನ, ಹೊಲಸು ಘೋಷಣೆಗಳ ಮೂಲಕ ಅಲ್ಪಸಂಖ್ಯಾತರಲ್ಲಿ ಭಯ ಹುಟ್ಟಿಸಿ ಬಗ್ಗಿಸಬಯಸುವ ನಿಲುವಿನ ಬಗ್ಗೆ ಅವರು ಚಕಾರವೆತ್ತಿಲ್ಲ! ಕಳೆದ ಮೂರು ತಿಂಗಳ ಬಿ.ಜೆ.ಪಿ.ಯ ಭರಾಟೆಯ ನಂತರ 'ರಾಜಕೀಯವಾಗಿಸಬೇಡಿ' ಎಂಬ ಮನವಿ ಯಾರನ್ನು ನಂಬಿಸಲಿಕ್ಕಾಗಿ?. "ಮುಸ್ಲಿಮರ ಆತ್ಮಗೌರವಕ್ಕೆ ಕುಂದು ತರುವುದಿಲ್ಲವೆಂದು ಆಶ್ವಾಸನೆ ನೀಡಿ"ಎಂದು ಅದೇ ಅಡ್ವಾಣಿಯವರನ್ನು ಪ್ರಧಾನಿಗಳು ವಿನಂತಿಸುತ್ತಾರೆಯೇ ಹೊರತು ತಾನು ಆ ಬಗ್ಗೆ ಭರವಸೆ ನೀಡುತ್ತಿಲ್ಲ!

ಸಾಲದ್ದಕ್ಕೆ ಹಿಂದೂ ಧರ್ಮದ 'ಶ್ರೇಷ್ಠತೆ'ಯನ್ನು ಅವರು ಸಾರಲಾರಂಭಿಸಿದ್ದಾರೆ! ನವೆಂಬರ್ 16 ರಂದು ಸಂಸತ್ತಿನ ಚರ್ಚೆಯಲ್ಲಿ "ನಮಗೆ ಸಹೃದಯವಿದೆ, ಸಹನೆಯಿದೆ, ಇದು ನಮ್ಮ ಹಿಂದೂ ಧರ್ಮದ ಶ್ರೇಷ್ಠತೆ"ಎಂದಿದ್ದಾರೆ. ಯಾವ ಧರ್ಮ ಶ್ರೇಷ್ಠವೆಂಬ ಬಗ್ಗೆ ತನ್ನದೇ ಅಭಿಪ್ರಾಯ ಹೊಂದಿರುವ ಸ್ವಾತಂತ್ರ್ಯ ಚಂದ್ರಶೇಖರ್‌ರವರಿಗಿದೆ. ಆದರೆ ಪ್ರಧಾನ ಮಂತ್ರಿಯಾಗಿ ಇಂತಹ ಹೇಳಿಕೆಗಳು ಅಪಾಯಕಾರಿ. ಅದೂ ರಾಮಜನ್ಮ ಭೂಮಿ - ಬಾಬ್ರಿಮಸೀದಿ ವಿವಾದ ಹಣ್ಣೊಡೆದಿರುವ ಈಗಿನ [illegible]

ಪುಟ [illegible]ಕ್ಕೆ

ದೇಶದ ಏಕತೆಗಾಗಿ ಕೈ ಜೋಡಿಸಿ ಜಾತ್ಯತೀತತೆ, ಪ್ರಜಾಪ್ರಭುತ್ವ ಉಳಿಸಿ

ಕಳೆದ ತಿಂಗಳು ಸಂಸತ್ತಿನ ಎರಡು ವಿಶೇಷ ಅಧಿವೇಶನಗಳು ನಡೆದವು. ನವೆಂಬರ್ 7ರಂದು ರಾಷ್ಟ್ರೀಯ ರಂಗ ಸರಕಾರದ ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ತಮ್ಮ ಸರಕಾರದ ವಿಶ್ವಾಸ ಗೊತ್ತುವಳಿ ಮಂಡಿಸಿದರು. ನವೆಂಬರ್ 16 ರಂದು ಕಾಂಗ್ರೆಸ್(ಐ) ಬೆಂಬಲಿತ ಜನತಾದಳ(ಎಸ್)ನ ಪ್ರಧಾನ ಮಂತ್ರಿ ಚಂದ್ರಶೇಖರ್ ತಮ್ಮ ಎರಡು ಸದಸ್ಯರ 'ಮಂತ್ರಿಮಂಡಳ'ದ ವಿಶ್ವಾಸ ಗೊತ್ತುವಳಿ ಮಂಡಿಸಿದರು. ಇವೆರಡೂ ಸಂಸತ್ ಅಧಿವೇಶನಗಳಲ್ಲಿ ಜನತಾದಳ ಹಾಗೂ ದೇಶದ ಜಾತ್ಯಾತೀತ ಶಕ್ತಿಗಳಿಗೆ ವಿಶ್ವಾಸ ಘಾತ ಬಗೆದ ಭಿನ್ನಮತೀಯರ, ಕಾಂಗ್ರೆಸ್(ಐ) ನ ಮತ್ತು ಬಿಜೆಪಿಯ ನಿಜ ಬಣ್ಣವನ್ನು ಬಯಲುಗೆಳೆಯುವ ಪ್ರಶ್ನೆಗಳನ್ನು ಸಿಪಿಐ(ಎಂ) ಪರವಾಗಿ ಮಾತನಾಡಿದ ಕಾಂ. ಸೋಮನಾಥ್ ಚಟರ್ಜಿ ಸದನದ ಸದಸ್ಯರ ಮುಂದಿಟ್ಟರು.

ಈ ಎರಡು ಭಾಷಣಗಳ ಆಯ್ದ ಅಂಶಗಳನ್ನು ಇಲ್ಲಿ ಕೊಡಲಾಗಿದೆ.

"ನಾವು ವಾಸ್ತವವಾಗಿ ಕೇಳುತ್ತಿರುವುದು ಅಂಬಾನಿ, ಹಿಂದುಜಾಗಳ ಹೆಜ್ಜೆಸಪ್ಪಳವನ್ನು"

ನವೆಂಬರ್ 7

ಪ್ರಧಾನಮಂತ್ರಿಗಳು ಮಂಡಿಸಿರುವ ವಿಶ್ವಾಸ ನಿರ್ಣಯವನ್ನು ನಾವು ಬೆಂಬಲಿಸುತ್ತೇವೆ. ಏಕೆಂದರೆ ಈ ನಿರ್ಣಯದ ವಿರುದ್ಧ ಮತ ನೀಡುವುದೆಂದರೆ ದೇಶದಲ್ಲಿ ಜಾತ್ಯಾತೀತತೆಯ ವಿರುದ್ಧ ಮತ ನೀಡಿದಂತೆ. ಕೋಮುವಾದಿ ಮತ್ತು ಸಂಕುಚಿತ ಕಾರಣಗಳಿಗಾಗಿ ಈ ದೇಶದವಿಘಟನೆಗೆ ಮತ ನೀಡಿದಂತೆ ಎಂಬ ಭಾವನೆ ನಮ್ಮದು. ಈ ಸದನದಲ್ಲಿರುವ ಬಹುಸಂಖ್ಯಾತ ಸದಸ್ಯರು ರಾಜೀವ್‌ಗಾಂಧಿ ಕಾಂಗ್ರೆಸ್ ಸರ್ಕಾರವನ್ನು ಉದ್ದೇಶಪೂರ್ವಕವಾಗಿ ಸೋಲಿಸಿದ ಜನರ ಬೆಂಬಲದಿಂದ ಬಂದವರು.ಇತರ ಪಕ್ಷಗಳೂ ಬೆಂಬಲಿಸಿರುವ ರಾಷ್ಟ್ರೀಯರಂಗ ಪ್ರಣಾಳಿಕೆಯ ಆಧಾರದ ಮೇಲೆ ಒಂದು ಸರ್ಕಾರವನ್ನು ಅಧಿಕಾರಕ್ಕೆ ತಂದ ಜನರ ಬೆಂಬಲದಿಂದ ಬಂದವರು....

ಅದ್ವಾಣಿಯವರ ರಥ ಮುಂದೆ ಸಾಗಲು, ವಿವಾದಗ್ರಸ್ತ ನೆಲದ ಮೇಲೆ ದೇವಸ್ಥಾನ ಕಟ್ಟಲು ಶ್ರೀಯುತ ಚಂದ್ರಶೇಖರ್ ಅವಕಾಶ ನೀಡುವರೆ ಎಂದು ನಾನು ತಿಳಿಯಬಯಸುತ್ತೇನೆ. ಅವರೇನು ಮಾಡಬಯಸುತ್ತಾರೆ? ಕಾಂಗ್ರೆಸ್(ಐ)ಇದಕ್ಕೆ ಅನುಮತಿ ನೀಡುತ್ತದೆಯೇ‌ಇಲ್ಲವೇಎಂದೂ ನಾನು ತಿಳಿಯಬಯಸುತ್ತೇನೆ. ಈ ನಿರ್ಣಯದ ವಿರುದ್ಧ ಮತ ನೀಡುವುದೆಂದರೆ ಅವರು ಈ ಬಗ್ಗೆ ಆಯ್ಕೆಮಾಡಿಕೊಂಡಿದ್ದಾರೆ ಎಂದಾಯಿತು.ಕಾಂಗ್ರೆಸ್(ಐ), ವಿವಾದಗ್ರಸ್ತ ನೆಲದ ಮೇಲೆಅವರು ದೇವಸ್ಥಾನ ಕಟ್ಟಲುಅನುಮತಿ ನೀಡಲು ನಿರ್ಧರಿಸಿದ್ದಾರೆ ಎಂದಾಯಿತು. ಇಲ್ಲವಾದರೆ ದೇವಸ್ಥಾನ ಕಟ್ಟುವ ಪ್ರಶ್ನೆಯಿಂದ ಉಂಟಾದ ಸನ್ನಿವೇಶವನ್ನು ಇಂದು ಎದುರಿಸುತ್ತಿರುವ ಸರಕಾರವನ್ನೇಕೆ ಅವರು ವಿರೋಧಿಸಬೇಕು?....

ಶ್ರೀಯುತ ಚಂದ್ರಶೇಖರ್‌ರವರು ಇತರರಿಂದ ಬೆಂಬಲ ಕೋರಿದ್ದಾರೆ. ಡ್ರೈವರ್ ಅಸಮರ್ಥ ಎನ್ನುತ್ತಾರೆ ಅವರು. ಆದರೆ ಇದು ಒಂದು ಜೀಪಿನ, ಟ್ರಾಲಿಯ ಅಥವಾ ಟ್ರೈಲರ್‌ನ ಪ್ರಶ್ನೆಯಲ್ಲ. ಪ್ರಶ್ನೆ -ಅವರು ಮುಂದಿನ ಸರಕಾರ ಮಾಡಿದರೆ ಅದರ ಡ್ರೈವರ್ ಯಾರು?ಅವರ ಕೈಯಲ್ಲಿ ಸ್ಟಿಯರಿಂಗ್ ಇರಬಹುದು, ಕ್ಲಚ್ ಗೇರ್‌ಗಳು ಯಾರ ಹತೋಟಿಯಲ್ಲಿರುತ್ತವೆ?

ಅದ್ವಾಣಿಯವರನ್ನು ನಾನು ಕೇಳಬಯಸುತ್ತೇನೆ. ರಾಮಾಯಣದ ರಾಮರಥ ರಾವಣನನ್ನು, ದುಷ್ಟಶಕ್ತಿಗಳ ಅವತಾರಗಳಾದ ರಾಕ್ಷಸರನ್ನು ಸಂಹಾರಮಾಡಲು ಲಂಕೆಗೆ ಹೋಯಿತು ಎಂದು ತಾವೂ ರಾಮರಥ ಹೊರಡಿಸಲು ನಿರ್ಧರಿಸಿದರು-ಆದರೆ ಅವರ ರಥಯಾತ್ರೆ ಯಾರ ಸಂಹಾರಕ್ಕೆ? ಆ ಮೂಲಕ ಕೋಮುವಾದ ಎಂಬ ರಾವಣನನ್ನು, ಕಾಂಗ್ರೆಸ್ ಎಂಬ ರಕ್ಕಸರನ್ನು ಪುನರುಜ್ಜೀವನಗೊಳಿಸಿದಂತಾಗಲಿಲ್ಲವೆ?.....

ಇದೊಂದು ಮೂಲಭೂತ ಪ್ರಶ್ನೆ-- ದೇಶ ಒಂದಾಗಿ ಐಕ್ಯತೆಯಿಂದ ಉಳಿಯುವುದೇ, ನಮ್ಮ ಜಾತ್ಯಾತೀತ ಸ್ವರೂಪವನ್ನು ಉಳಿಸಿಕೊಳ್ಳುವುದೇ, ಅಥವಾ ಧರ್ಮದ ಆಧಾರದ ಮೇಲೆ ಒಡೆದುಹೋಗಬೇಕೇ?....

ಇಂದು ನಾವೇನು ಕಾಣುತ್ತಿದ್ದೇವೆ? ಬಿ.ಜೆ.ಪಿ.,ಕಾಂಗ್ರೆಸ್(ಐ) ಮತ್ತು ಭಿನ್ನಮತೀಯರ ಗುಂಪೊಂದು ಜಾತ್ಯಾತೀತತೆಯ ಮೇಲಿನ ವಿಶ್ವಾಸಮತವನ್ನು ವಿರೋಧಿಸುತ್ತಿದ್ದಾರೆ. ಹಾಗಿದ್ದರೆ ಬಿ.ಜೆ.ಪಿ., ಕಾಂಗ್ರೆಸ್(ಐ). ನಡುವೆ ವ್ಯತ್ಯಾಸವೇನು? ನಮಗೇನೂ ವ್ಯತ್ಯಾಸ ಕಾಣುವುದಿಲ್ಲ. ಬದಲಾಗಿ ಇಂದು ಕುತೂಹಲಕಾರಿ ಐಕ್ಯತೆ ಕಾಣುತ್ತದೆ- ಬಿ.ಜೆ.ಪಿ.,ಕಾಂಗ್ರೆಸ್(ಐ) ನಡುವೆ ಕಾರ್ಯತ: ಐಕ್ಯತೆ....

ಶ್ರೀ ಚಂದ್ರಶೇಖರ್ ಇಲ್ಲಿದ್ದರೆ ನಾನೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ- ಕಾಂಗ್ರೆಸ್ ಸರಕಾರ 'ಶಿಲಾನ್ಯಾಸ'ಕ್ಕೆ ಅನುಮತಿ ನೀಡಲು ನಿರ್ಧರಿಸಿದ ಬಗ್ಗೆ ಅವರೇನು ಹೇಳುತ್ತಾರೆ? ನಿಜ-ಕಾಂಗ್ರೆಸ್ ಕೂಡಾ ಈ ಪ್ರಶ್ನೆಯನ್ನು ಉತ್ತರಿಸಬೇಕು. ಅವರೂ ಜಾತ್ಯತೀತತೆಯ ಕುರಿತು ಮಾತಾಡು ತ್ತಾರೆ. ಆದರೆ 'ಶಿಲಾನ್ಯಾಸ' ಕ್ಕೆ ಹೇಗೆ ಅನುಮತಿಯನ್ನು ನೀಡಿದರು, ಅಡಿಗಲ್ಲು ಹಾಕಲು ಏಕೆ ಬಿಟ್ಟರು?....

ರಥಯಾತ್ರೆ ನಿಲ್ಲಿಸಿ ಎಂದು ರಾಜೀವ್‌ಗಾಂಧಿ ಒತ್ತಾಯಿಸುತ್ತಾ ಬಂದರು. ರಥಯಾತ್ರೆ ನಿಲ್ಲಿಸಿದಾಗ ಸರ್ಕಾರವನ್ನು ಟೀಕಿಸಲಾರಂಭಿಸಿದರು....'ಕರಸೇವಕ' ರು 'ಕರಸೇವೆ' ಮುಂದುವರಿಸುವುದಾಗಿ ಬೆದರಿಕೆ ಹಾಕಿದರು. ಈಗ ಇದ್ದಕ್ಕಿದ್ದಂತೆ ಜನತಾದಳ ಇಬ್ಭಾಗವಾಯಿತು ಎಂದಾಗ ಅದನ್ನು ಹಿಂತೆಗೆದುಕೊಂಡರು.

ಯಾರಿಗಾಗಿ ಅವರು ಈ ನಾಟಕ ಮಾಡುತ್ತಿದ್ದರು? ಯಾರೊಂದಿಗೆ ಅವರು ಪಿತೂರಿ ನಡೆಸಿದ್ದರು? ಏಕೆ 'ಕರಸೇವೆ' ಹಿಂತೆಗೆದುಕೊಂಡು ದೇವರ ದರ್ಶನ ಮಾಡಿ ತಣ್ಣಗೆ ಹೊರಟು ಹೋಗಲುನಿರ್ಧರಿಸಿದರು?

ನಾವೆಂದೂ ಈ ದೇಶದ ಐಕ್ಯತೆ, ಸಮಗ್ರತೆಯ ಪ್ರಶ್ನೆಯಲ್ಲಿ, ಈ ದೇಶದ ಜಾತ್ಯತೀತತೆಯ ಪ್ರಶ್ನೆಯಲ್ಲಿ ರಾಜಿಮಾಡಿಕೊಳ್ಳಲಿಲ್ಲ. ಮುಂದೆಂದೂ ರಾಜಿಮಾಡಿಕೊಳ್ಳುವವರಲ್ಲ. ಆದ್ದರಿಂದಲೇ ಇಂದು ಈ ದೇಶದ ಜಾತ್ಯತೀತತೆಯ ಸತ್ವಪರೀಕ್ಷೆಯ ಸಂಧರ್ಭದಲ್ಲಿ ಈ ನಿರ್ಣಯವನ್ನು ನಾವು ಬೆಂಬಲಿಸುತ್ತಿದ್ದೇವೆ. ಸಂವಿಧಾನದ ಮಾತುನಡೆಯುತ್ತದೋ ಇಲ್ಲವೋ ಎಂಬ ಪರೀಕ್ಷೆಯ ದಿನ ಇಂದು. ಕೋಮು ಸೌಹಾರ್ದ ಮತ್ತು ಸಾಮರಸ್ಯ ಉಳಿಯಬೇಕೇ ಬೇಡವೇ ಎಂಬ ಪರೀಕ್ಷೆಯ ದಿನ ಎಂದು. ಕಾನೂನಿನ ಶಾಸನ ನಡೆಯುತ್ತದೋ ಇಲ್ಲವೋ ಎಂಬ ಪರೀಕ್ಷೆಯ ದಿನ ಇಂದು.

ಇಂದು ಅಧಿಕಾರದ ಹಸಿವು ನಮ್ಮ ದೇಶದ ಮೂಲಭೂತ ಮೌಲ್ಯಗಳನ್ನು ಮರೆಗೆ ತಳ್ಳಿದೆ ಎಂದು ನಮಗೆ ಗೊತ್ತಿದೆ. ಇಂದು ಈ ದೇಶದ ಅತ್ಯುನ್ನತ ಸ್ಥಾನಗಳನ್ನೇರುವ ಆಸೆಯಿಟ್ಟುಕೊಂಡವರು ಈ ಪ್ರಶ್ನೆಯನ್ನು ಪರಿಹರಿಸಲು ಯಾವುದೇ ಪ್ರಯತ್ನ ನಡೆಸಿದ್ದು ಕಂಡುಬಂದಿಲ್ಲ. ಕಾಂಗ್ರೆಸ್(ಐ) ಕೂಡಾ ಯಾವುದೇ ಪ್ರಾಮಾಣಿಕ ಪ್ರಯತ್ನ ನಡೆಸಿದ್ದು ಕಂಡು ಬಂದಿಲ್ಲ.

ಶ್ರೀ ಚಂದ್ರಶೇಖರ್ ತಾನು ದೇಶದ ಆರ್ಥಿಕದ ಮೇಲೆ ಬಹುರಾಷ್ಟ್ರೀಯ ಕಂಪನಿಗಳ, ಬಂಡವಾಳಶಾಹಿಗಳಹತೋಟಿಗೆ ವಿರುದ್ಧವಾಗಿದ್ದೇನೆ ಎಂದು ಹೇಳಿರುವುದು ತಮಾಷೆಯೆನಿಸುತ್ತದೆ. ಇದಕ್ಕೆ ಕಾರಣರು ಯಾರು? ಅವರು ಯಾರತ್ತ ಕೈಚಾಚಿದ್ದಾರೋ ಆ ಕಾಂಗ್ರೆಸ್(ಐ) ಬಹುಶ: ಇಂದು ಬಂಡವಾಳಶಾಹಿಯನ್ನು, ಬಹುರಾಷ್ಟ್ರೀಯ ಕಂಪೆನಿಗಳನ್ನು ಎದುರಿಸಲು ಅವರು ಒಂದಾಗಿದ್ದಾರೆ!....

ಜನ ಬುದ್ಧಿಗೇಡಿಗಳಲ್ಲ. ರಾಮ ಮಂದಿರದ ಪ್ರಶ್ನೆಯನ್ನು ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರಲು ಉಪಯೋಗಿಸಲಾಗುತ್ತಿದೆ ಎಂದು ಅವರಿಗೆ ಇಂದು ಅರ್ಥವಾಗಿದೆ. ಶ್ರೀಯುತ ಅದ್ವಾಣಿಯವರಕೆಲಸಗಳಿಂದ ಅತೀ ಹೆಚ್ಚು ಲಾಭ ಗಿಟ್ಟಿಸುವವರೆಂದರೆ ಸ್ವಾತಂತ್ರ್ಯದ ನಾಲ್ಕು ದಶಕಗಳಿಂದ ಜನರಿಗೆ ವಂಚನೆ ಮಾಡಿದ ಕಾಂಗ್ರೆಸ್(ಐ).

ಈ ನಿರ್ಣಯ ಸೋತರೆ ಅಲ್ಪಸಂಖ್ಯಾತರಪರವಾಗಿ ದೃಢವಾಗಿ ನಿಂತದ್ದಕ್ಕಾಗಿ ಈ ಸರಕಾರ ಬೀಳಿಸಿದರೆಂಬ ಸಂದೇಶ ಹೋಗುತ್ತದೆ. ಚೌಧುರಿ ದೇವೀಲಾಲರೇ, ಇದರಿಂದ ದೇಶದ ಜಾತ್ಯತೀತತೆ, ಐಕ್ಯತೆ,ಸಮಗ್ರತೆಗೆ ಒಳಿತಾಗುತ್ತದೆಯೇ?....

....ಈ ನಾಯಕತ್ವದ ಪ್ರಶ್ನೆಯನ್ನು ನಿಮ್ಮ ಪಕ್ಷದೊಳಗೇ ಸೂಕ್ತ ಸಮಯದಲ್ಲಿ ಎತ್ತಿ ಪರಿಹರಿಸಲೂಬಹುದಾಗಿತ್ತು. ಆದರೆ ಚೌಧುರೀ ದೇವೀಲಾಲರೇ, ಈ ನಾಯಕತ್ವದ ಪ್ರಶ್ನೆ ದೇಶದ ಎಲ್ಲಾಹಿತಾಸಕ್ತಿಗಳಿಗೂ ಮೀರಿದ್ದೇನು?....

ತಾನೇ ಸರಕಾರ ರಚಿಸುವ ಧೈರ್ಯವಿಲ್ಲದ ಕಾಂಗ್ರೆಸ್(ಐ) ಶ್ರೀ ಚಂದ್ರಶೇಖರ್ ಮೂಲಕ ಪ್ರಯೋಜನ ಪಡೆದು ಬೋಫೋರ್ಸ್ ಮತ್ತಿತರ ಹಗರಣಗಳ ವಿಚಾರಣೆಗಳ ಗೋಣು ಮುರಿಯಲು ಯತ್ನಿಸುತ್ತಿದೆ. ಇದೇ ಅವರ ನಿಜವಾದ ಉದ್ದೇಶ. ನಾವೀಗ ಇಲ್ಲಿ ನೋಡುತ್ತಿರುವುದೇನೋ ರಾಜೀವ್‌ಗಾಂಧೀ ನೇತೃತ್ವದಲ್ಲಿ ಸುಪರಿಚಿತ ಮುಖಗಳು. ಅವರಿಂದು ಬಹಳ ಆನಂದದಿಂದಿದ್ದಾರೆ. ಆದರೆ ನಾವು ವಾಸ್ತವವಾಗಿ ಕೇಳುತ್ತಿರುವುದು ಅಂಬಾನಿಗಳ, ಹಿಂದುಜಾಗಳ ಹೆಜ್ಜೆ ಸಪ್ಪಳಗಳು.... ಚೌಧುರಿ ದೇವೀಲಾಲ್ ಹಾಗೂ ಚಂದ್ರಶೇಖರ್‌ರಂತಹ ಮುತ್ಸದ್ದಿಗಳು ಅವರ ಕಾನೂನು ಬಾಹಿರ ಗುರಿಗಳಿಗೆ ಕಾನೂನು ಬದ್ಧತೆ ನೀಡುತ್ತಿರುವುದು ದುರದೃಷ್ಟಕರ.

ಅಧಿಕಾರದ ಹಸಿವು ನಮ್ಮ ದೇಶದ ಮೂಲಭೂತ ಮೌಲ್ಯಗಳನ್ನು ಮೂಲೆಗೆ ತಳ್ಳಿದೆ. ಈ ದೇಶದ ಅತ್ಯುನ್ನತ ಸ್ಥಾನಕ್ಕೇರುವ ಆಕಾಂಕ್ಷೆಯಿಟ್ಟುಕೊಂಡವರು ಈ ಪ್ರಶ್ನೆಯ ಪರಿಹಾರಕ್ಕೆ ಯಾವುದೇ ಪ್ರಯತ್ನ ನಡೆಸಿದ್ದು ಕಂಡುಬಂದಿಲ್ಲ. ಕಾಂಗ್ರೆಸ್(ಐ) ಯಾವುದೇ ಪ್ರಾಮಾಣಿಕ ಪ್ರಯತ್ನ ನಡೆಸಿದ್ದು ಕಂಡುಬಂದಿಲ್ಲ.

"ಚಂದ್ರಶೇಖರ್ ಯಾವ ಪ್ರಣಾಳಿಕೆ ಜ್ಯಾರಿ ಗೊಳಿಸುತ್ತಾರೆ?

ತನ್ನನ್ನು ಗೆಲ್ಲಿಸಿದ ಪ್ರಣಾಳ್ಳಿಕೆಯೋ? ಕಾಂಗ್ರೆಸ್ಸನ್ನು ಸೋಲಿಸಿದ ಪ್ರಣಾಳಿಕೆಯೋ?

ಎರಡು ಎಂಬ ಭವ್ಯ ಸಂಖ್ಯೆಯ, ಇಲಾಖೆಗಳು ಕೂಡಾ ನಮೂದಿಸಿಲ್ಲದ ಈ ಮಂತ್ರಿಮಂಡಲ ಎನಿಸಿಕೊಳ್ಳುತ್ತಿರುವುದರ ಮುಂದುವರಿಕೆ ಈ ದೇಶದ ಸಂಸದೀಯ ಪ್ರಜಾಪ್ರಭುತ್ವದ ಅಪಹಾಸ್ಯವಾಗುತ್ತದೆ, ಅದರ ಅಪಮೌಲ್ಯದ ಮುಂದುವರಿಕೆಯೂ ಆಗುತ್ತದೆ. ರಾಜಕೀಯ ಅನೈತಿಕತೆ, ಸಂವೈಧಾನಿಕ ಅಸಮಂಜಸತೆ ಹಾಗೂ ಈ ದೇಶದ ಜನತೆಗೆ ವಿಶ್ವಾಸಘಾತ ಈ ಸರಕಾರದ ಅಡಿಗಲ್ಲು.

ದೇಶದ ಹಿತಾಸಕ್ತಿ ಮರೆತು ವೈಯಕ್ತಿಕ ಆಕಾಂಕ್ಷೆ, ದುರಾಸೆ ಸರ್ವಾಧಿಕಾರೀ ಶಕ್ತಿಗಳಿಗೆ ಪೂರ್ಣ ಶರಣಾಗತಿಗೆ ಪ್ರಾಧಾನ್ಯ ನೀಡಿದ ರಾಜಕೀಯ ಸಮಯಸಾಧಕತೆಯ ಫಲ ಈ ಸರಕಾರ......................

ವಿ.ಪಿ.ಸಿಂಗ್‌ರ ದುರಾಡಳಿತದ ದುಷ್ಪಲದಿಂದ ದೇಶವನ್ನು ರಕ್ಷಿಸಲು ತಾನು ಹೊರಬಂದು ಕಾಂಗ್ರೆಸ್(ಐ) ಬೆಂಬಲ ಪಡೆದುದಾಗಿ ಪ್ರಧಾನ ಮಂತ್ರಿ ಹೇಳಿಕೊಂಡಿದ್ದಾರೆ. ಅವರಿಗೆ ನನ್ನದೊಂದು ಪ್ರಶ್ನೆ. ಹಾಗಿದ್ದರೆ ಇನ್ನೊಂದು ರೀತಿಯೇಕಾಗಬಾರದಿತ್ತು? ಈ ಸಂಸತ್ತಿನಲ್ಲಿರುವ ಅತೀ ದೊಡ್ಡ ಪಕ್ಷ ಆಡಳಿತದ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ರಾಜಕೀಯ ಧೈರ್ಯ ಹಾಗೂ ಪ್ರಾಮಾಣಿಕತೆ ಏಕೆ ತೋರಿಸಲಿಲ್ಲ? ಏಕೆ ಚಂದ್ರಶೇಖರ್ ಮತ್ತವರ ಬೆಂಬಲಿಗರು ಕಾಂಗ್ರೆಸ್ ಸರಕಾರವನ್ನು ಬೆಂಬಲಿಸಲು ನಿರ್ಧರಿಸಲಿಲ್ಲ?......................

ಚಂದ್ರಶೇಖರ್ ತಾನು ಯಾವುದರ ಮೇಲೆ ಗೆದ್ದು ಬಂದರೋ ಆ ರಾಷ್ಟ್ರೀಯರಂಗ ಪ್ರಣಾಳಿಕೆಯನ್ನ ಜಾರಿಗೆ ತರುತ್ತಾರೋ ಅಥವಾ ಚುನಾವಣೆಯಲ್ಲಿ ಅವರು ತನ್ನ ಎದುರಾಳಿ ಯಾವುದರ ಆಧಾರದ ಮೇಲೆ ಸೋತರೋ ಆ ಕಾಂಗ್ರೆಸ್(ಐ) ಪ್ರಣಾಳಿಕೆಯನ್ನೋ.....

"ಅಧಿಕಾರದತ್ತ ಸಾಗಿದ ರಾಜೀವಗಾಂಧಿಯ ದಾರಿ ದೆಹಲಿ, ಮತ್ತಿತರ ಕಡೆ ಗಂಡಸರ, ಹೆಂಗಸರ ಮಕ್ಕಳ ಹಿಂಸಾತ್ಮಕ ಸಾವಿನಿಂದ ತುಂಬಿದೆ. ಪಂಜಾಬ್ ಉರಿಯುವ ಬಾಣಲೆಯಾಗಿದೆ .ಇನ್ನೂ ದುರಾದೃಷ್ಟದ ಮಾತೆಂದರೆ ಹಿಂಸಾಚಾರದ ದುಸ್ವಪ್ನ ದೇಶದ ಇತರ ಹಲವು ಭಾಗಗಳಲ್ಲಿ ಹರಡಿದೆ.ಆತ ಅಧಿಕಾರಕ್ಕೆ ಬಂದಮೇಲೆ ಪ್ರತಿದಿನ ಹತ್ತಾರು ಮುಗ್ಧರ ಹತ್ಯಾಕಾಂಡಗಳಿಲ್ಲದ ದಿನಗಳಿಲ್ಲ." ಹೀಗೆಂದಿತ್ತು ರಾಷ್ಟ್ರೀಯರಂಗದ ಪ್ರಣಾಳಿಕೆ. ಚಂದ್ರಶೇಖರ್ ಕೂಡ ಈ ಅಭಿಪ್ರಾಯಕ್ಕೆ ಪ್ರಜ್ಞಾಪೂರ್ವಕವಾಗಿ ಬದ್ಧರಾಗಿದ್ದರು ಎಂಬ ವಿಶ್ವಾಸ ನನಗಿದೆ. ಈ ರೀತಿ ಕಾಂಗ್ರೇಸ್ ಸರಕಾರದ ಬಗ್ಗೆ ತೀರ್ಪು ನೀಡಿದ್ದ, ಅವರು ಈಗ ಯಾವ ಆಧಾರದ ಮೇಲೆ ಯಾವ ಪ್ರಣಾಳಿಕೆಯನ್ನು ಪಾಲಿಸುತ್ತಾರೆ ಎಂದು ಜನತೆಗೆ,ದೇಶಕ್ಕೆ ಹೇಳಬೇಕು...........

ತಾನು ಚುನಾಯಿತನಾದಾಗ ಇತ್ತ ವಚನಗಳನ್ನ ಪಾಲಿಸಲು ತಾನು ಬದ್ಧನಲ್ಲ ಎಂದು ಅವರೀಗ ಜನತೆಗೆ ಹೇಳುತ್ತಾರೆಯೇ.......

ಈ ಸರಕಾರ ಅಗಾಂಗಗಳಿಲ್ಲದ ಎರಡುತಲೆಯ ರಾಕ್ಷಸ-ಲಾಲ್‌ಕೃಷ್ಣಅದ್ವಾನಿ, ರಾಜೀವಗಾಂಧಿ ಮತ್ತು ಚಂದ್ರಶೇಖರ್ ಪ್ರತಿನಿಧಿಸುವ ಶಕ್ತಿಗಳ ಕೂಟದ ದುಷ್ಫಲ...

ಸಂವಿಧಾನದಲ್ಲಿ ಪಕ್ಷಾಂತರದ ಬಗ್ಗೆ ಸೇರಿಸುವಾಗ ಕಾಂಗ್ರೇಸ್‌ಪಕ್ಷ ತಾನು ದೇಶದ ರಾಜಕೀಯ ಜೀವನವನ್ನು ಸ್ವಚ್ಛಗೊಳಿಸುವುದಾಗಿ ಗಂಟಲು ಹರಿಯುವಂತೆ ಸಾರಿತ್ತು ,ಅದೇ ತಾನು ಈಗ ಕೇವಲ ತಮ್ಮ ಅಲ್ಪ ರಾಜಕೀಯ,ವೈಯುಕ್ತಿಕ ಆಸೆಈರಿಸಿ- ಕೊಳ್ಳಲು ಹಿಡಿಯಷ್ಟು ವ್ಯಕ್ತಿಗಳಿಗೆ ಸರಕಾರ ರಚಿಸಲು ನಾಚಿಕೆಇಲ್ಲದೆ ನೆರವು ಪ್ರೋತ್ಸಾಹ ನೀಡುತ್ತಿದ್ದಾರೆ! ಜನತೆಯ ತೀರ್ಪಿಗಿಂದಾಗಿ ಸಾಧಿಸಲಾಗದ್ದನ್ನ ಜನತೆಯ ತೀರ್ಪನ್ನು ಉಲ್ಲಂಘಿಸಿ ಸಾಧಿಸುತ್ತಿದ್ದಾರೆ!.....

ಜುಲೈ15.1979ರಂದು ಚಂದ್ರಶೇಖರ್ ಆಗಿನ ಜನತಾ ಪಕ್ಷದಿಂದರಾಜಿನಾಮೆ ನೀಡಿದವರನ್ನು ಟೀಕಿಸುತ್ತಾ "ಸರಕಾರ ಅವಿಶ್ವಾಸ ಗೊತ್ತುವಳಿ ಮಂಡಿಸುತ್ತಿದ್ದಾಗ ಪಕ್ಷ ತೊಂದರೆಯಲ್ಲಿದ್ದಾಗ ಅವರು ಬಿಟು ನೀಡಿದ್ದಾರೆ" ಎಂದಿದ್ದರು. ಜುಲೈ18 ರಂದು ಇನ್ನೊಂದು ಹೇಳಿಕೆಯಲ್ಲಿ "ಪಕ್ಷದ ಸಧ್ಯದ ಬಿಕ್ಕಟ್ಟು ಯಾವುದೇ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದಾಗಿ ಅಲ್ಲ, ಕೆಲವರ ವೈಯಕ್ತಿಕ ಆಕಾಂಕ್ಷೆಗಳಿಂ ದಾಗಿ ಇಂತಹ ಆಕಾಂಕ್ಷೆಗಳಿಲ್ಲದ ಹಲವರು ಕೂಡ ಇದಕ್ಕೆ ಬಲಿಯಾಗಿದ್ದಾರೆ" ಎಂದಿದ್ದರು.ಆಗ ಅವರು ಕೇವಲ ಮೂಲಭೂತ ನೀತಿಗಳನ್ನು ಪ್ರತಿಪಾದಿಸಿದ್ದರು. ಅದೀಗ ಯಾವುದೇ ರೀತಿಯಲ್ಲಿ ಬದಲಾಗಿದೆಯೇ ಎಂದು ನಾನವರನ್ನು ಕೇಳುತ್ತೇನೆ....

"ಇಂತಹ ಸರಕಾರ ರಚಿಸುವಾಗಲೆಲ್ಲ". ಹಿಂದಿನ ಸರಕಾರದ ದುರಾಡಳಿತದಿಂದ

ಪ್ರುಟ 8 ಕ್ಕೆ

ಸಫ್ದರ್ ಕನಸಿಗೆ ಜೀವ: ಸಹಮತ್ ಜನೋತ್ಸವ

ಮಂಗಳಪುರಿ ಹೊಕ್ಕರ ಸಾಕು ಗೋಡೆಯ ಮೇಲೆ ಕೊಕ್ಕರೆ ಕಾಲಿನಲ್ಲಿ ಗೀಚಿದ ಅಕ್ಷರಗಳು ಮೇಲೆ ಹಾರುತ್ತಿರುವ ವಿಮಾನ, ಹಸುರು ಚೆಲ್ಲಿದಮರಗಳು ಜುಳುಜುಳು ನದಿ ಕಾಣುತ್ತದೆ. ಪುಟಾಣಿ ಮಕ್ಕಳು ಗೋಡೆಯನ್ನೇ ಅಂಗಳವಾಗಿಸಿಕೊಂಡು ಬಣ್ಣ ತುಂಬುವುದರಲ್ಲಿ ನಿರತರಾಗಿದ್ದಾರೆ.

ಮತ್ತೊಂದು ಕಡೆ ಕೈಯಲ್ಲಾಮಣ್ಣಾಗಿಸಿಕೊಂಡು ಮಣ್ಣನ್ನೇ ತಿದ್ದಿ ತೀಡಿ ವಿಚಿತ್ರ ಆಕಾರ ನೀಡುತ್ತಿರುವವರು ಕಾಣುತ್ತಾರೆ.

ಒಂದೆಡೆ ಗೊಂಬೆ ಕುಣಿಸುವವರು, ಇನ್ನೊಂದೆಡೆ ವೀಡಿಯೋ ಚಿತ್ರ ತೆಗೆಯುತ್ತಿರುವವರು ಮತ್ತೊಂದೆಡೆ ಛಾಯಾಗ್ರಹಣ, ನೃತ್ಯ, ನಾಟಕ ಸಂಗೀತ ಜೊತೆಗೆ ಮಕ್ಕಳಿಗೆ ಅಚ್ಚುಮೆಚ್ಚಿನ ಆಟವನ್ನೂ ಇಲ್ಲಿ ಹೇಳಿಕೊಡಲಾಗುತ್ತಿದೆ.

ರಾತ್ರಿ ಇಣುಕಿ ಹಗಲು ಜಾರಿ ಹೋದದ್ದರ ಪರಿವೆಯೂ ಇಲ್ಲದಂತೆ ಮಕ್ಕಳು, ಯುವಕರು ತಮ್ಮ ತಮ್ಮ ಹವ್ಯಾಸಗಳಲ್ಲಿ ತಲೆ ತೂರಿಸಿ ಕುಳಿತುಬಿಟ್ಟದ್ದಾರೆ.

ಇವರೆಲ್ಲರೂ ಸಫ್ದರ್ ಹಷ್ಮಿಯ ಕನಸಿನ ಲೋಕದ ಮಕ್ಕಳು. ಮಂಗಳಪುರಿಯಲ್ಲಿ ಹದುಕುಮುರುಕಾಗಿದ್ದ ಮನೆಗಳನ್ನು ಪಡೆದು ಅದಕ್ಕೆ 'ಭಾರತ್ ಘರ್'(ಭಾರತ ಮನೆ) ಎಂದು ಹೆಸರಿಟ್ಟ ಕೆಲದಿನಗಳ ನಂತರ ಅದರ ಛಾಯೆಯೇ ಬದಲಾಗಿದೆ.

ಸದಾ ಕುಲು ಕುಲು ಕುಣಿಯುವ ಮಕ್ಕಳು, ಕೇಕೆ ಹರ್ಷೋದ್ಗಾರ ಕೇಳಿಬರುತ್ತದೆ. ನಾದ ಇಲ್ಲಿ ಎಡಬಿಡದೆ ಹರಿದಾಡುತ್ತದೆ.

ಸಫ್ದರ್ ಹಷ್ಮಿಯವರು ಹುಟ್ಟುಹಾಕಿದ ಯೋಜನೆ 'ಜನೋತ್ಸವ' ಜನರೊಡನೆ ಬೆರೆತು ಅವರೊಂದಿಗೆ ಕಲೆಗಳ ಮುಖಾಮುಖಿ ನಡೆಸಿ ಜನರದ್ದೇ ಕಲೆ ರೂಡಿಸುವುದು ಹಷ್ಮಿಯವರ ಯೋಜನೆ. ಆದರೆ ಈ ಯೋಜನೆ ಅಂಬೆಗಾಲಿಕ್ಕುವ ಮುಂಚೆಯೇ ಸಫ್ದರ್‌ಹಷ್ಮಿಯವರನ್ನು ಕೊಲೆ ಮಾಡಲಾಯಿತು.

ಹಲವಾರು ಸಾವು, ಸಂತಾಪ ಸೂಚಿಸುವುದರಲ್ಲಿ ಮುಕ್ತಾಯವಾಗಿಬಿಡುತ್ತವೆ. "ಅವರು ಸತ್ತಿದ್ದರೂ ಅವರು ಸದಾ ನಮ್ಮೊಂದಿಗಿರುತ್ತಾರೆ" ಎಂದು ಹೇಳಿಅವರನ್ನು ಮರೆತುಬಿಡಲಾಗುತ್ತದೆ. ಆದರೆ ಕ್ರಿಯಾಶೀಲ ಸಂಘಟನೆಗಳ, ಪಕ್ಷದ ಕಾರ್ಯಕರ್ತರಸಾವು, ಸಂತಾಪದಲ್ಲಿ ಮುಕ್ತಾಯವಾಗುವುದಿಲ್ಲ. ಹೊಸ ಕ್ರಿಯೆಯಲ್ಲಿ ಅಭಿವ್ಯಕ್ತವಾಗುತ್ತದೆ.ಹೀಗಾಗಿಯೇ ಸಫ್ದರ್ ಕಂಡ' ಜನೋತ್ಸವ'ದ ಕನಸು ಅವರ ಸಾವಿನಲ್ಲಿ ಮುಕ್ತಾಯವಾಗಲಿಲ್ಲ. ಸಫ್ದರ್ ಹಷ್ಮಿ ಸ್ಮಾರಕ ಟ್ರಸ್ಟ್ (ಸಹಮತ್) ಜನೋತ್ಸವವನ್ನು ಕೈಗೆತ್ತಿಕೊಂಡಿತು.

ಸಫ್ದರ್ ಕೊಲೆಯ ನಂತರ'ಬೀದಿ ರಂಗಭೂಮಿಗೆ' ಹೊಸ ತಿರುವು ನೀಡುದಕ್ಕೆ ಕಾರಣವಾದ ಸಹಮತ್ ನಾಟಕೋತ್ಸವ ಈಗ ಜನೋತ್ಸವದಂತಹ ಮತ್ತೊಂದು ಮಹಾನ್ ಯೋಜನೆಯನ್ನು ಕೈಗೆತ್ತಿಕೊಂಡಿತು.

ಮಂಗಳಪುರಿ ಕನಸಿನ ಲೋಕವಾಯಿತು. ಚಿಣ್ಣರ ಕಣವಾಯಿತು. ಖ್ಯಾತ ನಾಟಕಕಾರರು-ನಿರ್ದೇಶಕರು-ಕಲಾವಿದರು- ಈ ಯೋಜನೆಯೊಡನೆ ಕೈಗೂಡಿಸಿದರು. ಮಧುಶ್ರೀ ಧತ್ತಾ, ಹಬೀಬ್ ತನ್ವೀರ್ ನಾಟಕ ಕಲಿಸಿದರು, ವಿವಾನ್ ಸುಂದರಂ ಕಲಾಕೃತಿಗಳನ್ನು ಕೊಟ್ಟರು, ಭೂಮಿಕಾ ತಂಡ ನೃತ್ಯ ಕಲಿಸಿತು.ಸೋಮನ್, ಪ್ರಮೋದ್ ಮಣ್ಣಿನಲ್ಲಿ ಕಲಾಕೃತಿ ರಚಿಸಲು ಕಲಿಸಿಕೊಟ್ಟರು,ದಾದಿ ಪದುಂಜೀ, ರಣಧೀರ್ ಖಾರೆ ಗೊಂಬೆಯಾಟ ಕಲಿಸಿದರು.

ಕೊನೆಯ ದಿನದ ಉತ್ಸವದಲ್ಲಿ ಇಲ್ಲಿನ ಎಲ್ಲರೂ ತಾವು ಕಲಿತಿದ್ದನ್ನು ಪ್ರದರ್ಶನಕ್ಕಿಟ್ಟು ಸಫ್ದರ್ ಆಶಯಕ್ಕೆ ಜೀವ ಕೊಡಲಿದ್ದಾರೆ.

ದಾವಣಗೆರೆಯ ಮತೀಯ ಗಲಭೆ
ನಿಜವಾಗಿ ನೆಡೆದುದ್ದೇನು?

ಕೋಮುವಾದಿಗಳ ರಾಮಜ್ಯೋತಿ ನಗರಕ್ಕೆ ಅಕ್ಟೋಬರ್ 6,1990ರ ಬೆಳಿಗ್ಗೆ ಪಕ್ಕದ ಹಳ್ಳಿಯಿಂದ ಬರುವ ಮುಂಚಿನ ದಿನವಾದ 5ನೇ ತಾರೀಖಿನಂದೇ, ಆರ್‌ಎಸ್‌ಎಸ್, ವಿಎಚ್‌ಪಿ, ಹಿಂದೂ ಜಾಗರಣಾ ವೇದಿಕೆ, ಬಿಜೆಪಿ ಇತ್ಯಾದಿ ಮತೀಯವಾದಿಗಳು ನಗರದಲ್ಲಿ ಉದ್ರೇಕಕಾರಿ ವರ್ತನೆಗಳಲ್ಲಿ ನಿರತರಾಗಿದ್ದು, ಬೀದಿ, ಗಲ್ಲಿ, ಸರ್ಕಲ್‌ಗಳನ್ನೆಲ್ಲಾ ಕಾವಿ ಬಣ್ಣದ ಬಾವುಟ, ಬ್ಯಾನರ್‌ಗಳನ್ನು ತುಂಬಿ, ಕೇಕೆ ಹಾಕಿ ಕುಣಿಯುತ್ತಿದ್ದರು. 5-10-90 ರ ರಾತ್ರಿಯೇ ಈ ಕೋಮುವಾದಿಗಳು ವ್ಯವಸ್ಥಿತವಾಗಿ ಸುಮಾರು 30ಕ್ಕೂ ಹೆಚ್ಚು ಅಲ್ಪಸಂಖ್ಯಾತರ ಬೀಡಾ ಅಂಗಡಿ,-ಹಣ್ಣಿನ ಅಂಗಡಿ, ಗ್ಯಾರೇಜ್, ಅಂಗವಿಕಲರ ಟೆಲಿಫೋನ್ ಬೂತ್‌ಗಳನ್ನು ಪೆಟ್ರೋಲ್ ಅದ್ದಿದ ಚೆಂಡಿನಿಂದ ಸುಟ್ಟು ಭಸ್ಮ ಮಾಡಿದ್ದು, ಮರುದಿನ ನಗರದಲ್ಲಿ ಅಶಾಂತಿಯ ವಾತಾವರಣ ಅವರ ಕೃತ್ಯಗಳಿಗೆ ನೆಪವೆಂದರೆ, ವ್ಯವಸ್ಥಿತವಾಗಿ ಹರಡಿದ ಸುಳ್ಳುವದಂತಿಗಳು. ಶಾಂತಿ ಚಿತ್ರಮಂದಿರದ ಬಳಿಯ ಗಣಪತಿ ವಿಗ್ರಹ ದೇವಸ್ಥಾನವನ್ನು ಹಾಳುಗೆಡವಿದ್ದಾರೆ, ಹಿಂದೂ ಕೋಮಿನವನಿಗೆ ಅಲ್ಪಸಂಖ್ಯಾತ ಕೋಮಿನವರು ಹೊಡೆದಿದ್ದಾರೆ ಇತ್ಯಾದಿ, ಇತ್ಯಾದಿ.

ಜ್ಯೋತಿ ಬರುವ 6-10-90ರ ಮೆರವಣಿಗೆಗೆ ಪರವಾನಗಿ ಕೊಡುವ ಬಗ್ಗೆ ಮಧ್ಯಾಹ್ನ 11 ರವರೆಗೆ ಅಧಿಕಾರಿಗಳು, ಪೋಲೀಸ್ ಮುಖ್ಯಸ್ಥರು, ಬಿಜೆಪಿ ಇತರ ಹಿಂದೂ ಕೋಮುವಾದಿಗಳ ಮಧ್ಯೆ ಚರ್ಚೆ ನಡೆದು, ಸೀಮಿತ ಬೀದಿಗಳಲ್ಲಿ ಹೋಗುವಂತೆ ತಿಳಿಸಲಾದರೂ, ಹಿಂದೂ ಮತೀಯವಾದಿಗಳ ಪ್ರಚೋದನೆಯಿಂದ ಮೆರವಣಿಗೆ ಬೇತೂರು ಸರ್ಕಲ್‌ನಿಂದ ಉದ್ದೇಶಿತ ಮಾರ್ಗ ಬಿಟ್ಟು ಮುಸ್ಲಿಂ ಬಹುಸಂಖ್ಯಾತವಾಗಿರುವ ಅಝಾದ್‌ನಗರದತ್ತ ನುಗ್ಗಿದಾಗ ಪೋಲೀಸರು ಅಶ್ರುವಾಯು, ಲಾಠಿ ಪ್ರಯೋಗದ ನಂತರ ಗೋಲೀಬಾರ್ ಮಾಡಿ ಜನರನ್ನು ಚದುರಿಸಿದಾಗ, ಗೋಲೀಬಾರಿನಿಂದ 7 ಸಾವು ಸಂಭವಿಸಿತು. ಈ ಘಟನೆಗೆ ಮುನ್ನ ಮತ್ತು ನಂತರ ನಗರದ ಅನೇಕ ಕಡೆ ಬೆಂಕಿ ಹಚ್ಚುವುದು, ಗುಂಪು ಘರ್ಷಣೆ, ಇರಿತ, ಲಾಠಿ ಪ್ರಹಾರಗಳಿಂದ ಅನೇಕ ಸಾವು--ನೋವುಗಳು ಆದವು. ಮತೀಯ ಗಲಭೆಗಳಲ್ಲಿ ಗೋಲೀಬಾರನಲ್ಲಿ 7 ಜನ ಸೇರಿ ಒಟ್ಟು ಮೃತರಾದವರು 17 ಗಾಯಗೊಂಡವರು 60ರಿಂದ 70. 5-10-90ರ ರಾತ್ರಿ ಪೋಲೀಸರು ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದರೆ, ಬಂದೋಬಸ್ತ್ ಮಾಡಿದ್ದರೆ ಈ ತರಹದ ಅಹಿತಕರ ಘಟನೆ ನಡೆಯುತ್ತಿರಲಿಲ್ಲ. ಮಧ್ಯಾಹ್ನ 12ರಿಂದ ಕರ್ಫ್ಯೂ ಜ್ಯಾರಿ ಮಾಡಿದ್ದು ಅದು 14ರವರೆಗೂ ಇದ್ದು 15 ರಿಂದ ಸಂಜೆ ಆರರಿಂದ ಬೆಳಿಗ್ಗೆ ಆರರವರೆಗೆ ಜ್ಯಾರಿಗೆ ಬಂತು. ಈ ಘಟನೆಗಳ ಸಂದರ್ಭದಲ್ಲಿ ಕೋಮುವಾದಿಗಳು ಅನೇಕ ಸುಳ್ಳು ವದಂತಿಗಳನ್ನು ವ್ಯವಸ್ಥಿತವಾಗಿ ಹರಡಿ ಅಲ್ಪಸಂಖ್ಯಾತ ವಿರೋಧಿ ದ್ವೇಷ ಹೆಚ್ಚಾಗಲು ಕಾರಣರಾದರು.

ಮತ್ತಷ್ಟು ಸುಳ್ಳು ವದಂತಿಗಳು ಹಬ್ಬಿದವು. ಕುಡಿಯುವ ನೀರಿಗೆ ವಿಷ ಬೆರೆಸಿದ್ದಾರೆ-- ಇದನ್ನು ಅಧಿಕಾರಿಗಳು ಅಲ್ಲಗಳೆದರು. ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಟ್ಯಾಂಕ್‌ಗಳ ನೀರನ್ನು ಖಾಲಿ ಮಾಡಿದ್ದರಿಂದ ನಗರದಲ್ಲಿ ಒಂದು ದಿನ ನೀರು ಸರಬರಾಜು ಆಗಲಿಲ್ಲ. ಗಣಪತಿ ವಿಗ್ರಹ, ದೇವಸ್ಥಾನಗಳನ್ನು ಒಡೆದಿದ್ದಾರೆ ಇದು ಇನ್ನೊಂದು ಸುಳ್ಳು ವದಂತಿ. ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್--ಅಲ್ಪ ಸಂಖ್ಯಾತ ಕೋಮಿನವನು--ಬೇಕೆಂದೇ ಜ್ಯೋತಿ ಮೆರವಣಿಗೆಯ ಮೇಲೆ ದಿನಾಂಕ ಆರರಂದು ಗೋಲೀಬಾರ್ ಮಾಡಿಸಿ, ಹಿಂದೂಗಳ ಸಾವಿಗೆ ಕಾರಣನಾಗಿದ್ದಾನೆ ಎಂಬ ಮತ್ತೊಂದು ವದಂತಿ, ಇದು ಸುಳ್ಳಾಗಿದ್ದಲ್ಲಿ ಆತ ಅಂದು ಆ ಸ್ಥಳದಲ್ಲೇ ಇರಲಿಲ್ಲ.

ಅಲ್ಪ ಸಂಖ್ಯಾತ ಕೋಮಿಗೆ ಸೇರಿದ ನಗರಸಭೆ ಯ ಅಧ್ಯಕ್ಷರು ತಮ್ಮ ಮನೆಯಲ್ಲಿ ಆಸಿಡ್ ಮತ್ತು ಕಲ್ಲುಗಳ ರಾಶಿ ಸೇರಿಸಿಟ್ಟು ಅವರ ಮನೆ ಮೇಲಿಂದ ಅವುಗಳನ್ನು ಹಿಂದುಗಳ ಮೇಲೆ ಪ್ರಯೋಗಿಸಲಿದ್ದಾರೆ. ಇದು ಮತ್ತೊಂದು ವದಂತಿ. ಆಸ್ಪತ್ರೆಗಳಿಗೆ ಆಸಿಡ್ ಎರಚಿದ ಕೇಸುಗಳು ಬಂದಿಲ್ಲ. ಮತ್ತು ಗಟ್ಟಿಮುಟ್ಟಾದ ಅವರ ಆರ್‌ಸಿಸಿ ಮನೆಯಲ್ಲಿ ಆಶ್ರಯ ಪಡೆಯಲು ಅಲ್ಪಸಂಖ್ಯಾತ ಕೋಮಿನ ಬಡವರು ಬಂದಿದ್ದು ಅವರೆಲ್ಲಾ ಬಾಗಿಲು ಹಾಕಿಕೊಂಡು ದಿನಕಳೆದಿದ್ದಾರೆ. ಸಿಪಿಐ ಮುಖಂಡ ಕಾಂ.ಎಚ್.ಕೆ. ರಾಮಚಂದ್ರಪ್ಪನವರ ಮಗನನ್ನು ಕೊಂದಿದ್ದಾರೆ--ಮರುದಿನವೇ ತಂದೆಯೇ ಅಲ್ಲಗಳೆದಿದ್ದಾರೆ. ಕಾರ್ಮಿಕರ ಕೇಂದ್ರವಾಗಿರುವ ನಗರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ ಪ್ರತಿನಿಧಿಯನ್ನು ಸೋಲಿಸಿ ಸರ್ವಾಧಿಕಾರಿ ಪಕ್ಷ ಕಾಂಗ್ರೆಸ್ ಪ್ರತಿನಿಧಿಯನ್ನು ಆರಿಸಿಕಳುಹಿಸಿದ ಹಾಗೂ ಕಳೆದ ಜನವರಿ 90ರ ನಗರ ಸಭೆಯ ಚುನಾವಣೆಯಲ್ಲಿ ಮತೀಯವಾದಿ ಬಿಜೆಪಿಗೆ ಒಂದೂ ಸೀಟು ಸಿಕ್ಕದಿದ್ದರೂ, ಅದು ಎರಡು ಮೂರು ಕಡೆ ಗೆಲ್ಲುವ ಹಂತಕ್ಕೆ ತಲುಪುವವರೆಗೆ ಓಟುಗಳಿಸಿತ್ತು.

ಮತೀಯ ಗಲಭೆಯಲ್ಲಿ ಹಿಂದೂ ಕೋಮುವಾದಿಗಳ ಅಟ್ಟಹಾಸ ಮೇಲುಗೈ ಆಗಿದ್ದರೂ, ಮುಸ್ಲಿಂ ಮೂಲಭೂತವಾದಿಗಳು ಸ್ವಲ್ಪ ಮಟ್ಟಿಗೆ ಬಲ ಪ್ರದರ್ಶಿಸಿದ್ದಾರೆ. ಅ.3 ರಂದು ಪೈಗಂಬರ್ ದಿನಾಚರಣೆಯ ಮೆರವಣಿಗೆ ನಗರದಲ್ಲಿ ಹಿಂದೆಂದೂ ಕಾಣದಷ್ಟು ದೊಡ್ಡದಾಗಿದ್ದರೂ, ಶಾಂತವಾಗಿ ನಡೆದಿತ್ತು. ಆ ದಿನ ನಗರ ಪೂರ್ಣವಾಗಿ ಹಸಿರು ತೋರಣ-ಬಾವುಟಗಳಿಂದ ತುಂಬಿತ್ತು. 5-10-90ರಂದು ಅದು ಕಾವಿಮಯವಾಯ್ತು. ಪೈಗಂಬರ್ ಮೆರವಣಿಗೆಯನ್ನು ಅದರ ಮುಖಂಡರು ನಿಯಂತ್ರಿಸುವ ಶಕ್ತಿ ಹೊಂದಿದ್ದು ಕಂಡುಬಂದರೆ, ಜ್ಯೋತಿ ಮೆರವಣಿಗೆಯ ಸಂಘಟಕರು ನಿಯಂತ್ರಿಸದಾದರು--ಉದ್ದೇಶಪೂರ್ವಕವಾಗಿ--ಅಲ್ಲದೆ ಅದರ ಮುಂದಾಳುಗಳು ಮೆರವಣಿಗೆಗಾರರನ್ನು ಉದ್ರೇಕಿಸಿ ಛೂ ಬಿಟ್ಟು, ಗೋಲೀಬಾರಿಗೆ ಮುನ್ನ ತಾವು ತಮ್ಮ ಸ್ಕೂಟರ್, ಕಾರ್‌ಗಳಲ್ಲಿ ಪರಾರಿಯಾಗಿ ತಲೆ ತಪ್ಪಿಸಿಕೊಂಡರು. ಗೋಲೀಬಾರಿನಲ್ಲಿ ಸತ್ತವರು---ಗಾಯಗೊಂಡವರು ಬಡವರು ಮತ್ತು ಕೆಳ ಮಧ್ಯಮ ಮರ್ಗದವರು. ನಗರದಲ್ಲಿ ಸುಳ್ಳು ವದಂತಿಗಳು ಎರಡು ವಾರವಿಡೀ ಹಬ್ಬುತ್ತಿತ್ತು. ಕರ್ಫ್ಯೂ ಸಡಿಲಿಕೆಯ ನಂತರವೂ ಸುಳ್ಳು ವದಂತಿಗಳನ್ನು ನಿಜ ವದಂತಿಗಳೆಂದು ಸಾಬೀತುಪಡಿಸಲು ಹಿಂದೂ ಕೋಮುವಾದಿಗಳು ತೀವ್ರವಾಗಿ ಪ್ರಯತ್ನಿಸುತ್ತಿದ್ದರು. ಅಲ್ಪಸಂಖ್ಯಾತರ ಮೇಲಿನ ಧಾಳಿಯನ್ನು ನಗರದ ಹೊರಗಿನಿಂದ ಬಂದ ಮತೀಯವಾದಿಗಳು ನಡೆಸಿರುವ ಸಾಧ್ಯತೆ ಇದೆ. ಇದೆಲ್ಲಾ ವ್ಯವಸ್ಥಿತವಾಗಿ ಒಂದು ಕೇಂದ್ರದ ಆದೇಶದಂತೆ ನಡೆದಿರುವಂತಿದೆ. ಹಿಂದೂ ಕೋಮುವಾದ ಮತ್ತು ಮುಸ್ಲಿಂ ಮೂಲಭೂತವಾದದ ಕಿಡಿಯ ಆರ್.ಎಸ್.ಎಸ್, ಬಿಜೆಪಿ, ವಿಎಚ್‌ಪಿ ಇತ್ಯಾದಿಗಳ [illegible] ಅದು ಕಾಂಗ್ರೆಸ್, ಜನತಾದಳದಂತಹ ಪಕ್ಷಗಳ ಒಳವಿದುದರಲ್ಲಿ ಇರುವುದಲ್ಲದೆ ಎಡ ಸಂಘಟನೆಗಳಾದ ಬ್ಯಾಂಕ್, ವಿಮೆ ಇತ್ಯಾದಿಗಳಲ್ಲಿ ಎದ್ದು ಕಾಣುತ್ತಿದೆ.

30-10-90ರ 'ಕರಸೇವೆ'ಯಂದು ನಗರದಲ್ಲಿ ಹಿಂದೂ ಕೋಮುವಾದದ ಪ್ರಚಾರ, ಅಟುಂಡಾಂಟ್ ಉದ್ರೇಕಕಾರಿ ವರ್ತನೆಯಿಂದ ದಿಢೀರ್ ಕರ್ಫ್ಯೂ ಜ್ಯಾರಿಗೆ ಬಂದು ಅಧಿಕಾರಿಗಳ ಮುಂಜಾಗ್ರತೆಯಿಂದ ಹೆಚ್ಚಿನ ಅಹಿತಕರ ಘಟನೆ ನಡೆಯಲಿಲ್ಲ. ಈ ಮಧ್ಯೆ ಸುಮಾರು 13-14ನೇ ತಾರೀಖು ಅಕ್ಟೋಬರ್‌ನಂದು ಸಿರಿಗೆರೆ ಮಠದ ಸ್ವಾಮಿಗಳ ನೇತೃತ್ವದಲ್ಲಿ ನಡೆದ ಶಾಂತಿ ಮೆರವಣಿಗೆಯಲ್ಲಿ ಸಿಪಿಐನ ಮುಖಂಡರೂ ಕಾಂಗ್ರೆಸ್, ದಳ ಇನ್ನಿತರರೂ ಭಾಗವಹಿಸಿದ್ದರು.

ಬಸ್ ತಡೆ ಚಳುವಳಿ

ಡಿವೈಎಫ್‌ಐ ಕುಪ್ಪೆಪದವು ಘಟಕದ ನೇತೃತ್ವದಲ್ಲಿ ನವೆಂಬರ್ 13ರಂದು ಖಾಸಗಿ ಬಸ್ ಮಾಲಿಕರು ಪ್ರಯಾಣ ದರವನ್ನು ವಿಪರೀತ ಏರಿಸಿರುವುದನ್ನು ಪ್ರತಿಭಟಿಸಿ ಬೆಳಿಗ್ಗೆ 7 ಘಂಟೆಗೆ ಸುಮಾರು 200 ಜನರು ಒಂದು ಗಂಟೆಗಳ ಕಾಲ ಬಸ್ ತಡೆ ಚಳುವಳಿ ನಡೆಸಿದರು.

ಪ್ರತಿಭಟನೆಯ ಸ್ಥಳಕ್ಕೆ ಆಗಮಿಸಿದ ಬಜಪೆ ಪೋಲೀಸ್ ಅಧಿಕಾರಿಗಳು ಹಾಗೂ ಮಳಲಿ ಮಂಡಲ ಪಂಚಾಯತ್ ಪ್ರಧಾನರು ಮಧ್ಯ ಪ್ರವೇಶಿಸಿ ನವೆಂಬರ್ 30 ನೇ ತಾರೀಖಿನ ತನಕ ಕಾಲಾವಕಾಶ ಬೇಡಿ, ಬಸ್ ಪ್ರಯಾಣ ದರವನ್ನು ಇಳಿಸಲು ಪ್ರಯತ್ನಿಸಲಾಗುವುದು ಎಂಬ ಭರವಸೆಯ ಮೇರೆಗೆ ಚಳುವಳಿಯನ್ನು ಹಿಂತೆಗೆದುಕೊಳ್ಳಲಾಯಿತು.

ಬಸ್ ನಿಲ್ದಾಣದ ಬಳಿ ಮಧ್ಯಾಹ್ನದ ತನಕ ಧರಣಿ ಸತ್ಯಾಗ್ರಹ ಮಾಡಿ, ಏರಿಸಿದ ದರ ಕೂಡಲೇ ಇಳಿಸದಿದ್ದರೆ ಸರದಿ ಉಪವಾಸ ಮತ್ತು ಆಮರಣ ಉಪವಾಸ ಸತ್ಯಾಗ್ರಹವನ್ನು ಡಿವೈಎಫ್‌ಐ ನಾಯಕರು ಕೈಗೊಳ್ಳುವರೆಂದು ಎಚ್ಚರಿಸಿ ಹೋರಾಟವನ್ನು ಮುಂದೂಡಲಾಯಿತು. ಹೋರಾಟದ ನೇತೃತ್ವವನ್ನು ಭಾಸ್ಕರ ಆಚಾರಿ, ಎಸ್.ಎ. ಹಸನಬ್ಬ, ಸುಧಾಕರ ಮತ್ತಿತರರು ವಹಿಸಿದ್ದರು.

ಮಲಪ್ರಭಾ ಸಹಕಾರಿ ನೂಲಿನ ಗಿರಣಿ ಸಂಘಕ್ಕೆ ಅವಿರೋಧ ಆಯ್ಕೆ

ಸವದತ್ತಿಯ ಮಲಪ್ರಭಾ ಸಹಕಾರಿ ನೂಲಿನ ಗಿರಣಿ ನೌಕರರ ಸಂಘಕ್ಕೆ ನವೆಂಬರ್ 13ರಂದು ಸಿಐಟಿಯು ಬೆಂಬಲಿತ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಮಂಡಳಿಯ ಸದಸ್ಯರು ಅವಿರೋಧವಾಗಿ ಆಯ್ಕೆಯಾದರು. ಚುನಾವಣೆ ನವೆಂಬರ್ 17 ರಂದು ನಡೆಯಬೇಕಾಗಿತ್ತು. ಆದರೆ ವಿರೋಧವಾಗಿ ಯಾರೂ ಸ್ಪರ್ಧಿಸದೇ ಇದ್ದುದರಿಂದ ಅವಿರೋಧ ಆಯ್ಕೆ ನಡೆಯಿತು. ಈ ಹಿಂದೆ ಸಂಘದ ಅಧ್ಯಕ್ಷರಾಗಿದ್ದ ಕೆ.ಎಸ್. ಶಮಾರವರನ್ನೂ ಕಾರ್ಮಿಕರು ಒಮ್ಮತದಿಂದ ವಜಾ ಮಾಡಿದ ನಂತರ ಈ ಚುನಾವಣೆ ನಡೆದಿತ್ತು. ಈಗ ಸಂಘಕ್ಕೆ ಅಧ್ಯಕ್ಷರಾಗಿ ವಿ.ಪಿ. ಕುಲಕರ್ಣಿ, ಉಪಾಧ್ಯಕ್ಷರಾಗಿ ಎಂ.ಬಿ.ಕಟ್ಟಿ, ಕಾರ್ಯದರ್ಶಿಯಾಗಿ ಡಿ.ಎಸ್.-ಬುಕ್ಕಾ, ಸಹಕಾರ್ಯದರ್ಶಿಯಾಗಿ ಬಿ.ವಿ.ಇಂಜಂತಕರ, ಮತ್ತು ಖಜಾಂಚಿಯಾಗಿ ಕೆ.ಎಸ್ ಹೊಸೂರ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಎಂ.ಟಿ.ಭಂಗಿ, ಕೆ.ಟಿ.ಸುಂಕದ, ವಿ.ಬಿ. ಹಂಗರಕಿ, ವಿ.ಕಾರಬಾರಿ, ಎಂ.ಬಿ.ಗಾಳಿ, ಎಸ್.ಎಸ್.ಹಾದಿಮನಿ, ಎ.ಎಚ್.ರಜಪೂತ, ಪಿ.ಎ.ಹಲಮನಿ, ಕೆ.ಎಲ್.ಮುಳಗುಂದ, ಜೆ.ಜೆ.-ನಿಗೂರ, ಶ್ರೀಮತಿ ಶಾರದವ್ವ ಬಡಿಗೇರ ಹಾಗೂ ಕುಮಾರಿ ಎ.ಎಚ್.ರಜಪೂತ ಇವರುಗಳು ಸರ್ವಾನುಮತದ ಅಭ್ಯರ್ಥಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾ ಚಟುವಟಿಕೆಗಳಲ್ಲಿ ಎಂ.ಬಿ.ಕುಬಸ್ಧ, ಎಂ.ಟಿ. ಯಾದವಾಡ, ಎಂ.ಎಸ್. [illegible] ಮುಂದಾಳತ್ವ ವಹಿಸಿದ್ದರು.

ನಿಮ್ಮ ಪ್ರಶ್ನೆ- ನಮ್ಮ ಉತ್ತರ

ಮಣ್ಣಿನ ಮಕ್ಕಳವಾದ ಸರಿಯೆ?
-ಹೆಚ್.ಪ್ರಕಾಶ್. ಹಗರಿಬೊಮ್ಮನ ಹಳ್ಳಿ, ಬಳ್ಳಾರಿ.

★ ಅಲ್ಲ. ಯಾವುದೇ ಕೃಷಿ-ಕಾರ್ಮಿಕರ ಪಕ್ಷ ಮಣ್ಣಿನ ವಾದವನ್ನು ಒಪ್ಪುವುದು ಸಾಧ್ಯವಿಲ್ಲ. ಯಾವುದೇ ದೇಶ ಅಥವಾ ರಾಷ್ಟ್ರದ ಅರ್ಥವೆಂದರೆ, ಆ ದೇಶದ ನಾಗರಿಕ ಆ ದೇಶದೊಳಗೆ ಎಲ್ಲಾದರೂ ಹೋಗಿ ನೆಲೆಸಬಹುದು. ದುಡಿದು ತನ್ನ ಹೊಟ್ಟೆ ತುಂಬಿಸಿಕೊಳ್ಳಬಹುದು ಅಂತ. 'ಮಣ್ಣಿನ ಮಕ್ಕಳ' ವಾದ ಒಪ್ಪಿಕೊಂಡರೆ ಈ ದೇಶದ ಕಲ್ಪನೆಗೆ ತಿಲಾಂಜಲಿಇತ್ತಂತೆ.

'ಮಣ್ಣಿನ ಮಕ್ಕಳು' ಯಾರು ಎಂಬ ಪ್ರಶ್ನೆಯೂ ಅದು ಕಾಣುವಷ್ಟು ನೇರ, ಸರಳವಾದ ಪ್ರಶ್ನೆಯಲ್ಲ. ಈಗ ಸಾಮಾನ್ಯವಾಗಿ ಒಂದು ರಾಜ್ಯದಲ್ಲಿ ಹುಟ್ಟಿ ಬೆಳೆದವರು, ಅಲ್ಲಿಯ ಭಾಷೆ ಮಾತನಾಡುವವರು 'ಮಣ್ಣಿನ ಮಕ್ಕಳು' ಎಂದು ಪರಿಗಣಿಸಲಾಗುತ್ತದೆ. ಆದರೆ 'ಮಣ್ಣಿನ ಮಕ್ಕಳ' ವಾದವನ್ನು ತಾರ್ಕಿಕವಾಗಿ ಮುಂದೆ ತೆಗೆದುಕೊಂಡು ಹೋದರೆ ಅದು ಒಂದು ರಾಜ್ಯದ ಗಡಿಯಲ್ಲೇ ನಿಲ್ಲ ಬೇಕಾಗಿಲ್ಲ. ಇದನ್ನು ಕೆಲವರು ಪ್ರದೇಶ, ಜಿಲ್ಲೆ,ತಾಲೂಕು ಇತ್ಯಾದಿಗಳಿಗೂ ಅನ್ವಯಿಸಬಹುದು.

ಅದು ಇನ್ನೂ ಬೇರೆ ಸೀಮಿತ ಅರ್ಥ ಪಡೆಯುತ್ತಾ ಹೋಗಬಹುದು. ಉದಾಹರಣೆಗೆ ಅಸ್ಸಾಂನಲ್ಲಿ ಆಗುತ್ತಿರುವುದು ಅದೇ. ಅಸ್ಸಾಂನಲ್ಲಿವಾಸಿಸಿರುವ ಬೋಡೋ ಮುಂತಾದ ಆದಿವಾಸಿ ಜನಾಂಗಗಳು ತಾವು ಮಣ್ಣಿನ ಮಕ್ಕಳು. ಉಳಿದ ಅಸ್ಸಾಮಿಗಳು 'ಹೊರಗಿನಿಂದ' ಬಂದವರು ಎನ್ನುತ್ತಾರೆ. ಕೆಲವು ವರ್ಷಗಳ ಹಿಂದೆ ಅಸ್ಸಾಂನಲ್ಲಿ ನೆಲೆಸಿರುವ ದುಡಿಯುತ್ತಿರುವ ಬಂಗಾಲಿಗಳು 'ಹೊರಗಿನವರು' ಎಂದು ಭಾರಿದಾಂಧಲೆ ಎಬ್ಬಿಸಿದ್ದರು. ಚಳುವಳಿ ಹೂಡಿದ್ದರು, ರಕ್ತಪಾತ ನಡೆಸಿದ್ದರು. ಈಗೀಗವರಲ್ಲಿ 'ಮಣ್ಣಿನಮಕ್ಕಳು' ಎಂದು ಯಾರನ್ನು ಕರೆಯೋಣ?

'ಮಣ್ಣಿನ ಮಕ್ಕಳು' ಎಂಬ ಪರಿಕಲ್ಪನೆ ವಿಚ್ಛಿದ್ರಕರವಾದದ್ದು. ಇದನ್ನು ಬಿತ್ತಿ ಬೆಳೆಸುವವರು ಬೂರ್ಜ್ವಾ-ಭೂಮಾಲಕ ವರ್ಗದ ಪಟ್ಟಭದ್ರ ಹಿತಾಸಕ್ತಿಗಳು. ಈ ವರ್ಗದಹಿತಾಸಕ್ತಿಯನ್ನು ಎತ್ತಿಹಿಡಿಯುವ ಪಕ್ಷಗಳು, ಅವರ ಬಾಲಬಡುಕರು. ಇದನ್ನು ಅವರು ಎತ್ತುವುದು, ದುಡಿಯುವ ಜನತೆ ಈ ಆಳುವ ವರ್ಗಗಳ ವರ್ಗದ್ರೋಹದಳಿತ, ಮತ್ತು ಅದರಿಂದ ಉಂಟಾಗುವ ವ್ಯಾಪಕ ನಿರುದ್ಯೋಗ, ಬಡತನಗಳಿಂದ ಕಂಗೆಟ್ಟಾಗ. ದುಡಿಯುವ ಜನರ ಕೋಪವನ್ನು ವಿಚ್ಛಿದ್ರಕಾರಿ ದಾರಿಯಲ್ಲಿ ಹರಿಯಬಿಡುವ ಕುತಂತ್ರ ಇದು. ಒಂದು ಪ್ರದೇಶದ ಜನತೆಯನ್ನು- 'ಹೊರಗಿನಿಂದ' ಬಂದವರು ಹೊರಟು ಹೋದರೆ ಎಲ್ಲಾ 'ಮಣ್ಣಿನ ಮಕ್ಕಳ'ಗೂ ಉದ್ಯೋಗ ಸಿಗುತ್ತದೆ, ಎಲ್ಲಾ ಸಂಕಷ್ಟಗಳೂ ದೂರವಾಗುತ್ತವೆ-ಎಂಬ ಭ್ರಮೆಯಲ್ಲಿಡಲು ಈ ಪಟ್ಟಭದ್ರ ಹಿತಾಸಕ್ತಿಗಳು ಪ್ರಯತ್ನಿಸುತ್ತವೆ. ಈ ವಾದ ಒಂದು ನಗರದ, ಕಾರ್ಖಾನೆಯ ಕಾರ್ಮಿಕರನ್ನು ಭಾಷೆ ರಾಜ್ಯಗಳ ಆಧಾರದ ಮೇಲೆ ಒಡೆದು, ಅವರ ಐಕ್ಯ ಟ್ರೇಡ್ ಯೂನಿಯನ್ ಚಳುವಳಿಯನ್ನು ಮುರಿಯಲು ಸಹಾಯವಾಗುತ್ತದೆ-ಬೂರ್ಜ್ವಾ ಮಾಲಕರಿಗೆ.

'ಮಣ್ಣಿನ ಮಕ್ಕಳ' ವಾದವನ್ನು-ಎತ್ತಿ ಹಿಡಿದು ಬೆಳೆಯುವ ಚಳುವಳಿಗಳನ್ನು ವಿಶ್ಲೇಷಿಸಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮುಂಬಯಿಯಲ್ಲಿ 60 ರ ದಶಕದಲ್ಲಿಬಲವಾಗಿ ಮೂಡಿಬರುತ್ತಿದ್ದ ಕಮ್ಯುನಿಸ್ಟ್ ಟ್ರೇಡ್‌ಯೂನಿಯನ್ ಚಳುವಳಿಯನ್ನು ಮುರಿಯಲು, ಆಗಿನ ಮಹಾರಾಷ್ಟ್ರದ ಕಾಂಗ್ರೆಸ್ ಮುಖ್ಯಮಂತ್ರಿ ವೈ.ಬಿ.ಚವ್ಹಾಣ್ 'ಶಿವಸೇನಾ'ಕ್ಕೆ ಕುಮ್ಮಕ್ಕು ಕೊಟ್ಟಿದ್ದರು ಎನ್ನುವುದು ಬಹಿರಂಗ ಗುಟ್ಟು. 'ಶಿವ ಸೇನಾ' ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ನುಗ್ಗಿ ಕಮ್ಯುನಿಸ್ಟ್ ಯೂನಿಯನ್‌ಗಳನ್ನು ಸದೆಬಡಿಯಲು ಬೆಂಗಾವಲಾಗಿ ನಿಂತಿದ್ದು ಮುಂಬೈನ ಕಾರ್ಖಾನೆ ಮಾಲಿಕರು, ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರ.

ಅದೇ ರೀತಿ ಬೆಂಗಳೂರಿನಲ್ಲಿ ಕಾಂಗ್ರೆಸ್ ವಿರುದ್ಧ ಜನರ ಅತೃಪ್ತಿ ಭುಗಿಲೇಳುತ್ತಿದ್ದಾಗ, ದೇವರಾಜ ಅರಸರು ಕನ್ನಡ ಚಳುವಳಿಯ ಒಂದು ವಿಭಾಗಕ್ಕೆ 'ಮಣ್ಣಿನ ಮಕ್ಕಳ' ವಾದವನ್ನು ಎತ್ತಿ ಹಿಡಿಯಲು ಕುಮ್ಮಕ್ಕು ಕೊಟ್ಟರು. ಅಂದಿನಿಂದ ಅನಂತರದ ಮುಖ್ಯ ಮಂತ್ರಿಗಳು ಈ ನೀತಿಯನ್ನು ಮುಂದುವರೆಸಿಕೊಂಡು ಬರುವುದಲ್ಲದೆ, ಡಾ. ಸರೋಜಿನಿ ಮಹಿಷಿ ಸಮಿತಿಯನ್ನು ಈ ಬಗ್ಗೆ ಅಧ್ಯಯನ ನಡೆಸಲು ನೇಮಿಸುವ ಮೂಲಕ ಈ ವಾದಕ್ಕೆ ಒಂದು ರೀತಿಯಲ್ಲಿ ಅಧಿಕೃತ ಅಂಗೀಕಾರ ಕೊಟ್ಟರು. ಇದು ಅತ್ಯಂತ ಪ್ರತಿಗಾಮಿ ಕ್ರಮಎಂಬುದಕ್ಕೆ ಯಾವುದೇ ಸಂಶಯವಿಲ್ಲ.

ಈ ಬಗ್ಗೆ ಕಾಂಗ್ರೆಸ್‌ನ ಇಬ್ಬಂದಿತನ, ನಾಚಿಕೆಗೇಡಿನದು. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ 'ಶಿವಸೇನೆ'ಗೆ ಕುಮ್ಮಕ್ಕುಕೊಟ್ಟರೆ, ಕರ್ನಾಟದಲ್ಲಿ ಅದು ಕನ್ನಡ ಚಳುವಳಿಯನ್ನು ಇದಕ್ಕಾಗಿಉಪಯೋಗಿಸುತ್ತಿದೆ.

'ಮಣ್ಣಿನ ಮಕ್ಕಳು' 'ಹೊರಗಿನವರು' ಎಂಬ ವಾದವನ್ನು ಎಡಚಳುವಳಿಯ, ಜನರ ಪ್ರಜಾಸತ್ತಾತ್ಮಕ ಐಕ್ಯ ಕಾರ್ಯಾಚರಣೆಯ ವಿರುದ್ಧ ಬಳಸುವುದು, ಬೂರ್ಜ್ವಾ ರಾಜಕೀಯದ ಅವಿಭಾಜ್ಯ ಅಂಗ ಜಗತ್ತಿನ ಎಲ್ಲಾ ಕಡೆ. 30-40 ರ ದಶಕದಲ್ಲಿ ಫ್ಯಾಸಿಸ್ಟ್ ಚಳುವಳಿ, ಕಮ್ಯುನಿಸ್ಟ್ ಟ್ರೇಡ್ ಯೂನಿಯನ್ ಚಳುವಳಿಯನ್ನು ಮುರಿಯಲು ಇದೇ ತಂತ್ರ ಬಳಸಿತ್ತು. ಇಂದು ಯೂರೋಪಿನ ಹಲವು ದೇಶಗಳಲ್ಲಿ-ಜರ್ಮನಿ, ಫ್ರಾನ್ಸ್ ಬ್ರಿಟನ್ ಮುಂತಾದ ಹೆಚ್ಚಿನ ದೇಶಗಳಲ್ಲಿ ಇಂತಹ 'ಮಣ್ಣಿನ ಮಕ್ಕಳ' ವಾದದ ಆಧಾರದ ಮೇಲೆ ತನ್ನ ರಾಜಕೀಯ ನಡೆಸಿರುವ ಹಲವು ನವ-ಫ್ಯಾಸಿಸ್ಟ್ ಬಲ ಪಂಥೀಯ ಪಕ್ಷಗಳು ಹುಟ್ಟಿಕೊಂಡಿವೆ.

'ಮಣ್ಣಿನ ಮಕ್ಕಳ' ವಾದದ ವಿರುದ್ಧ ಹೋರಾಡುವುದು ಈ ವಾದದ ಬಲಿಪಶುಗಳಾದ 'ಹೊರಗಿನಿಂದ ಬಂದ' ದುಡಿಯುವ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ಸೊಂಟಕಟ್ಟಿ ನಿಲ್ಲುವುದೂ ಜಗತ್ತಿನಾದ್ಯಂತ ಎಡ ಚಳುವಳಿಯ ಭವ್ಯ ಸಂಪ್ರದಾಯ ಸಹ ಫ್ಯಾಸಿಸಂ ವಿರುದ್ಧ ಎಡ ಚಳುವಳಿ ಹೋರಾಡಿದ್ದು ಹೀಗೆನೆ. ಈ ಹೋರಾಟದಲ್ಲಿ, ಫ್ಯಾಸಿಸಂನ್ನು ಯುರೋಪಿನಲ್ಲಿ ಸೋಲಿಸಲು ಇದರಿಂದ ಸಾಧ್ಯವಾಯಿತು.

ಈ ಪ್ರಶ್ನೆ ಜತೆ ಆರ್ಥಿಕ ಚಟುವಟಿಕೆ, ಉದ್ಯೋಗ ಅವಕಾಶ ಇರುವ ಕಡೆ ವಲಸೆ ಹೋಗುವ ಪ್ರಶ್ನೆ ಸಹ ಬೆಸೆದುಕೊಂಡಿದೆ. ಇಂತಹ ವಲಸೆ ಹಿಂದಿನಿಂದಲೂ, ಅದರಲ್ಲೂ, ಕೈಗಾರಿಕಾ ಕ್ರಾಂತಿಕಾಲದಿಂದ ನಡೆದು ಬಂದಿರುವಂತಹದ್ದು. ಅದರಲ್ಲೂ, ಬಂಡವಾಳಶಾಹಿ ವ್ಯವಸ್ಥೆಯ ದೇಶಗಳಲ್ಲಿ, ಅರಾಜಕ ಆರ್ಥಿಕವ್ಯವಸ್ಥೆಯಲ್ಲಿ, ಪ್ರಾದೇಶಿಕ ವಿಷಮತೆ ವಲಸೆಯನ್ನು ಅನಿವಾರ್ಯವಾಗಿಸುತ್ತದೆ. ಈ ಹಿನ್ನೆಲೆಯಲ್ಲಿ 'ಮಣ್ಣಿನ ಮಕ್ಕಳ' ವಾದ ದುಡಿಯುವ ಜನರ ಹಿತಾಸಕ್ತಿಗೆ ವಿರುದ್ಧವಾದುದು ಎಂಬುದು ಸ್ಪಷ್ಟ. ಇದೇ ಕಣ್ನೋಟ ದಿಂದ, ಸರೋಜಿನಿ ಮಹಿಷಿ ವರದಿಯಲ್ಲಿ 'ಸ್ಥಳೀಯರು' ಎಂದರೆ '10ವರ್ಷಗಳಿಂದ ರಾಜ್ಯದಲ್ಲಿ ವಾಸಿಸುತ್ತಿರುವ ಜನ' ಎಂದು ನಿರ್ವಚಿಸಿರುವುದನ್ನು ಸಿ.ಪಿ.ಐ(ಎಂ) ಒಪ್ಪುವುದಿಲ್ಲ. ಇದು ಉಳಿದವರು ಆ ರಾಜ್ಯದಲ್ಲಿ ಎರಡನೆಯದರ್ಜೆಯ ನಾಗರಿಕರು ಎಂದು ಹೇಳಿದಂತೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ರಿಜಿಸ್ಟರ್ ಮಾಡಿಸಲು ಆ ರಾಜ್ಯದ ಸ್ಥಳೀಯರು ಆಗಿರಬೇಕೆಂಬ ಸಲಹೆಯನ್ನು ಸಿ.ಪಿ.ಐ (ಎಂ) ಒಪ್ಪುವುದಿಲ್ಲ. 'ಮಣ್ಣಿನ ಮಕ್ಕಳ' ವಾದದ ಡಂಗುರ ಹೊಡೆಯುವವರು ಮುಂಬಯಿ ಮುಂತಾದ ಹೊರರಾಜ್ಯಗಳಲ್ಲಿ ನೆಲೆಸಿರುವ ಕನ್ನಡಿಗರ ಅವಸ್ಥೆ ಏನು ಎಂದು ಮರೆತು ಬಿಡುತ್ತಾರೆ.

ಈಗ ಕರ್ನಾಟಕದಲ್ಲಿ ಕನ್ನಡ ಭಾಷೆ ಬೆಳವಣಿಗೆಯ ಪ್ರಶ್ನೆಯನ್ನೂ ಈಸ್ಥಳೀಯರಿಗೆ ಉದ್ಯೋಗದ ಪ್ರಶ್ನೆಯನ್ನೂ. ಇಂತಹ ವಿಚ್ಛಿದ್ರಕಾರಿ ಚಳುವಳಿಗಳು ಕಲಸು ಮೇಲೋಗರ ಮಾಡುತ್ತಿವೆ. ಕನ್ನಡ ಭಾಷೆ ಬೆಳವಣಿಗೆಗೆ ಬೇಕಾದ ಕ್ರಮ ಪ್ರಜಾಸತ್ತಾತ್ಮಕ ವಾದದ್ದು. ಎರಡನೆಯದುವಿಚ್ಛಿದ್ರಕಾರಿ.

ನಿರುದ್ಯೋಗಿ ಯುವಕರಿಗೆ, ರಾಜಕೀಯವಾಗಿ ಅಪ್ರಬುದ್ಧವಾದ ಕಾರ್ಮಿಕ ವರ್ಗದ ಜನವಿಭಾಗಗಳಿಗೆ ಈ ವಾದ ಆಕರ್ಷಕವೆನಿಸಬಹುದು. ಆದ್ದರಿಂದ ರಾಜಕೀಯವಾಗಿ ಪ್ರಬುದ್ಧವಾದ ಕಾರ್ಮಿಕವರ್ಗ ಇಂತಹ ಜನರ ನಡುವೆ, ಅವರ ಹಿತಾಸಕ್ತಿಗಳ ಪರವಾಗಿ ಹೋರಾಡಲು ತಯಾರಾಗಿರಬೇಕು. ಇಂತಹ ಅತೃಪ್ತ ದುಡಿಯುವ ಜನರ ನಾಯಕತ್ವ ವಹಿಸಬೇಕು.

ಕಾಂಗ್ರೆ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆ: ಗುಲ್ಬರ್ಗಾ ಅನುಭವ

ಪಕ್ಷದ ಜಿಲ್ಲಾ ಪರಿಷತ್ ಸದಸ್ಯ ಕಾಂ. ಮಾರುತಿ ಮಾನ್ಪಡೆಯವರೊಂದಿಗೆ ಸಂದರ್ಶನ

ಸಂದರ್ಶಕ: ಜಿ.ಎನ್. ನಾಗರಾಜ್

ಜಿಲ್ಲಾ ಪರಿಷತ್ ವ್ಯವಸ್ಥೆಯ ಮೇಲೆ ಕಾಂಗ್ರೆ ಸರಕಾರ ನಿರಂತರವಾಗಿ ದಾಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪರಿಷತ್ ಮಂಡಲಗಳೊಡನೆ ಕಾಂಗ್ರೆ ಶಾಸಕರ ಸಂಬಂಧ, ಅಧಿಕಾರ ವಿಕೇಂದ್ರೀಕರಣಕ್ಕೆ ಕಾಂಗ್ರೆ ಪಕ್ಷದ ಪ್ರತಿಕ್ರಿಯೆ ಬಗ್ಗೆ ಒಂದು ಜಿಲ್ಲೆಯ ವಾಸ್ತವ ಪರಿಸ್ಥಿತಿಯ ಚಿತ್ರವನ್ನು "ಐಕ್ಯರಂಗ" ಓದುಗರ ಮುಂದಿದಲು ಸಿಪಿಐ(ಎಂ) ಜಿಲ್ಲಾ ಪರಿಷತ್ ಸದಸ್ಯ ಕಾಂ. ಮಾರುತಿ ಮಾನ್ಪಡೆಯವರನ್ನು ಸಂದರ್ಶಿಸಿತು. ನಾಲ್ಕು ವರ್ಷಗಳ ಅಧಿಕಾರ ವಿಕೇಂದ್ರೀಕರಣಕ್ಕೆ ಕಾಂಗ್ರೆ ಪ್ರತಿಕ್ರಯಿಸಿದ ರೀತಿಯನ್ನು ಸಂದರ್ಶನ ಬಣ್ಣಿಸಿದೆ.

ಪ್ರಶ್ನೆ:

ನಾಲ್ಕು ವರ್ಷಗಳಿಂದ ನೀವು ಜಿಲ್ಲಾ ಪರಿಷತ್ ಸದಸ್ಯರಾಗಿ ಅಧಿಕಾರ ವಿಕೇಂದ್ರೀಕರಣದ ಪ್ರತಿಕ್ರಿಯೆಯಲ್ಲಿ ಭಾಗವಹಿಸಿದ್ದೀರಿ. ಜಿಲ್ಲಾ ಪರಿಷತ್ ಸಭೆಗಳಲ್ಲಿ ಅಧಿಕಾರ ವಿಕೇಂದ್ರಾಕರಣದಲ್ಲಿ ಕಾಂಗ್ರೆ ಪಕ್ಷದ ಸದಸ್ಯರ ಭಾಗವಹಿಸುವಿಕೆ ಹೇಗೆ?

ಉತ್ತರ:

ಜಿಲ್ಲಾ ಪರಿಷತ್ ಸ್ಥಾಪಿತವಾದ ಮೊದಲ ವರ್ಷ ಕಾಂಗ್ರೆ ಪಕ್ಷದ ಶಾಸಕರು ನಮ್ಮ ಜಿಲ್ಲಾ ಪರಿಷತ್‌ನಲ್ಲಿ ಭಾಗವಹಿಸುತ್ತಿದ್ದರು. ಅಲ್ಲಿ ಅವರ ಜನ ವಿರೋಧಿ ನಿಲುಮೆಗಳಿಗೆ ಪಟ್ಟ ಭದ್ರ ಹಿತಾಸಕ್ತಿಗಳನ್ನು ರಕ್ಷಿಸುವ ಕೃತ್ಯಗಳಿಗೆ ಬೆಂಬಲ ಸಿಕ್ಕದಂತಾದಾಗ, ವಿರೋಧ ವ್ಯಕ್ತಪಡಿಸಲಾರಂಭಿಸಿದಾಗ ಸಭೆಗಳಿಗೆ ಬರುವುದನ್ನೇ ಬಿಟ್ಟರು. ಅವರ ವಿಧಾನ ಸಭಾ ಕ್ಷೇತ್ರದ ಪರಿಧಿಯೊಳಗೆ ಬರುವ ಜಿಲ್ಲಾ ಪರಿಷತ್ ಸದಸ್ಯರು ತಾವು ಹೇಳಿದಂತೆ ಕೇಳಬೇಕೆನ್ನುವ, ಜಿಲ್ಲಾ ಪರಿಷತ್, ಪರಿಷತ್ ಸದಸ್ಯರ ಅಭಿಪ್ರಾಯಗಳನ್ನು ಅಲ್ಲಗಳೆದು ಅವರ ಅಭಿಪ್ರಾಯಕ್ಕೆ ಬೆಲೆ ಕೊಡಬೇಕೆನ್ನುವ ಧೋರಣೆ ತೋರಿಸುತ್ತಿದ್ದರು. ರಾಜ್ಯದಲ್ಲಿ ಕಾಂಗ್ರೆ ಸರಕಾರ ಸ್ಥಾಪನೆಯಾದ ಮೇಲಂತೂ ಅವರು ಜಿಲ್ಲಾ ಪರಿಷತ್ ಸಭೆಗಳ ಗೊಡವೆಯನ್ನೇ ಬಿಟ್ಟರು. ಹೀಗೆ ಇದೇ ನಾಲ್ಕು ವರ್ಷಗಳಲ್ಲಿ ಮೊದಲ ವರ್ಷ ಮಾತ್ರ ಜಿಲ್ಲಾ ಪರಿಷತ್ ಸಭೆಗಳಿಗೆ ಹಾಜರಾಗಿದ್ದು ಎನ್ನಬಹುದು.

ಪ್ರಶ್ನೆ:

ಪಟ್ಟ ಭದ್ರ ಹಿತಾಸಕ್ತಿಗಳಿಗೆ ಬೆಂಬಲ ಅವರ ಜನವಿರೋಧಿ ನಿಲುಮೆಗಳು ಎಂದಿರಲ್ಲಾ, ವಿನದು ಸ್ವಲ್ಪ ವಿವರಿಸುವಿರಾ?

ಉತ್ತರ:

ಕಾಂಗ್ರೆ ಶಾಸಕರು ಜಿಲ್ಲಾ ಪರಿಷತ್ ಸಭೆಗಳಿಗೆ ಹಾಜರಾದಾಗಲೆಲ್ಲಾ ಅವರು ಎತ್ತುತ್ತಿದ್ದದು ಕದನಕ್ಕಿಳಿಯುತ್ತಿದ್ದುದು ಮುಖ್ಯವಾಗಿ ಹಳ್ಳಿಗಳ ಪಡಿತರ ವಿತರಣೆ ಅಂಗಡಿಗಳನ್ನು ಯಾರಿಗೆ ಕೊಡಬೇಕು ಎಂಬುದರ ಬಗ್ಗೆಯೇ. ತಮ್ಮ ಕಡೆಯವರಿಗೆ ಇದು ಸಿಗಬೇಕು ಅವರೇ ಕಾಳ ಸಂತೆಯಲ್ಲಿ ಮಾರುದುದ್ದು ಹೊಡೆಯುವಂತಾಗಬೇಕು ಎಂಬುದು ಅವರ ಗಲಾಟೆಯ ಮಥಿತಾರ್ಥ.

ಪ್ರಶ್ನೆ:

ಓಹೋ, ಅದರಿಂದಲೇ ಬಂಗಾರಪ್ಪನವರ ಸಂಪುಟದ ಕಣ್ಣು ಮೊದಲು ಪಡಿತರ ವ್ಯವಸ್ಥೆಯ ಮೇಲೆ ಬಿದ್ದದ್ದು.

ಉತ್ತರ:

ಹೌದು, ಅದರಿಂದಲೇ ಅವರು ಅದನ್ನು ಜಿಲ್ಲಾ ಪರಿಷತ್‌ನಿಂದ ತಪ್ಪಿಸಿ ಜಿಲ್ಲಾಧಿಕಾರಿಗಳ ಕೈಲಿ. ಇಡಬಯಸುತ್ತಿರುವುದು.

ಪ್ರಶ್ನೆ:

ಮತ್ತೆ ಇನ್ನು ಯಾವ ಪ್ರಶ್ನೆಗಳ ಬಗ್ಗೆ.............

ಉತ್ತರ:

ಲೋಕೋಪಯೋಗಿ ಕೆಲಸಗಳು ಹೊಸ ಶಾಲೆ, ಆಸ್ಪತ್ರೆಗಳ ಆರಂಭ ಇತ್ಯಾದಿ ಪ್ರಶ್ನೆಗಳನ್ನೆತ್ತುತ್ತಿದ್ದರು........

ಪ್ರಶ್ನೆ:

ಇದರಲ್ಲಿ ಜನ ವಿರೋಧಿಯಾದದ್ದು ಏನಿದೆ?

ಉತ್ತರ:

ಇದರಲ್ಲಿ ಜನವಿರೋಧಿಯಾದದ್ದು ಕೇವಲ ತಮ್ಮ ಕ್ಷೇತ್ರಗಳಲ್ಲಿ ತಮ್ಮ ಮತಗಳಿಕೆ ಪ್ರದೇಶಗಳಲ್ಲಿ ಮಾತ್ರ ತಮ್ಮವರಿಗೆ ಮಾತ್ರ ಈ ಕೆಲಸಗಳನ್ನು ಕೊಡಬೇಕು ಎಂದು ಬಯಸುತ್ತಿದ್ದುದು. ಜಿಲ್ಲಾ ಪರಿಷತ್ ವರ್ಷಕ್ಕೊಮ್ಮೆ ಇಡೀ ವರ್ಷದ ಕೆಲಸಗಳ ಬಗ್ಗೆ ಇಡೀ ಜಿಲ್ಲೆಯ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟು ಒಂದು ಆಕ್ಷನ್ ಪ್ಲಾನ್ ತಯಾರಿಸುತ್ತಿದ್ದಿತು. ಜಿಲ್ಲೆಯ ಎಲ್ಲಾ ಅಗತ್ಯಗಳಿಗೆ ಬಹಳಷ್ಟು ಹಣ ಬೇಕು. ಇರುವ ಹಣದಲ್ಲಿ ಯಾವುದಕ್ಕೆ ಪ್ರಾಶಸ್ತ್ಯ ನೀಡಬೇಕು, ಎಂಬುದರಲ್ಲಿ ಈ ಕೆಲಸ ನಡೆಯುತ್ತಿದ್ದಿತು. ಆದರೆ ಕಾಂಗ್ರೆ ಶಾಸಕರು ಈ ಆಕ್ಷನ್ ಪ್ಲಾನ್ ಬಂದುದನ್ನೇ ವಿರೋಧಿಸುತ್ತಿದ್ದರು. ಮತ್ತೆಲ್ಲ

> **ಪಂಚಾಯತ್ ವ್ಯವಸ್ಥೆ ಜಾರಿಗೆ ಬಂದ ಮೇಲೆ ಜನ ಎಚ್ಚತ್ತಿದ್ದಾರೆ. ಅಧಿಕಾರ ಕಿತ್ತು ಕೊಂಡರೆ ತಪ್ಪು ಹೆಜ್ಜೆ ಇಟ್ಟಂತಾಗುವುದು. ಅಂತಹ ಸಾಹಸಕ್ಕೆ ಇಳಿಯಬೇಡಿ.**

ಜಿಲ್ಲಾ ಪರಿಷತ್ ಚರ್ಚಿಸಿ ಒಪ್ಪದ ಮೇಲೆ ಅದನ್ನು ಕುಂಠಿತಗೊಳಿಸಲು ಬಹಳ ಪ್ರಯತ್ನ ಪಡುತ್ತಿದ್ದರು. ಈ ಆಕ್ಷನ್ ಪ್ಲಾನ್ ಹೊರತಾದ ಕೆಲಸಗಳನ್ನು ಮಾಡಿಸಲು, ಒತ್ತಡ ಹಾಕುತ್ತಿದ್ದರು.

ಪ್ರಶ್ನೆ:

ಹೇಗೆ?

ಉತ್ತರ:

ಮೇಲೆ ಆಕ್ಷನ್ ಪ್ಲಾನ್ ರಾಜ್ಯ ಸರಕಾದ ಮಂಜೂರಾತಿಗಾಗಿ ಬಂದಾಗ ಚೀಪ್ ಇಂಜನಿಯರ್‌ಗಳನ್ನು ಹಿಡಿದು ಅದನ್ನು ಬದಲಾಯಿಸಲು ಪ್ರಯತ್ನಿಸುತ್ತಿದ್ದರು. ಆದರೆ ಬಹಳಷ್ಟು ಸಾರಿ ಅವರು ಜಿಲ್ಲಾ ಪರಿಷತ್‌ನ ನಿರ್ಣಯಗಳನ್ನು ವಿರೋಧಿಸುವಂತೆ ಕೆಲಸ ಮಾಡಲು ನಿರ್ದೇಶನ ಕೊಡುತ್ತಿದ್ದರು. ದಬಾಯಿಸುತ್ತಿದ್ದರು. ಅವರನ್ನು ಮಣಿಸಲು ಪ್ರಯತ್ನಿಸುತ್ತಿದ್ದರು.

ಪ್ರಶ್ನೆ:

ಜಿಲ್ಲಾ ಪರಿಷತ್‌ನ ಅಧಿಕಾರಿಗಳು ಅವರಿಗೆ ಮಣಿಯುತ್ತಿದ್ದರೇ?

ಉತ್ತರ:

ಅಧಿಕಾರಿಗಳಿಗೆ ಇದೊಂದು ವಿಷಮ ಪ್ರಸಂಗ. ಮೊದಮೊದಲು ಆಕ್ಷನ್ ಪ್ಲಾನ್ ಪ್ರಕಾರವೇ ಕೆಲಸ ಮಾಡುತ್ತಿದ್ದರೂ ನಂತರ ಅದರಲ್ಲಿಯೂ ಕಾಂಗ್ರೆ ಸರಕಾರ ಆಯ್ಕೆಯಾದ ಮೇಲೆ ಜಿಲ್ಲಾ ಪರಿಷತ್‌ನ ಆಕ್ಷನ್ ಪ್ಲಾನ್‌ಗಳನ್ನು ಉಲ್ಲಂಘಿಸುವ ಉಪ ಆಜ್ಞೆಗಳನ್ನು ಹೊರಡಿಸುತ್ತಿದ್ದರು.

ಅದರಲ್ಲಿಯೂ ಜಿಲ್ಲಾ ಪರಿಷತ್ ಅಧೀನದ ಅಧಿಕಾರಿಗಳನ್ನು ವರ್ಗಾಯಿಸಲು ಅಧಿಕಾರವನ್ನು ಬಸವಲಿಂಗಪ್ಪನವರು ಜಿಲ್ಲಾ ಪರಿಷತ್‌ನ ಕೈಯಿಂದ ಕಸಿದುಕೊಂಡ ನಂತರ ಈ ಪ್ರವೃತ್ತಿ ವಿಪರೀತವಾಯಿತು. ಸುಮಾರು 3-4 ತಿಂಗಳು ಈ ವರ್ಗಾವಣೆ ಅವಧಿಯಲ್ಲಿ ಎಲ್ಲಾ ಅಭಿವೃದ್ಧಿ ಕೆಲಸಗಳು ಸ್ಥಗಿತವಾಯಿತು. ಎಲ್ಲರೂ ಬಂದು ಬೆಂಗಳೂರಿ-

ಎಲ್ಲರೂ ಬಂದು ಬೆಂಗಳೂರಿನಲ್ಲಿ ಕುಳಿತರು. ಶಾಸಕರನ್ನು ಮೊರೆ ಹೊಕ್ಕು ಅವರ ಬಾಲ ಬಡಿದು ವರ್ಗಾವಣೆ ಮಾಡಿಸಿಕೊಳ್ಳುವ ಪ್ರವೃತ್ತಿ, ಶಾಸಕರು ತಮಗೆ ಬೇಕಾದವರನ್ನು ತಮ ಕ್ಷೇತ್ರಕ್ಕೆ ಹಾಕಿಸಿಕೊಳ್ಳುವ ಅವಕಾಶ ಸಿಕ್ಕ ಮೇಲೆ ಅವರ ಜಿಲ್ಲಾ ಪರಿಷತ್‌ನ ನಿರ್ಣಯ ಆಜ್ಞೆಗಳಿಗೆ ಏಕೆ ಬೆಲೆ ಕೊಡಬೇಕು?

ಪ್ರಶ್ನೆ: ಹಾಗಾದರೆ ಈ ವರ್ಗಾವಣೆಯ ಮೂಲ ಸೂತ್ರ ಇಲ್ಲಿದೆ. ಅದಕ್ಕಾಗಿಯೇ ಕಾಂಗ್ರೆ ಸರಕಾರ ಎ ಮತ್ತು ಬಿ ದರ್ಜೆಯ ಅಧಿಕಾರಿಗಳ ವರ್ಗಾವಣೆಯ ಅಧಿಕಾರವನ್ನು ಕಿತ್ತುಕೊಳ್ಳುವ ತಿದ್ದುಪಡಿ ತಂದಿರುವುದು.

ಉತ್ತರ:

ಹೌದು. ಅಧಿಕಾರಿಗಳು ಮುಖ್ಯವಾಗಿ ರಾಜ್ಯ ಸರಕಾರಕ್ಕೆ ಹೊಣೆಗಾರರಾಗುವಂತೆ ಮಾಡಲು ಶಾಸಕರಿಗೆ ಮಾತ್ರ ಜವಾಬ್ದಾರರಾಗಿರುವಂತೆ ಮಾಡಿದ ಪ್ರಯತ್ನ ಇದು.

ಪ್ರಶ್ನೆ: ನಿಮ್ಮ ಕ್ಷೇತ್ರದಲ್ಲಿ ಇಂತಹ ಪ್ರಸಂಗ-- ಶಾಸಕರು ಜಿಲ್ಲಾ ಪರಿಷತ್‌ನಿರ್ಣಯದ ವಿರುದ್ಧ ಅಧಿಕಾರಿಗಳಿಗೆ ನಿರ್ದೇಶಿಸಿದ ಪ್ರಸಂಗಗಳು ನಡೆದದ್ದುಂಟೆ.?

ಉತ್ತರ:

ಹೌದು ನಡೆದಿವೆ. ಒಮ್ಮೆಯಂತೂ ಇದು ತೀವ್ರ ರೂಪ ಮುಟ್ಟಿತು. ಆಕ್ಷನ್ ಪ್ಲಾನ್‌ನಲ್ಲಿ ಇಲ್ಲದ ಕೆಲಸವವೊಂದನ್ನು ಮಾಡಲು ಹಚ್ಚಿ, ಅಧಿಕಾರಿ ಕೆಲಸವನ್ನೂ ಮಾಡಿಸಿದರು. ಬೇರೊಂದು ಯೋಜನೆಗಾಗಿ ಮೀಸಲಿದ್ದ ಹಣವನ್ನು ದುರ್ವಿನಿಯೋಗ ಮಾಡಿ ಈ ಕೆಲಸಕ್ಕೆ ಹಣ ಪಾವತಿ ಯನ್ನೂ ಮಾಡಿದರು. ಆಗ ನಾನು ಜಿಲ್ಲಾ ಪರಿಷತ್ ಸಭೆಯಲ್ಲಿ ಯೋಜನೆಯನ್ನು ಹರಿದು ಹಾಕಿ ಪ್ರತಿಭಟಿಸಿದ್ದೇನೆ. ಆಗ ಸಂಬಂಧಪಟ್ಟ ಅಧಿಕಾರಿಗಳು ಹೀಗೆ ಜಿಲ್ಲಾ ಪರಿಷತ್ತಿನ ನಿಯಮಾವಳಿಗಳನ್ನು ಮುರಿದದ್ದರಿಂದ ತಮ್ಮ ಗತಿಯೇನಾಗುವುದೋ ಎಂದು ಗಾಬರಿಯಾಗಿದದ್ದೂ ಉಂಟು.

ಇಂತಹ ಸಂದರ್ಭದಲ್ಲಿ ಜಿಲ್ಲಾ ಪರಿಷತ್ ಹೊರಗೆ ಕಾಂಗ್ರೆ ಜಿಲ್ಲಾ ಪರಿಷತ್ ಸದಸ್ಯರು ನಡುವೆ ಘರ್ಷಣೆ ತಿಕ್ಕಾಟಗಳು ಸಂಭವಿಸಿವೆ. ಜಿಲ್ಲಾ ಪರಿಷತ್ ಒಳಗೆ ಕಾಂಗ್ರೆ ಜಿಲ್ಲಾ ಪರಿಷತ್ ಸದಸ್ಯರ ನಾಯಕನೇ ಬಹಿರಂಗವಾಗಿ ಇದನ್ನು ಆದಿಕ್ಷೋರಿಸಿದ್ದೂ ಇದೆ.

ಪ್ರಶ್ನೆ: ಹಾಗಾದರೆ ಕಾಂಗ್ರೆ ಶಾಸಕರ ದದ್ದಾಳಿ ಪ್ರವೃತ್ತಿ ಅವರದೇ ಪಕ್ಷದ ಜಿಲ್ಲಾ ಪರಿಷತ್ ಸದಸ್ಯರಿಗೆ ಸಹನವಾಗುತ್ತಿರಲಿಲ್ಲ.

ಉತ್ತರ: ಹೌದು. ಇಷ್ಟೇ ಅಲ್ಲ. ಜಿಲ್ಲಾ ಪರಿಷತ್ ಪರಧಿಯಿಂದ ಕೆಲವು ಇಲಾಖೆಗಳನ್ನು ಕಾಂಗ್ರೆ ಸರಕಾರ ತೆಗೆಯುವ ಪ್ರಯತ್ನಮಾಡಿದಾಗ ಕಾಂಗ್ರೆ ಜಿಲ್ಲಾ ಪರಿಷತ್ ಸದಸ್ಯರೂ ಸೇರಿ ಜಿಲ್ಲಾ ಪರಿಷತ್ ಸರ್ವಾನುಮತದಿಂದ ವಿರೋಧಿಸುವ ನಿರ್ಣಯ ಅಂಗೀಕರಿಸಿತು.

ಪ್ರಶ್ನೆ:

ಜಿಲ್ಲಾ ಪರಿಷತ್‌ನ ಕೆಳಗಿನ ಸಂಸ್ಥೆಗಳೊಡನೆ ಕಾಂಗ್ರೆ ಶಾಸಕರ ವರ್ತನೆ ಹೇಗಿತ್ತು?

ಉತ್ತರ:

ಶಾಸಕರು ತಾಲ್ಲೂಕಾ ಪಂಚಾಯ್ತಿ ಸಮಿತಿಗಳ ಅಧಿಕಾರ ನಿಮಿತ್ತ ಅಧ್ಯಕ್ಷರು ಕೂಡಾ ಮಂಡಲಗಳ ನಡುವೆ ಸಮನ್ವಯ ಮಾಡುವ ಮಂಡಲಗಳ ಸಮಸ್ಯೆಯನ್ನು ಜಿಲ್ಲಾ ಪರಿಷತ್ ಮುಂದಿಡುವ ಈ ಎರಡೂ ಸಂಸ್ಥೆಗಳ ನಡುವಿನ ಕೊಂಡಿಯ ಕೆಲಸದ ಹೊಣೆಯೂ ಅವರ ಮೇಲಿದೆ. ಆದರೆ ಬಹಳಷ್ಟು ಸಾರಿ ಈ ಸಭೆಗಳನ್ನು ಅವರು ಹಾಜರಾಗುತ್ತಲೇ ಇರಲಿಲ್ಲ. ಹಾಜರಾದಾಗಲೂ ಇಡೀ ತಾಲೂಕಿನ ಸಮಸ್ಯೆಗಳನ್ನು ಚರ್ಚಿಸುವ ಅಭಿವೃದ್ಧಿ ಯೋಜನೆಗಳ ಪ್ರಗತಿಯನ್ನು ವಿವರವಾಗಿ ಪರಿಶೀಲಿಸುವ ಕೆಲಸ ಮಾಡುತ್ತಿರಲಿಲ್ಲ. ಮಂಡಲ ಪ್ರಧಾನರ ಸಮಸ್ಯೆ ಅಭಿಪ್ರಾಯಗಳನ್ನು ಸಾವಧಾನದಿಂದ ಕೇಳುವ ತಾಳ್ಮೆಯನ್ನು ತೋರಿಸುತ್ತಿರಲಿಲ್ಲ. ಕೇವಲ ಕೆಲವು ಅಧಿಕಾರಿಗಳ ಮೇಲೆ ತಮ್ಮ ಜಬರ್ದಸ್ತನ್ನು ಪ್ರದರ್ಶನ ಮಾಡುವ ಹವಣಿಕೆಯಲ್ಲಿರುತ್ತಿದ್ದರು. ಅವರ ಕ್ಷೇತ್ರದ ಮಂಡಲ ಪ್ರಧಾನರಿಗೂ ಶಾಸಕರಿಗೂ ಹಲವೊಮ್ಮೆ ಸಂಬಂಧ ಬಿಗಡಾಯಿಸಿದ್ದೂ ಉಂಟು.

ಪ್ರಶ್ನೆ:

ಕೊನೆಯದಾಗಿ ಮಂಡಲ ಪಂಚಾಯ್ತಿಗಳನ್ನು ರದ್ದು ಮಾಡುವ ಜಿಲ್ಲಾ ಪರಿಷತ್‌ನ ಅಧಿಕಾರನ್ನು ಕಿತ್ತುಕೊಳ್ಳುವ ಕಾಂಗ್ರೆ ಸರಕಾರದ ಪ್ರಯತ್ನದ ಬಗ್ಗೆ ಜನರ ಅಭಿಪ್ರಾಯ ಹೇಗಿದೆ.?

ಉತ್ತರ:

ಹಿಂದಿನ ಗ್ರಾಮ ಪಂಚಾಯ್ತಿ ವ್ಯವಸ್ಥೆಯನ್ನು ನೋಡಿದ್ದ ಜನರು ಮತ್ತೆ ಅದೇ ಸ್ಥಿತಿಗೆ ಮರಳುವುದರ ಬಗೆಗೆ ಜಿಲ್ಲಾ ಪರಿಷತ್ ವ್ಯವಸ್ಥೆ ಸೊರಗಿಸುವ ಪ್ರಯತ್ನದ ಬಗ್ಗೆ ಅಸಮ್ಮತಿ ವ್ಯಕ್ತಪಡಿಸುತ್ತಿದ್ದಾರೆ. ಮಂಡಲ ಪ್ರಧಾನರುಗಳು ಸೌಜನ್ಯದಿಂದ ಜನ ಹಿತಾದೃಷ್ಟಿಯಿಂದ ವರ್ತಿಸಿದ ಕಡೆ ಈ ರೀತಿಯ ಅಭಿಪ್ರಾಯ ತೀವ್ರವಾಗಿದೆ.

ಪರಿಷತ್--ಮಂಡಲ ವ್ಯವಸ್ಥೆಯಿಂದ ಜನ ಎಚ್ಚೆತ್ತಿದ್ದಾರೆ

--ಕಾಂಗ್ರೆ ಜಿಲ್ಲಾ ಪರಿಷತ್ ಸದಸ್ಯರು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಶಾಸನಕ್ಕೆ ತಿದ್ದುಪಡಿ ತರುತ್ತಿರುವ್ನನ್ನು ಪ್ರತಿಭಟಿಸಿ ಸಾಮೂಹಿಕವಾಗಿ ರಾಜಿನಾಮೆ ಸಲ್ಲಿಸಿರುವ ಮೈಸೂರು ಜಿಲ್ಲಾ ಪರಿಷತ್ ಸದಸ್ಯರು ಬುಧವಾರ ರಾತ್ರಿ ಮುಖ್ಯ ಮಂತ್ರಿ ಬಂಗಾರಪ್ಪನವರೊಡನೆ ನೇರ ಸಂಭಾಷಣೆಗಿಳಿದು ತರಾಟೆಗೆ ತೆಗೆದುಕೊಂಡರು

ಕರಡು ತಿದ್ದುಪಡಿ ವಿಧೇಯಕವನ್ನು ವಾಪಸು ತೆಗೆದುಕೊಳ್ಳುವಂತೆ ಆಗ್ರಹಪಡಿಸುವ ಪತ್ರದ ಜೊತೆಗೆ ರಾಜೀನಾಮೆ ಪತ್ರದ ಪ್ರತಿಯನ್ನು ಮುಖ್ಯ ಮಂತ್ರಿಗಳಿಗೆ ನೀಡಿದರು.

ಮೈಸೂರು ಜಿಲ್ಲಾ ಪರಿಷತ್ತಿನ ಒಟ್ಟು 64 ಸದಸ್ಯರ ಪೈಕಿ 54 ಮಂದಿ ಮೈಸೂರಿನಿಂದ ವಿಶೇಷ ಬಸ್ಸಿನಲ್ಲಿ ಆಗಮಿಸಿದರು. ಸಂಪುಟ ಸಭೆ ವಿಧಾನ ಸೌಧದಲ್ಲಿ ಸೇರಿತ್ತು. ಎಲ್ಲರೂ ಮೂರನೆಯ ಮಹಡಿಯಲ್ಲಿರುವ ಸಂಪುಟ ಸಭೆ ಕೋಣೆ ಬಳಿ ಜಮಾಯಿಸಿದರು.

ಸುಮಾರು ಮೂರು ಗಂಟೆ ಕಾಲ ಸಂಪುಟ ಸಭೆ ನಡೆಯಿತು. ಸಚಿವರು ಒಬ್ಬೊಬ್ಬರಾಗಿ ಹೊರ ಬಂದರು. ಪುಟ್ಟಸ್ವಾಮಿಗೌಡ, ಟಿ.ಎನ್. ನರಸಿಂಹಮೂರ್ತಿಯವರೊಡನೆ ಕುಶಲ ವಿಚಾರಣೆ ಆಯ್ತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಬಸವಲಿಂಗಪ್ಪ ಹೊರಬಂದಾಗ ನಡೆದ ಸಂಭಾಷಣೆ......

ಸದಸ್ಯರು:

ನಮಗೆ ಎಂತಹ ಕೆಲಸ ಮಾಡಿದಿರಿ. ಇಡೀ ವ್ಯವಸ್ಥೆಯನ್ನು ತೆಗೆಯಬೇಕಿತ್ತು.

ಬಸವಲಿಂಗಪ್ಪ:

ನಿಮ್ಮನ್ನು ಗೌರವಿಸುತ್ತೇನೆ.

ಕಾಂಗ್ರೆಸ್ ಸದಸ್ಯ:

ಎಂತಹ ಗೌರವ ಸಾರ್, ಯುವಕರ ಭವಿಷ್ಯ ಹಾಳು ಮಾಡಿದರು.

ಬಸವಲಿಂಗಪ್ಪ:

ನಿಮಗಿಂತಲೂ ಯುವಕರೂ ಇದ್ದಾರೆ

ಅಷ್ಟರಲ್ಲಿ ಮಹಿಳಾ ಸದಸ್ಯರು ಸೇರಿಕೊಂಡರು. ಅವರ ಕಡೆಗೆ ತಿರುಗಿದ ಬಸವಲಿಂಗಪ್ಪ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಲ್ಲಿ ನಿಮಗೆ ಅಧ್ಯಕ್ಷ ಪ್ರಧಾನ ಹುದ್ದೆಗಳಲ್ಲಿ ಪ್ರತಿಶತ 25 ರಷ್ಟು ಮೀಸಲಿಟ್ಟದ್ದೇವೆ. ಇನ್ನೇನಾಗಬೇಕು ಹೇಳಿ ಎಂದು ಲಿಫ್ಟ್‌ನತ್ತ ಹೊರಟರು.

ನಾಗರತ್ನಮ್ಮ ಸಂಪುಟ ಸಭೆ ಕೋಣೆಯಿಂದ ಬರುತ್ತಿದ್ದುದನ್ನು ಕಂಡ ಸದಸ್ಯರು ನಮ್ಮ ಜಿಲ್ಲೆ ಮಂತ್ರಿಗಳು ಬಂದರು, ವಿನ್ರಮ್ಮಾ ಹೀಗೆ ಮಾಡಿದಿರಿ ಎಂದಾಗ ನಾಗರತ್ನಮ್ಮನವರ ಮಾಮೂಲು ಧಾಟಿ ಉತ್ತರ ಹೀಗೆ ಬಂದಿತು."ನನ್ನ ಕೇಳ ಬೇಡಿ, ಚೀಫ್ ಮಿನಿಸ್ಟ್ರು ಇದ್ದಾರೆ. ಅವರನ್ನೇ ಕೇಳಿ" ಎಂದು ನಿಲ್ಲದೆ ಹೊರಟರು.

ಮುಖ್ಯ ಮಂತ್ರಿ ಬಂಗಾರಪ್ಪ ಹೊರಬಂದಾಗ ಜಿಲ್ಲಾ ಪರಿಷತ್ ಅಧ್ಯಕ್ಷ ವೃಷಬೇಂದ್ರಪ್ಪ, ಪ್ರತಿಪಕ್ಷದ ನಾಯಕ ಬಸವರಾಜ್, ರೇವೇಗೌಡ, ನಾಗರಾಜ ಮಲ್ಲಾಡಿ, ಮಹಿಳಾ ಸದಸ್ಯರು ಹಾಗೂ ಇತರರು ಸುತ್ತುವರೆದರು.

ಸದಸ್ಯರು:

ನಾವೆಲ್ಲಾ ಮೈಸೂರಿನವರು ರಾಜಿನಾಮೆ ಕೊಟ್ಟದ್ದೇವೆ.

ಬಂಗಾರಪ್ಪ:

ಓಹೋ ಮೈಸೂರಿನವರೇ.

ಮನವಿ ಮತ್ತು ಅಧಿಕಾರ ತ್ಯಾಗ ಪತ್ರದ ಪ್ರತಿಯನ್ನು ಮುಖ್ಯಮಂತ್ರಿಗಳಿಗೆ ಜಿಲ್ಲಾ ಪರಿಷತ್ ಅಧ್ಯಕ್ಷರು ನೀಡಿದರು. ವಿಧೇಯಕ ಹಿಂದಕ್ಕೆ ತೆಗೆದುಕೊಳ್ಳದಿದ್ದರೆ, ನಾಳೆಯಿಂದ ಮಂಡಲ ಪಂಚಾಯಿತಿಗಳ ಸದಸ್ಯರೂ ಸಾಮೂಹಿಕ ರಾಜಿನಾಮೆ ನೀಡ್ತಾರೆ ಸಾರ್.

> **ಹಿಂದಿನ ಗ್ರಾಮ ಪಂಚಾಯ್ತಿ ವ್ಯವಸ್ಥೆಯನ್ನು ನೋಡಿದ್ದ ಜನರು ಮತ್ತೆ ಅದೇ ಸ್ಥಿತಿಗೆ ಮರಳುವುದರ ಬಗೆಗೆ ಜಿಲ್ಲಾ ಪರಿಷತ್ ವ್ಯವಸ್ಥೆ ಸೊರಗಿಸುವ ಪ್ರಯತ್ನದ ಬಗ್ಗೆ ಅಸಮ್ಮತಿ ವ್ಯಕ್ತಪಡಿಸುತಿದ್ದಾರೆ.**

ಬಂಗಾರಪ್ಪ:

ಕಾಂಗ್ರೆಸ್ ಸದಸ್ಯರು ಇದ್ದಾರೇನು?

ನಾವೆಲ್ಲಾ ರಾಜಿನಾಮೆ ಕೊಟ್ಟದ್ದೇವೆ.

ಬಸವರಾಜ್:

ಸ್ಥಾನಿಕ ವ್ಯವಸ್ಥೆಯನ್ನು ಬಲಗೊಳಿಸುವ ಬದಲು ದುರ್ಬಲಗೊಳಿಸಲಾಗುತ್ತಿದೆ. ಪ್ರಯತ್ನ ಬೇಡ.

ಪ್ರತಿಪಕ್ಷದವರೊಡನೆ ನಡೆಸಿದ ಮಾತುಕತೆ ಮತ್ತು ವಿಧಾನ ಸಭೆಯಲ್ಲಿ ಮಾಡಿದ ಭಾಷಣವನ್ನು ಬಂಗಾರಪ್ಪ ಸದಸ್ಯರಿಗೆ ಪುನರುಚ್ಚರಿಸಿದರು.

ನಾಗರಾಜ ಮೂರ್ತಿ:

ಪಕ್ಷದ ಅಧ್ಯಕ್ಷ ಈ ವಿಧೇಯಕವನ್ನು ಒಪ್ಪಾರೆಯೇ ಕೇಳಿ, ಒಪ್ಪಿದರೆ ಜಾರಿಗೆ ತನ್ನಿ.

ಬಂಗಾರಪ್ಪ:

ಅವರನ್ನು ಮತ್ತೊಮ್ಮೆ ಬೇಕಾದರೆ ಕೇಳೋಣ.

ನಾಗರಾಜ ಮಲ್ಲಾಡಿ:

ಪಂಚಾಯತ್ ವ್ಯವಸ್ಥೆ ಜಾರಿಗೆ ಬಂದ ಮೇಲೆ ಜನ ಎಚ್ಚತ್ತಿದ್ದಾರೆ. ಅಧಿಕಾರ ಕಿತ್ತು ಕೊಂಡರೆ ತಪ್ಪು ಹೆಜ್ಜೆ ಇಟ್ಟಂತಾಗುವುದು. ಅಂತಹ ಸಾಹಸಕ್ಕೆ ಇಳಿಯಬೇಡಿ.

ಬಂಗಾರಪ್ಪ:

ಅಧಿಕಾರ ಮೊಟಕು ಮಾಡುವ ಉದ್ದೇಶ ನಮಗೆ ಇಲ್ಲ. ಹಾಗಾಗಲೂ ಬಾರದು. ಈಗಿರುವುದರಲ್ಲಿ ಬದಲಾವಣೆ ಬೇಕು ಎನ್ನುವುದನ್ನು ಮರೆಯಲೂಬಾರದು. ಪ್ರತಿಪಕ್ಷದ ಸಂಯುಕ್ತ ಪರಿಶೀಲನೆ ಸಮಿತಿಗೆ ಒಪ್ಪಿಸುವಂತೆ ಕೇಳ್ತಿದಾರೆ. ನಮ್ಮವರು ವಿರೋಧಿಸುತ್ತಾರೆ. ಹೇಗೂ ನಾಳೆ ನಡೆಯುವ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ತೀರ್ಮಾನ ಆಗ್ತದೆ.

ಸಿದ್ದರಾಜ್(ಮತ್ತೊಬ್ಬ ಸದಸ್ಯ)

ಈ ವ್ಯವಸ್ಥೆ ಹೇಗೂ ಪ್ರಾಯೋಗಿಕವಾಗಿ ನಡೆಯುತ್ತಿದೆ. ಐದು ವರ್ಷದ ಅವಧಿ ಮುಗಿಸಲು ಅವಕಾಶ ಕೊಡಿ. ನೀವು ಜಾರಿಗೆ ತಂದರೆ ಚಳುವಳಿ ನಡೆಯಬಹುದು.

ನಾಗರಾಜ ಮೂರ್ತಿ:

ನಮ್ಮ ಅಭಿಪ್ರಾಯ ತೆಗೆದುಕೊಳ್ಳಿ. ಎಂಎಲ್‌ಎಗಳ ಮಾತು ಕೇಳಬೇಡಿ.

ನಾಗರಾಜ ಮಲ್ಲಾಡಿ:

ದಕ್ಷ ಆಡಳಿತ ನೀಡುವುದು ನಿಮ್ಮ ಇಚ್ಛೆಯಾಗಿದೆ. ಅಧಿಕಾರ ಕಿತ್ತುಕೊಳ್ಳುವುದಲ್ಲ.

ಬಂಗಾರಪ್ಪ:

ಕೆಲವು ಸಮಯದಲ್ಲಿ ವ್ಯಕ್ತಿಗತ ಅಭಿಪ್ರಾಯ ಭಿನ್ನವಾಗಿರುತ್ತದೆ. ಆದರೆ ಪಕ್ಷ ತೆಗೆದುಕೊಳ್ಳುವ ನಿರ್ಧಾರಕ್ಕೆ ಎಲ್ಲರೂ ತಲೆಬಾಗಲೇ ಬೇಕು.

ಮಲ್ಲಾಡಿ:

ಎಲ್ಲಾ ಪಕ್ಷಗಳೂ ಆ ಪಕ್ಷದ ನಾಯಕರ ಮಾತನ್ನು ಒಪ್ಪಲೇಬೇಕಲ್ಲವೇ?

ಬಂಗಾರಪ್ಪ:

ಈ ನಾಯಕ ಎಲ್ಲ ಸಾಕಷ್ಟು ಪ್ರಯತ್ನ ಮಾಡಿದ್ದಾನೆ.

ನಿಮ್ಮ ಎಲ್ಲ ಅಭಿಪ್ರಾಯಗಳನ್ನು ನಾಳೆ ಶಾಸಕಾಂಗ ಪಕ್ಷದ ಸಭೆ ಮುಂದಿಡುತ್ತೇನೆ ಎಂದು ಬಂಗಾರಪ್ಪ ಕೈ ಮುಗಿದು ಲಿಫ್ಟ್‌ನತ್ತ ಹೊರಟರು.

ಕೃಪೆ: ಕನ್ನಡ ಪ್ರಭ, 29-11-90)

ಪಶ್ಚಿಮ ಬಂಗಾಳದಲ್ಲಿ ಕೋಮುಶಕ್ತಿಗಳ ಆಟ ಏಕೆ ಸಾಗುತ್ತಿಲ್ಲ?

-ಜ್ಯೋತಿಬಸು

ಹತ್ತು ದಿನಗಳ ಅಂತರದಲ್ಲೇ ಕಲ್ಕತ್ತಾ ನಗರ ಎರಡು ಬೃಹತ್ ಚಾರಿತ್ರಿಕ ರ‍್ಯಾಲಿಗಳನ್ನು ಕಂಡಿತು. ಅಕ್ಟೋಬರ್ 30 ರಂದು ಅಯೋಧ್ಯೆಯಲ್ಲಿ ಕೋಮುವಾದಿಗಳು ದೇಶದ ಜಾತ್ಯತೀತ ಸ್ವರೂಪಕ್ಕೆ ಪ್ರಾಣಾಂತಿಕ ಆಘಾತ ನೀಡಲು ಪ್ರಯತ್ನಿಸುತ್ತಿದ್ದಾಗ ಅದಕ್ಕೆ ಸವಾಲಾಗಿ ಕಲ್ಕತ್ತೆಯಲ್ಲಿ ಬೃಹತ್ ಮಾನವ ಸರಪಳಿ ಹೆಣೆಯಲಾಗಿತ್ತು. ಅದಾದ ಹತ್ತೇ ದಿನಗಳಲ್ಲಿ, ನವೆಂಬರ್ 9 ರಂದು ಒಂದು ಬೃಹತ್ ಕೋಮುಸೌಹಾರ್ದ ಮೆರವಣಿಗೆ ನಡೆಯಿತು. ಮುಖ್ಯಮಂತ್ರಿ ಜ್ಯೋತಿಬಸುರವರ ಮನವಿ ಮೇರೆಗೆ ನಡೆದ ಈ ಮೆರವಣಿಗೆಯಲ್ಲಿ ಇಡೀ ಕಲ್ಕತ್ತಾ ನಗರವೇ ಭಾಗವಹಿಸಿತು. ಹಲವಾರು ಸುಪ್ರಸಿದ್ಧ ಮಹಿಳೆಯರು, ಪುರುಷರು, ಉಪ ಕುಲಪತಿಗಳು, ಕಲಾವಿದರೊಂದಿಗೆ ಕವಿಗಳೊಂದಿಗೆ, ಅಧ್ಯಾಪಕರು ವಿದ್ಯಾರ್ಥಿಗಳೊಂದಿಗೆ, ಡಾಕ್ಟರು, ನರ್ಸುಗಳೊಂದಿಗೆ, ರೈತರು, ಕಾರ್ಮಿಕರು, ನೌಕರರೊಂದಿಗೆ ಕೋಮುಸೌಹಾರ್ದದ ಘೋಷಣೆ ಮೊಳಗಿಸುತ್ತಾ "ಹಿಂದೂ ಮುಸ್ಲಿಮರು ಒಂದೇ ಟೊಂಗೆಯ ಎರಡು ಹೂವುಗಳು" ಎಂದು ಸಾರುತ್ತಾ ಕಲ್ಕತ್ತೆಯ ಬೀದಿಗಳಲ್ಲಿ ಸಾಗಿದರು. ಜ್ಯೋತಿಬಸು, ಎಡರಂಗದ ಅಧ್ಯಕ್ಷ ಶೈಲೇನ್ ದಾಸ್ ಗುಪ್ತಾ, ಕಲ್ಕತ್ತಾ ಕಾರ್ಪೋರೇಷನ್ ಮೇಯರ್, ಮಂತ್ರಿಗಳು ಮತ್ತಿತರರು ಈ ಮೆರವಣಿಗೆಗೆ ನೇತೃತ್ವ ನೀಡಿದರು.

ಪಶ್ಚಿಮ ಬಂಗಾಳ ಭಾರತದಲ್ಲಿ ಪ್ರಜಾಪ್ರಭುತ್ವದ ಕಾವಲು ಬುರುಜು ಎಂದು ಒಪ್ಪಲಾರದ ಕಮ್ಯುನಿಸ್ಟ್ ವಿರೋಧಿಗಳೂ ಕೂಡಾ ಅದು ದೇಶದ ಕೋಮು ಸೌಹಾರ್ದತೆಯ, ಜಾತ್ಯತೀತ ಪರಂಪರೆಯ ಕೋಟೆ ಎಂದು ಒಪ್ಪುತ್ತಾರೆ. ಇದು ಹೇಗೆ ಸಾಧ್ಯವಾಯಿತು? 1946ರಲ್ಲಿ ದೇಶದಲ್ಲಿ ಅತ್ಯಂತ ಕ್ರೂರ ಹಿಂಸಾಚಾರ ಕಂಡ ರಾಜ್ಯದಲ್ಲಿ ಇಂತಹ ಪರಿವರ್ತನೆ ಹೇಗೆ ಸಾಧ್ಯವಾಯಿತು?

50ರ ದಶಕದಲ್ಲಿ ಸಣ್ಣ, ಸೀಮಿತ ಪ್ರಭಾವದ ಪಕ್ಷ ಈಗ ಸತತವಾಗಿ 13 ವರ್ಷಗಳಿಂದ ರಾಜ್ಯದಲ್ಲಿ ಸರಕಾರಕ್ಕೆ ಯಶಸ್ವೀ ನೇತೃತ್ವ ನೀಡಲು ಶಕ್ತವಾದ ಕಥೆಯೇ ಜಾತ್ಯತೀತತೆಯ ರಂಗದಲ್ಲಿ ಅದರ ಅಮೋಘ ಯಶಸ್ಸಿನ ಕಥೆ ಕೂಡಾ..

"ನಮಗೆ ದೊರೆಯುತ್ತಿರುವ ಜನಸಾಮಾನ್ಯರ ಪ್ರೀತ್ಯಾದರಗಳಿಗೆ ನಮ್ಮ ಪಕ್ಷದ ಕಾರ್ಯಕರ್ತರ ಪ್ರಾಮಾಣಿಕತೆ,ಕಠಿಣ ಶ್ರಮ ಹಾಗೂ ಆತ್ಮವಿಶ್ವಾಸ ಎಷ್ಟು ಕಾರಣವೋ ನಮ್ಮ ಪಕ್ಷದ 'ಸಂಯುಕ್ತ ರಂಗ' ಧೋರಣೆಯೂ ಅಷ್ಟೇ ಪ್ರಮುಖ ಕಾರಣ" ಎಂದಿದ್ದರು ಕಾಂ: ಜ್ಯೋತಿಬಸು ಜನವರಿ 1982ರಲ್ಲಿ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದ ಒಂದು ಲೇಖನದಲ್ಲಿ. 'ಸಂಯುಕ್ತ ರಂಗ'ದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಕಾರ್ಯತಂತ್ರವನ್ನು ಪಶ್ಚಿಮಬಂಗಾಳದಲ್ಲಿ ಹೇಗೆ ಅಳವಡಿಸಲಾಯಿತು ಎಂದುವಿವರಿಸಿದ್ದ ಈ ಲೇಖನದಲ್ಲಿ ಕೋಮುವಾದದ ವಿರುದ್ಧ ಹೋರಾಟದ ಕುರಿತ ಭಾಗವನ್ನು ಮುಂದೆ ಕೊಡಲಾಗಿದೆ.



...ಪಶ್ಚಿಮ ಬಂಗಾಲದ ಸಂಯುಕ್ತ ರಂಗದ ನೇತೃತ್ವದ ಆಂದೋಲನಗಳ ಇನ್ನೊಂದು ಪ್ರಮುಖ ಪರಿಣಾಮವೆಂದರೆ ಕೋಮುಶಕ್ತಿಗಳ ಸೋಲು.

ನಲ್ವತ್ತರ ದಶಕದಲ್ಲಿ ಮತ್ತು ಐವತ್ತರ ದಶಕದ ಆರಂಭದಲ್ಲಿ ಪಶ್ಚಿಮ ಬಂಗಾಲದಲ್ಲಿ ಹಿಂದೂ ಮಹಾಸಭೆಗೆ ಸಾಕಷ್ಟು ಪ್ರಭಾವವಿತ್ತು. ಡಾ. ಶ್ಯಾಮಪ್ರಸಾದ್ ಮುಖರ್ಜೀಯವರಿಗೆ ಬಹಳ ಅನುಯಾಯಿಗಳಿದ್ದರು. 1952ರ ಚುನಾವಣೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮತಗಳೂ, 8 ಸ್ಥಾನಗಳೂ[ಅವಿಭಜಿತ ಕಮ್ಯುನಿಸ್ಟ್ ಪಕ್ಷಕ್ಕೆ 28 ಸ್ಥಾನಗಳು ಲಭಿಸಿದ್ದವು] ದೊರೆತಿದ್ದವು. ಆದರೆ ಐವತ್ತರ ದಶಕ ಮುಗಿಯುವ ವೇಳೆಗೆ ಈ ರಾಜ್ಯದ ರಾಜಕೀಯದಲ್ಲಿ ಈ ಕೋಮುವಾದಿ ಪಕ್ಷ ಹೇಳ ಹೆಸರಿಲ್ಲದಂತೆಹೋಯಿತು. ರಾಜ್ಯದ ಕೋಮುವಾದಿಗಳು ಇದರಿಂದಾಗಿ ಕಾಂಗ್ರೆಸ್ ಪಾಳೆಯದಲ್ಲಿ ಆಶ್ರಯ ಪಡೆಯಬೇಕಾಯಿತು.

ಕೋಮು ಶಕ್ತಿಗಳು ಅತ್ಯಂತ ದೊಡ್ಡ ಸೋಲು ಉಂಡದ್ದು ನಿರಾಶ್ರಿತರ ಆಂದೋಲನದಲ್ಲಿ. ಅವಿಭಜಿತ ಬಂಗಾಲದ ಪೂರ್ವ ಭಾಗದಿಂದ ಕೋಮುಗಲಭೆಗಳಿಗೆ ಬಲಿಯಾಗಿ ಎಲ್ಲವನ್ನೂ ಕಳಕೊಂಡು ನಿರಾಶ್ರಿತರಾಗಿ ಬಂದ ಜನ ಹಿಂದೆಮುಂದೆ ನೋಡದೆ ತಮ್ಮ ನಾಯಕತ್ವವನ್ನು ಒಪ್ಪಿಕೊಳ್ಳುತ್ತಾರೆ ಎಂಬ ದೊಡ್ಡ ಆಸೆಯಿಟ್ಟುಕೊಂಡಿದ್ದರು ಈ ಕೋಮುವಾದಿಗಳು. ಅವರ ಈ ನಿರೀಕ್ಷೆ ಕೇವಲ ಕಲ್ಪನೆ ಕೂಡಾ ಆಗಿರಲಿಲ್ಲ. ಆದರೆ ನಮ್ಮ ಸಂಗಾತಿಗಳು ಅವರನ್ನು ಸಂಘಟಿಸಲು, ಅವರ ಮೇಲೆ ಪೊಲೀಸ್ ದಬ್ಬಾಳಿಕೆಯನ್ನು ಎದುರಿಸಲು, ಹೊಸ ವಾತಾವರಣವೊಂದರಲ್ಲಿ ಅವರಲ್ಲಿ ಮತ್ತೆ ವಿಶ್ವಾಸ ಕುದುರಿಸಲು ಪಟ್ಟ ಅಪಾರ ಶ್ರಮದಿಂದಾಗಿ ನಿರಾಶ್ರಿತರು, ನಿರಾಶ್ರಿತರ ಸಾಮೂಹಿಕ ಸಂಘಟನೆ (ಯು. ಸಿ.ಆರ್.ಸಿ.)ಮತ್ತು ನಮ್ಮ ಪಕ್ಷದ ಕಟ್ಟಾ ಬೆಂಬಲಿಗರಾದರು. ಇದರಿಂದ ಎರಡು ಪ್ರಯೋಜನಗಳಾದವು. ರಾಜ್ಯದಲ್ಲಿ ನಮ್ಮ ಪಕ್ಷದ ಸಾಮೂಹಿಕ ಆಧಾರವೂ ವ್ಯಾಪಕಗೊಂಡಿತು. ಕೋಮು ಸಂಘರ್ಷಗಳು ರಾಜ್ಯದ ಸಾಮಾಜಿಕ ಜೀವನದ ಶಾಶ್ವತ ಲಕ್ಷಣಗಳಾಗಿ ಬಿಡುತ್ತವೋ ಎಂಬ ಭಯವನ್ನು ದೂರ ನಿಲ್ಲುವಂತಾಯಿತು.

ಅಂದಿನಿಂದ ನಿರಾಶ್ರಿತರ ನಡುವೆ ನಮ್ಮ ಪ್ರಭಾವವನ್ನು ಕುಂದಿಸಲು ಹಲವಾರು ಪ್ರಯತ್ನಗಳು ನಡೆದವು. ಕೆಲವೇ ವರ್ಷಗಳ ಹಿಂದೆ ಕೂಡಾ ದಂಡಕಾರಣ್ಯದಲ್ಲಿ ನೆಲೆನಿಂತಿದ್ದ ನಿರಾಶ್ರಿತರಲ್ಲಿ ತಪ್ಪು ಮಾಹಿತಿ ಹರಡಿ ಒಂದು ಲಕ್ಷಕ್ಕೂ ಹೆಚ್ಚು ನಿರಾಶ್ರಿತರನ್ನು ಪಶ್ಚಿಮ ಬಂಗಾಲದ ಮರೀಚ್ ಝಾಪಿ ಎಂಬಲ್ಲಿ ತಂದು ತುಂಬುವ ಪ್ರಯತ್ನ ನಡೆಯಿತು. ಇದು ರಾಜ್ಯದ ಆರ್ಥಿಕದ ಮೇಲೆ ದೊಡ್ಡ ದುಷ್ಪರಿಣಾಮ ಬೀರುವ ಭಯ ಹರಡಿತ್ತು. ಆದರೆ ಅಂತ್ಯದಲ್ಲಿ ಈ ಜನ ತಮ್ಮ ತಪ್ಪನ್ನರಿತು ಹಿಂದೆ ಹೋದರು.

ಪಶ್ಚಿಮ ಬಂಗಾಲದಲ್ಲಿ ಜಾತಿ, ಧರ್ಮ, ಭಾಷೆ ದೊಡ್ಡ ಪಾತ್ರ ವಹಿಸದಿರಲು ಎರಡು ಮುಖ್ಯ ಕಾರಣಗಳಿವೆ-- ಮೊದಲನೆಯದು ಚಾರಿತ್ರಿಕ ಕಾರಣ. ರಾಜಾರಾಮ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟಾಗೋರ್‌ರಂತಹ ಮಹಾನ್ ಸಮಾಜ ಸುಧಾರಕರ, ವಿದ್ವಾಂಸರ ಕೊಡುಗೆ. ಎರಡನೆಯ ಪ್ರಮುಖ ಕಾರಣ ಸಂಯುಕ್ತ ರಂಗದ ನೇತೃತ್ವದ ಆಂದೋಲನ. ಈ ಆಂದೋಲನ ಜನಸಾಮಾನ್ಯರ ಹತಾಶೆಗಳಿಗೆ, ಕಾಂಗ್ರೆಸ್--ವಿರೋಧಿ ಭಾವನೆಗಳಿಗೆ. ಒಂದು ಆರೋ-

ಪಶ್ಚಿಮ ಬಂಗಾಲದಲ್ಲಿ ಜಾತಿ, ಧರ್ಮ, ಭಾಷೆ ದೊಡ್ಡ ಪಾತ್ರ ವಹಿಸದಿರಲು ಎರಡು ಮುಖ್ಯ ಕಾರಣಗಳಿವೆ-- ಮೊದಲನೆಯದು ಚಾರಿತ್ರಿಕ ಕಾರಣ. ರಾಜಾರಾಮ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟಾಗೋರ್‌ರಂತಹ ಮಹಾನ್ ಸಮಾಜ ಸುಧಾರಕರ, ವಿದ್ವಾಂಸರ ಕೊಡುಗೆ. ಎರಡನೆಯ ಪ್ರಮುಖ ಕಾರಣ ಸಂಯುಕ್ತ ರಂಗದ ನೇತೃತ್ವದ ಆಂದೋಲನ. ಈ ಆಂದೋಲನ ಜನಸಾಮಾನ್ಯರ ಹತಾಶೆಗಳಿಗೆ, ಕಾಂಗ್ರೆಸ್--ವಿರೋಧಿ ಭಾವನೆಗಳಿಗೆ. ಒಂದು ಆರೋ-
ಗ್ಯಕರ ಮತ್ತು ಜಾತ್ಯಾತೀತ ರಾಜಕೀಯ ಸ್ವರೂಪ ನೀಡಿ ಅವರು ಕುರುಡು ಕೋಮುವಾದ ಮತ್ತು ಸಂಕುಚಿತವಾದದಿಂದ ದೂರವಿರುವಂತೆ ಮಾಡಿತು. ನಿಜ, ಅಪಾಯ ಇನ್ನೂ ಉಳಿದಿದೆ. ಅದಕ್ಕಾಗಿ ಜಾಗರೂಕರಾಗಿರುವುದು ಅಗತ್ಯ.

1950ರ ಹೊತ್ತಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ರಾಷ್ಟ್ರೀಯ ಭಾವನೆಗಳು ತೀವ್ರಗಾಮಿ ಸ್ವರೂಪ ಪಡೆಯಲಾರಂಭಿಸಿದ್ದವು. ಆದರೆ ಈ ತೀವ್ರಗಾಮಿ ಸಾಮ್ರಾಜ್ಯಶಾಹಿ- ಆಂದೋಲನದ ಬೆಳವಣಿಗೆಯೊಂದಿಗೆ ರಾಜಕೀಯ ಪ್ರಕ್ರಿಯೆಯಿಂದ ಕೂಡಿದ ಭಾರತ ಎರಡು ಪ್ರಮುಖ ಕೋಮುಗಳಾಗಿಯೂ ವಿಭಜನೆಗೊಂಡಿತು. 1906ರಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ಸ್ಥಾಪನೆಗೊಂಡಿತು. 1907ರಲ್ಲಿ ಅಖಿಲ ಭಾರತ ಹಿಂದೂ ಮಹಾಸಭಾ ಸ್ಥಾಪನೆಗೊಂಡಿತು. ಪರಿಣಾಮವಾಗಿ ಸ್ವಾತಂತ್ರ್ಯ ಆಂದೋಲನ ಈ ಎರಡು ಕೋಮುಗಳ ಮಧ್ಯೆ ಕಿತ್ತಾಟಗಳು ಮತ್ತು ರಾಜಿಗಳೊಂದಿಗೇ ಬೆಳೆಯುತ್ತಾ ಬಂತು. ಗಾಂಧೀಜಿಯವರ ನೇತೃತ್ವದಲ್ಲಿ 1920-21ರಲ್ಲಿ ನಡೆದ ಕಾಂಗ್ರೆಸ್-ಖಿಲಾಫತ್ ಆಂದೋಲನ ಸ್ವಾತಂತ್ರ್ಯ ಆಂದೋಲನದಲ್ಲಿನ ಹಿಂದೂ ಮತ್ತು ಮುಸ್ಲಿಂ ಪುನರುತ್ಥಾನವಾದಿ ಪ್ರವೃತ್ತಿಗಳ ನಡುವೆ ಒಪ್ಪಂದ ತರುವ ಪ್ರಯತ್ನದ ಒಂದು ಗಮನಾರ್ಹ ಉದಾಹರಣೆ.

ಆದರೆ ಇದೂ ಅಲ್ಪ ಕಾಲಿಕವಾಗಿತ್ತು. ಅಷ್ಟೇ ಅಲ್ಲ, ಈ ಆಂದೋಲನದ ನಂತರ ಅದು ಇತರೆ ರಾಷ್ಟ್ರೀಯ ವಾದಿಗಳೂ, ಕ್ರಾಂತಿಕಾರಿಗಳೂ ಆಗಿದ್ದ ಹಲವರು ತೀವ್ರಗಾಮಿ ಹಿಂದೂ ಪುನರುತ್ಥಾನವಾದಿಗಳಾದರು. ವಿ.ಡಿ.ಸಾವರ್ಕರ್ ಅಂತಹವರಲ್ಲಿ ಒಬ್ಬರು. ಅವರ ಹಿಂದುತ್ವದ ಪರಿಕಲ್ಪನೆಯಿಂದ ಪ್ರೇರಿತರಾದ ಕಾಂಗ್ರೆಸ್ ಸದಸ್ಯ ಡಾ.ಹೆಡ್ಗೆವಾರ್ ನೇತೃತ್ವದಲ್ಲಿ ನಾಗಪುರದಲ್ಲಿ 1925ರಲ್ಲಿ ಕೆಲವು ತೀವ್ರಗಾಮಿ ಹಿಂದೂ ಪುನರುತ್ಥಾನವಾದಿಗಳು 'ರಾಷ್ಟ್ರೀಯ ಸ್ವಯಂ ಸೇವಕ ಸಂಘ'(ಆರ್‌ಎಸ್‌ಎಸ್) ಸ್ಥಾಪಿಸಿದರು.

ಸ್ವಾತಂತ್ರ್ಯದ ನಂತರ, ಗಾಂಧಿಜಿಯವರ ಹತ್ಯೆಯ ನಂತರ 1949ರಲ್ಲಿ ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಪ್ರಶ್ನೆ ಆರ್.ಎಸ್.ಎಸ್. ಮುಖಂಡರ ಮುಂದೆ ನಿಂತಿತು. ಅದರ ಸಮ್ಮುಖ ಆಗ ಐದು ದಾರಿಗಳಿದ್ದವು ಎನ್ನುತ್ತಾರೆ "ದಿ ಬ್ರದರ್ ಹುಡ್ ಇನ್ ಸೇಫ್ರನ್"(ಕಾವಿ ಭ್ರಾತೃತ್ವ) ಎಂಬ ಗ್ರಂಥದ ಕರ್ತೃಗಳಾದ ವಾಲ್ಟರ್ ಆಂಡರ್‌ಸನ್ ಮತ್ತು ಶ್ರೀಧರ್ ದಾಮ್ಲೆ.--(1) ತಾನೇ ಒಂದು ರಾಜಕೀಯ ಪಕ್ಷವಾಗುವುದು (2) ಒಂದು ರಾಜಕೀಯ ಅಂಗವನ್ನು ಸ್ಥಾಪಿಸುವುದು (3) ಹಿಂದೂ ಮಹಾಸಭಾದಂತಹ ರಾಜಕೀಯ ಪಕ್ಷದೊಂದಿಗೆ ಒಂದು ರೀತಿಯ ಧ್ವನಿಕ್ಕೆ ರಚಿಸುವುದು (4) ರಾಜಕೀಯದಿಂದ ದೂರವಿರುವುದು ಅಥವಾ (5) ಕಾಂಗ್ರೆಸ್‌ನೊಂದಿಗೆ ಮಾತುಕತೆ ಮುಂದುವರೆಸುವುದು. ಸಕ್ರಿಯ ಕಾರ್ಯಕರ್ತರು ಬೇರೆಬೇರೆ ರಲ್ಲಿ ಒಂದನ್ನು ಆರಿಸಿಕೊಳ್ಳಬಯಸುತ್ತಿದ್ದರು.

ಆಗ ಶ್ಯಾಮ್ ಪ್ರಸಾದ್ ಮುಖರ್ಜೀ ನೆಹರೂರವರ ಮಧ್ಯಾವಧಿ ಮಂತ್ರಿಮಂಡಳದಲ್ಲಿ ಒಬ್ಬ ಮಂತ್ರಿಯಾಗಿದ್ದರು. ಹಿಂದೂ ಪುನರುತ್ಥಾನವಾದರ ಒಬ್ಬ ಮುಖಂಡರಾಗಿ ಮೂಡಿಬರಲು ಪ್ರಯತ್ನಿಸುತ್ತಿದ್ದರು. ಶ್ರೀಯವರ ಮುಖರ್ಜೀಯವರು(ಹಿಂದೂ ಮಹಾಸಭಾ [illegible] ಧ್ಯಕ್ಷರಾದ) ಒಂದು ರಾಜಕೀಯ ಪಕ್ಷ [illegible] ಸಬೇಕು. ಆರ್‌ಎಸ್‌ಎಸ್ ಅದನ್ನು ಬೆಂಬಲಿಸುವುದು ಎಂದು ನಿರ್ಧರಿಸಲಾಯಿತು. ಹೀಗೆ ಸ್ಥಾಪನೆಗೊಂಡದ್ದೇ (ಅಕ್ಟೋಬರ್ 1951ರಲ್ಲಿ) ಭಾರತೀಯ ಜನಸಂಘ--ದಿಟಹಿಂದು ಹಿಂದಿನ [illegible] ಕಾರ. ಅದರ ಸ್ಥಾಪಕ ಡಾ. ಶ್ಯಾಮಪ್ರಸಾದ್ ಮುಖರ್ಜೀ ಬಂಗಾಳದವರು. ಬಂಗಾಳದಲ್ಲಿ ಪ್ರಭಾವ ಹೊಂದಿದ್ದವರು.

ಹೀಗೆ ಭಾರತದ ಇತಿಹಾಸ 1920ರ [illegible] ದಿಂದ ಮತ್ತು ಸ್ವಾತಂತ್ರ್ಯದ ನಂತರ [illegible] ಹೋಗಿದ್ದ ತೀವ್ರಗಾಮಿ ಹಿಂದೂ ಪುನರುತ್ಥಾನವಾದಿಗಳು ಪ್ರತ್ಯೇಕ ಸಂಘಟನೆಗಳನ್ನು [illegible] ಪ್ರತ್ಯೇಕ ರಾಜಕೀಯ ಪಕ್ಷವಾಗಿ [illegible] ಪಶ್ಚಿಮ ಬಂಗಾಳದಲ್ಲಿ ರಾಜಕೀಯವಾಗಿ [illegible] ಇಲ್ಲದಂತಾಗಿ ಅಲ್ಲಿನ [illegible] ಕೋಳಗೆ ಆಶ್ರಯ ಪಡೆಯಬೇಕಾಯಿತು.

ಪಂಜಾಬಿನಲ್ಲಿ ಭಯೋತ್ಪಾದನೆಯ ಮತ್ತೊಂದು ಅಲೆ

ದೇಶದ ಗಮನ ಈಗ ಮತ್ತೆ ದಿಲ್ಲಿಯಿಂದ ಪಂಜಾಬ್‌ನತ್ತ ಹರಿಯತೊಡಗಿದೆ. ಕೆಲದಿನಗಳ ಬೆಳವಣಿಗೆಗಳೇ ಅದಕ್ಕೆ ಕಾರಣ. ಮುಗ್ಧ ಜನರ ಕಗ್ಗೊಲೆಗಳ ಸರಣಿ, 'ಪಂಥೀಯ ಸಮಿತಿ'ಯಿಂದ ಪತ್ರಿಕೆಗಳಿಗೆ ಬೆದರಿಕೆ, ಅಕಾಲಿಗಳ ಸಭೆ-ನಿಷೇಧ, ನಾಯಕರ ಬಂಧನ ಇತ್ಯಾದಿ ಅವುಗಳಲ್ಲಿ ಪ್ರಮುಖ.

ನವೆಂಬರ್ 22 ರಂದು ರಾತ್ರಿ ಭಯೋತ್ಪಾದಕರು ರಾಜ್ಯದಲ್ಲಿ 13 ಜನ ಬಸ್ ಪ್ರಯಾಣಿಕರ ಅಮಾನವೀಯ ಕೊಲೆ ಮಾಡಿದರು. ರಾಜ್ಯಪಾಲ ವೀರೇಂದ್ರ ವರ್ಮಾ ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿದ್ದಾರೆ. ನ.24ರ ಶನಿವಾರ ತರನ್ ತಾರನ್ ಜಿಲ್ಲೆಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟ ಪೋಲೀಸ್ ಸೂಪರಿಂಟೆಂಡೆಂಟ್(ಎಸ್‌ಪಿ) ಪರ್‌ಜಿತ್ ಸಿಂಗ್ ಮತ್ತು ಮೂವರು ಭದ್ರತಾ ಪಡೆ ಸಿಬ್ಬಂದಿಗಳನ್ನು ಆಹುತಿ ತೆಗೆದುಕೊಂಡಿತು. ಅದೇ ರೀತಿ, ಜಲಂಧರ್‌ನಲ್ಲಿ 25 ರಂದು ರಾತ್ರಿ ಭಯೋತ್ಪಾದರು ಒಂದು ಮಗುವಿನ ಸಹಿತ 14 ಜನರನ್ನು ಗುಂಡಿಟ್ಟು ಕೊಂದರು.

ದೇಶದ್ರೋಹಿಗಳಿಂದ ಪತ್ರಿಕೆಗಳಿಗೆ 'ಪಾಠ'

ಹೆಂಗಸರು--ಮಕ್ಕಳೆನ್ನದೆ ಮುಗ್ಧ ಜನರನ್ನು ರಾಜಕೀಯ ನಾಯಕರನ್ನು, ಪೋಲೀಸ್-ಭದ್ರತಾ ಪಡೆಯ ಅಧಿಕಾರಿಗಳನ್ನು, ಕೊಲ್ಲುವ ಹೇಯ ಕಾರ್ಯ ಮುಂದುವರಿದಿದೆ. ಇದು ತಮ್ಮ 'ಮಹಾನ್ ಗುರಿಗಾಗಿ' ಭಯೋತ್ಪಾದಕರು ನಡೆಸುವ 'ಪವಿತ್ರ' ಕಾರ್ಯ. ಇದೆಲ್ಲ ನಡೆಯುತ್ತಿರುವುದು ಶಾಂತಿ--ಸೌಹಾರ್ದತೆ--ಸಮರಸ ಜೀವನ ಬೋಧಿಸಿದ ಸಿಖ್ ಧರ್ಮದ ಹೆಸರಿನಲ್ಲಿ. ಸಿಖ್ಖರಿಗಾಗಿಯೇ ಪ್ರತ್ಯೇಕ 'ಖಲಿಸ್ತಾನ್' ಬೇಕೆಂದು ಹೇಳುತ್ತಿರುವ ಜನರು ತಮ್ಮ ಧರ್ಮದ ಬೋಧನೆಗಳಿಗೆ ತದ್ವಿರುದ್ಧವಾಗಿ ನಡೆಯುತ್ತಿರುವುದು ಸ್ಪಷ್ಟ. ಅದಕ್ಕೂ ಹೆಚ್ಚಾಗಿ ಧರ್ಮಾಂಧರಾಗಿ ಜನರನ್ನು ತಪ್ಪು ದಾರಿಗೆಳೆಯಲು ಯತ್ನಿಸುತ್ತಿದ್ದಾರೆ. ಯಾತ್ರಿಕರೂ, ಧರ್ಮಗುರುಗಳೂ ಬಲಿಯಾಗುತ್ತಿದ್ದಾರೆ.

ಈ ರೀತಿ ವಿದೇಶಗಳ ಬೆಂಬಲದಿಂದ, ವಿದೇಶಿ ನೆಲದಿಂದಲೂ ಕಾರ್ಯಾಚರಿಸುತ್ತಿವ ದೇಶದ್ರೋಹಿ ಶಕ್ತಿಗಳು ಸುದ್ದಿ ಮಾಧ್ಯಮಗಳಿಗೆ, ಅದರಲ್ಲೂ ವಿಶೇಷವಾಗಿ ಪತ್ರಿಕೆಗೆ ಅಪಾಯ ಉಂಟುಮಾಡುತ್ತಿರುವುದನ್ನು ಕಾಣುತ್ತಾ ಬಂದಿದ್ದೇವೆ. ಸಂಪಾದಕೀಯ ಸಿಬ್ಬಂದಿಗಳು, ವರದಿಗಾರರು ಮಾತ್ರವಲ್ಲದೆ ಪತ್ರಿಕೆಯನ್ನು ಓದುಗರಿಗೆ ಮುಟ್ಟಿಸುವ ಏಜಂಟರು ಕೂಡ ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದಾರೆ.

ಆದರೂ ಎದೆಗುಂದದೆ ಭಯೋತ್ಪಾದಕರ ಕೃತ್ಯಗಳನ್ನು ಪತ್ರಿಕೆಗಳು ವರದಿ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ತಮ್ಮ ತಂತ್ರದಲ್ಲಿ ವಿಫಲರಾದ 'ಸಿಖ್ ಧರ್ಮದ ಸ್ವಘೋಷಿತ ಸಂರಕ್ಷಕರು' ಈಗ ಪತ್ರಿಕೆಗಳ ಬಾಯಿ ಮುಚ್ಚಿಸಲು ಹೊರಟಂತಿದೆ. ಪಾಕಿಸ್ತಾನದಲ್ಲಿ ತನ್ನ 'ತಲೆ' ಹೊಂದಿರುವ ಪಂಥೀಯ ಸಮಿತಿ ಪತ್ರಿಕೆಗಳಿಗೆ ಹಾಕಿರುವ ಬೆದರಿಕೆಯಿಂದ ಈ ಅಂಶ ಗೊತ್ತಾಗುತ್ತದೆ.

'ಖಲಿಸ್ತಾನ್' ನೆಲದಿಂದ ವರದಿ ಮಾಡುವವರೆಲ್ಲರು ತಮ್ಮ ಸೂಚನೆಗಳನ್ನು ಪಾಲಿಸಬೇಕೆಂದು ಪಂಥೀಯ ಸಮಿತಿ ಹೇಳಿದೆ. ಖಲಿಸ್ತಾನ್ ಸ್ಥಾಪನೆಗೆ ಪ್ರಯತ್ನಿಸುತ್ತಿರುವವರನ್ನು ಉಗ್ರಗಾಮಿಗಳು ಅಥವಾ ಭಯೋತ್ಪಾದಕರೆಂದು ಹೇಳಬಾರದು, ಹೋರಾಟಗಾರ ಎನ್ನಬೇಕು; ಅವರ ಪದನಾಮಗಳನ್ನು(ಡೆಸಿಗ್ನೇಷನ್ ಅಂದರೆ ಕಮಾಂಡರ್, ಏರಿಯಾ ಕಮಾಂಡರ್ ಇತ್ಯಾದಿ) ಇನ್ವರ್ಟೆಡ್ ಕಾಮಾಗಳಲ್ಲಿ ಹಾಕಬಾರದು; ಸ್ವಘೋಷಿತ ನಾಯಕ ಎನ್ನಬಾರದು; ಪಾಕಿಸ್ತಾನ ಮೂಲದ 'ಪಂಥೀಯ ಸಮಿತಿ' ಎಂದು ವರ್ಣಿಸಬಾರದು---ಇತ್ಯಾದಿ ಇತ್ಯಾದಿಗಳು ಈ ಸಮಿತಿ ಪತ್ರಿಕೆಗಳಿಗೆ ನಿಗದಿ ಪಡಿಸಿರುವ ಪಾಠಗಳಾಗಿವೆ. ಇವುಗಳು ಡಿಸೆಂಬರ್ ಒಂದರಿಂದ ಜಾರಿಗೆ ಬರುತ್ತವೆ. ಸುದ್ದಿಸಂಸ್ಥೆಗಳಿಗೂ ಇದು ಅನ್ವಯವಾಗುತ್ತದಂತೆ. ಅವನ್ನು ಪಾಲಿಸದಿದ್ದರೆ ಕೊಲೆ ಮಾಡಲಾಗುತ್ತದೆಂದೂ ಅದು ಬೆದರಿಕೆ ಹಾಕಿದೆ. ಕೆಲವು ನಿರ್ದಿಷ್ಟ ಪತ್ರಕರ್ತರನ್ನೂ ಅದು ಗುರುತಿಸಿದೆ.

ಈಗಾಗಲೇ ಅಪಾರ ಕಷ್ಟ ಎದುರಿಸುವ ಪಂಜಾಬ್ ಪತ್ರಿಕೆಗಳು ಭಯೋತ್ಪಾದಕರ ಸೂತ್ರಧಾರರ ಈ ಬೆದರಿಕೆಯನ್ನು ದೃಢವಾಗಿ ಎದುರಿಸುವ ಸ್ಥೈರ್ಯ ಹೊಂದಿವೆ ಎಂದು ಆಶಿಸಬಹುದು. ಈ ಬೆದರಿಕೆ ಪತ್ರಿಕಾ ಮಾಧ್ಯಮದ ಮೇಲಿನ ದಾಳಿಯಾಗಿದೆ. ಅದನ್ನು ರಾಜಕೀಯವಾಗಿ ಎದುರಿಸಬೇಕಾಗಿದೆ.

ಆನಂದ್‌ಪುರ್ ಸಾಹಿಬ್ ಸಭೆ ನಿಷೇಧ

ಈ ಮಧ್ಯೆ 'ಸಿಖ್ ಪಂಥದ ಏಕತೆ'ಗಾಗಿ ಆನಂದಪುರ ಸಾಹಿಬ್‌ನಲ್ಲಿ ನಡೆಸಲು ಉದ್ದೇಶಿಸಿದ್ದ 'ಸಮಾವೇಶ' ವನ್ನು ಪಂಜಾಬ್ ಸರಕಾರ ನಿಷೇಧಿಸಿತು. ಅಕಾಲಿದಳದ ಅನೇಕ ಬಣಗಳು ಈ ಸಮಾವೇಶಕ್ಕೆ ಕರೆ ನೀಡಿದ್ದವು.

ಏಕತೆ ಹೆಸರಿನಲ್ಲಿ ಪ್ರತ್ಯೇಕತಾ ಶಕ್ತಿಗಳು ಸರಕಾರದೊಡನೆ ಸಂಘರ್ಷಕ್ಕಿಳಿಯುವ ಹಾಗೂ ಹಿಂಸೆಗೆ ಪ್ರಚೋದಿಸುವುದು ಸಮಾವೇಶದ ಉದ್ದೇಶವಾಗಿತ್ತು ಎಂದು ಸರಕಾರ ಹೇಳಿದೆ. ಅಕಾಲಿದಳ(ಎಂ)ರ ಅಧ್ಯಕ್ಷ ಸಿಮ್ರಾನ್‌ಜಿತ್ ಸಿಂಗ್ ಮಾನ್, ಅಕಾಲಿ ದಳ(-ಎಲ್) ಹಂಗಾಮಿ ಅಧ್ಯಕ್ಷ ತೋತಾ ಸಿಂಗ್, ಮಾಜಿ ಗೃಹ ಸಚಿವ ಕಸ್ವಲ್‌ಜಿತ್ ಸಿಂಗ್, ಶ್ರೀಮತಿ ಗುರುಜಿತ್ ಕೌರ್ ಮೊದಲಾದ ಪ್ರಮುಖರನ್ನು ಬಂಧಿಸಲಾಯಿತು.

ಆಹ್ವಾನ ಸರಿಯೇ? ಪಂಜಾಬ್ ಸಮಸ್ಯೇ ಇನ್ನಷ್ಟು ಉಲ್ಬಣಗೊಳ್ಳುವುದನ್ನು ತಡೆಯಲು ಬಂಧನ ಮತ್ತು ಸಭೆ ನಿಷೇಧ ಅನಿವಾರ್ಯ ಕ್ರಮವಾಗಿತ್ತೆಂದು ಪ್ರಧಾನಿ ಚಂದ್ರಶೇಖರ್ ನ.2 6 ರಂದು ಮುಂಬಯಿಯಲ್ಲಿ ಪ್ರತಿಪಾದಿಸಿದರು. ಆದರೆ, ಮಾತುಕತೆಗಾಗಿ ಬರುವಂತೆ ಭಯೋತ್ಪಾದಕರಿಗೆ ಕರೆ ನೀಡಿರುವ ಪ್ರಧಾನಿಯವರ ಕ್ರಮ ಸರಿಯೇ ಎನ್ನುವುದು ಪ್ರಶ್ನಾರ್ಹವಾಗಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಯೊಂದಿಗೆ ಕಣ್ಣುಮುಚ್ಚಾಲೆ ಆಡುತ್ತಿರುವ ಶಕ್ತಿಗಳನ್ನು ಜನರಿಂದ ಪ್ರತ್ಯೇಕಗೊಳಿಸಿ ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಮೂಲ ವಿಷಯಗಳಿಗೆ ಪರಿಹಾರ ಕಂಡುಕೊಂಡು ಪಂಜಾಬ್ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಭಯೋತ್ಪಾದಕರ ಎಷ್ಟೇ ದಾಳಿ-- ದೌರ್ಜನ್ಯದ ನಡುವೆಯೂ ಪಂಜಾಬ್‌ನ ಜನರು ಏಕತೆ ಕಾಪಾಡಿಕೊಂಡು ಬಂದಿರುವುದು ಅಲ್ಲಿ ಪ್ರತ್ಯೇಕತಾವಾದಿ 'ಖಲಿಸ್ತಾನ್' ಬೇಡಿಕೆಗೆ ಬೆಂಬಲವಿಲ್ಲದಿರುವುದರ ಸಂಕೇತವಾಗಿದೆ.

ಎಲ್ಲ ಎಡ-ಪ್ರಜಾಸತ್ತಾತ್ಮಕ, ಜಾತ್ಯಾ-

ದೇಶದೊಳಗೆ

ತೀತ ಹಾಗೂ ದೇಶಪ್ರೇಮಿ ಶಕ್ತಿಗಳು ಐಕ್ಯ ಕಾರ್ಯಾಚರಣೆ ತೀವ್ರಗೊಳಿಸುವುದು ಅತ್ಯಗತ್ಯ.

ಕೇಂದ್ರ ಸಂಪುಟದಲ್ಲಿ ಒಬ್ಬ 'ಕಲ್ವಿ'

ದೇಶದ ಎಲ್ಲಾ ಹಿತಾಸಕ್ತಿಗಳನ್ನು ಬದಿಗೊತ್ತಿ ಸ್ವಾರ್ಥಲಾಲಸೆಯಿಂದ ಪ್ರಧಾನಿ ಪಟ್ಟವೇರಿದ ಚಂದ್ರಶೇಖರ್ ಸಂಪುಟದಲ್ಲಿ ಒಬ್ಬ 'ಕಲ್ವಿ' ಸೇರ್ಪಡೆಯಾಗಿದ್ದಾರೆ. ಸ್ವಲ್ಪ ಸಮಯದ ಹಿಂದೆ ಲೋಕಸಭೆಯಲ್ಲಿ 'ಸತಿ ಪದ್ಧತಿ' ಸಮರ್ಥಿಸುವ ಒಬ್ಬ ಸದಸ್ಯೇ(ವಿಜಯರಾಜೇ ಸಿಂಧ್ಯಾ) ಇದ್ದದ್ದು ಬಹಿರಂಗಕ್ಕೆ ಬಂದಿತ್ತು. ಈ ಕೆಟ್ಟ ವಿಚಾರ ಇದೀಗ ನೀತಿ ನಿರ್ಧಾರಕ ವ್ಯವಸ್ಥೆಯಲ್ಲೂ ಪ್ರತ್ಯಕ್ಷವಾದಂತಾಗಿದೆ. ಸಂಪುಟ ವಿಸ್ತರಣೆ ವೇಳೆ ಸೇರಿಸಿಕೊಂಡಿರುವ ಇಂಧನ ಖಾತೆಯ ಕ್ಯಾಬಿನೆಟ್ ದರ್ಜೆ ಸಚಿವ ಕಲ್ಯಾಣ್ ಸಿಂಗ್ ಕಲ್ವಿ ಅವರೇ ಸತಿ ಪದ್ಧತಿಯ ಸಮರ್ಥಕ ವ್ಯಕ್ತಿ. ದೇಶಾದ್ಯಂತ ಅಲ್ಲೋಲಕಲ್ಲೋಲ ಉಂಟುಮಾಡಿದ ರೂಪಾ ಕನ್ವರ್ ಸತಿ ಹೋದಾಗ ಮಧ್ಯಯುಗದ ಈ ಅಮಾನವೀಯ ಪದ್ಧತಿಯನ್ನು ಸಮರ್ಥಿಸಿದ ಕಲ್ಯಾಣಸಿಂಗ್ ಕಲ್ವಿ ಆಗ ಜನತಾದಳದಲ್ಲಿದ್ದರು. ಆಗ ಅವರ ಹೇಳಿಕೆಗಳು ತೀವ್ರ ಟೀಕೆಗೆ ಒಳಗಾಗಿದ್ದವು. ಈಗ ಅದೇ ವ್ಯಕ್ತಿ 'ಸಮಾಜವಾದ'ದ ಪ್ರತಿಪಾದಕ ಚಂದ್ರಶೇಖರ್‌ರ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಪ್ರಧಾನಿಯಾಗಲು ಸಹಕರಿಸಿದ ಗೆಳೆಯನಿಗೆ ಅಷ್ಟಾದರೂ ಉಡುಗೊರೆ ಕೊಡದಿದ್ದರೆ ಸರಿಯಾಗುತ್ತದೆಯೇ---ಛೇ!

ಅಂದ ಹಾಗೆ 'ಕಲ್ವಿ' ಗೆ ತುಳು ಭಾಷೆಯಲ್ಲಿ 'ಕಳ್ಳ' ಎಂದರ್ಥ.

ಸದಾ ಕಾಂಗ್ರೆಯೇತರ ಪ್ರತಿಪಕ್ಷಗಳಲ್ಲಿ ಒಡಕು ಮೂಡಿಸುವ 'ನಿಷ್ಠಾ'ವಂತ 'ವ್ಯಾಪಾರಿ' ಡಾ. ಸುಬ್ರಹ್ಮಣ್ಯ ಸ್ವಾಮಿಯವರಿಗೆ ಸಂಪುಟದಲ್ಲಿ ಸ್ಥಾನ ಸಿಕ್ಕಿದೆ. ಅವರಿಗೆ ದೊರೆತಿರುವುದು 'ವಾಣಿಜ್ಯ' ಖಾತೆ!

ಪ್ರಮಾಣ ವಚನ ಸಮಾರಂಭದ ಅವಾಂತರ

ನವೆಂಬರ್ 21 ರಂದು ಕೇಂದ್ರ ಸಚಿವ ಸಂಪುಟ ವಿಸ್ತರಣೆ ಆಯಿತು. ಬೆಳಗ್ಗೆ 9 ಗಂಟೆಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಿಗದಿಯಾಗಿತ್ತು. ಅಲ್ಲಿಗೆ ಬಂದ ಸುದ್ದಿಗಾರರಿಗೆ ಭದ್ರತಾ ಸಿಬ್ಬಂದಿಗಳ ಆದೇಶದೆ ಹಾಗೂ ಲಾಠಿ ಏಟಿನ ಸ್ವಾಗತ ಕಾದಿತ್ತು. ವಿದೇಶಿ ಪತ್ರಕರ್ತರು ಸೇರಿದಂತೆ ಅನೇಕ ವರದಿಗಾರರು ಹಾಗೂ ಛಾಯಾಗ್ರಾಹಕರು ಲಾಠಿ ಪ್ರಹಾರಕ್ಕೆ ಒಳಗಾದರು. ಘರ್ಷಣೆ ಎಷ್ಟರಮಟ್ಟಿಗೆ ಬೆಳೆದಿತ್ತೆಂದರೆ ರಾಷ್ಟ್ರಪತಿ ಭವನದ ಅಶೋಕ ಸಭಾಂಗಣ ಕಿಟಕಿ ಗಾಜುಗಳು ಒಡೆದು ಗಾಜಿನ ಚೂರುಗಳು ತಗಲಿ ಕೆಲವು ಪತ್ರಕರ್ತರಿಗೆ ರಕ್ತ ಬಂದಿತು.

ಪತ್ರಕರ್ತರು ಸೇರಿದಂತೆ ಯಾರೇ ಆದರೂ ಎಂಟು ಗಂಟೆ ನಂತರ ಬಂದರೆ ಒಳಗೆ ಬಿಡದಂತೆ ಉನ್ನತ ಅಧಿಕಾರಿಗಳು ಸೂಚನೆ ನೀಡಿದ್ದೇ ಈ ಘಟನೆಗೆ ಕಾರಣವಾಯಿತು ಎಂದು ಹೇಳಲಾಗಿದೆ. ಸುದ್ದಿಗಾರರು ತಮ್ಮದಲ್ಲದ ತಪ್ಪಿಗೆ ಅನ್ಯಾಯವನ್ನು ಅನುಭವಿಸಬೇಕಾಯಿತು. ಈ ಹಲ್ಲೆಯನ್ನು ಪತ್ರಕರ್ತರ ವಿವಿಧ ಸಂಘಟನೆಗಳು ಹಾಗೂ ಸಿಪಿಐ(ಎಂ) ಸಹಿತ ವಿವಿಧ ಪಕ್ಷಗಳು ತೀವ್ರವಾಗಿ ಖಂಡಿಸಿದವು. ಘಟನೆಯ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿ ಪತ್ರಕರ್ತರು ರಾಜಧಾನಿಯಲ್ಲಿ ವ್ಯಾಪಕ ಪ್ರತಿಭಟನೆ ನಡೆಸಿದರು.

ನ್ಯಾಯಾಂಗ ತನಿಖೆ: ನ.21 ರಂದು ರಾಷ್ಟ್ರಪತಿ ಭವನದಲ್ಲಿ ಪತ್ರಕರ್ತರ ಮೇಲೆ ನಡೆದ ಹಲ್ಲೆಯ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಲು ರಾಷ್ಟ್ರಪತಿ ಆರ್. ವೆಂಕಟರಾಮನ್ ನ.24 ರಂದು ಆಜ್ಞಾಪಿಸಿದ್ದಾರೆ. ವಿಚಾರಣೆಗಾಗಿ ಸುಪ್ರೀಂ ಕೋರ್ಟಿನ ಹಾಲಿ ಇಲ್ಲವೇ ನಿವೃತ್ತ ನ್ಯಾಯಾಧೀಶರನ್ನು ನೇಮಿಸುವಂತೆ ಭಾರತದ ಮುಖ್ಯ ನ್ಯಾಯಾಧೀಶರನ್ನು ಅವರು ಕೋರಿದ್ದಾರೆ.

ಉತ್ತರ ಪ್ರದೇಶ: ಕಾಂಗ್ರೆಗೆ ರಾಜೀನಾಮೆ

ಕೇಂದ್ರದಲ್ಲಿ ಸರಕಾರ ರಚಿಸಲು ಜನತಾದಳದ ಚಂದ್ರಶೇಖರ್ ನೇತೃತ್ವದ 'ಸಮಾಜವಾದಿ' ಬಣಕ್ಕೆ ಬೆಂಬಲ ನೀಡಿದ ಸಮಯಸಾಧಕ ಕ್ರಮವನ್ನು ವಿರೋಧಿಸಿ ಉತ್ತರ ಪ್ರದೇಶದ ಹಲವು ಕಾಂಗ್ರೆ ನಾಯಕರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಕಾಂಗ್ರೆ ಅಧ್ಯಕ್ಷ ರಾಜೀವ್‌ಗಾಂಧಿಗೆ ಪತ್ರವೊಂದನ್ನು ಬರೆದಿರುವ ಈ ಮುಖಂಡರು ಇದನ್ನೇ ತಮ್ಮ ಸಾಮೂಹಿಕ ರಾಜೀನಾಮೆ ಪತ್ರವೆಂದು ಪರಿಗಣಿಸಬೇಕು ಎಂಬುದಾಗಿ ಹೇಳಿದ್ದಾರೆ.

ಕುಸಿದ ವಿಶ್ವಾಸಾರ್ಹತೆ: ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿ ಕಾಂಗ್ರೆ ನಾಯಕರು ನೀಡುತ್ತಿರುವ ವಿರೋಧಾಭಾಸದ ಹೇಳಿಕೆಗಳಿಂದ ಪಕ್ಷದ ವಿಶ್ವಾಸಾರ್ಹತೆ ಕುಸಿದಿದೆಯೆಂದು ಈ ನಾಯಕರು ಹೇಳಿದ್ದಾರೆ.

ಗಜ್ರಾಲಾ ಪ್ರಕರಣ ಸುಪ್ರೀಂಕೋರ್ಟ್ ನೋಟಿಸ್

ಉತ್ತರ ಪ್ರದೇಶದ ಗಜ್ರಾಲಾದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ನಡೆದ ಅತ್ಯಾಚಾರಕ್ಕೆ ಸಂಬಂಧಪಟ್ಟು ವಿಚಾರಣೆ ನಡೆಸುತ್ತಿರುವ ಸುಪ್ರೀಂಕೋರ್ಟ್‌ನ ವಿಭಾಗೀಯ ಪೀಠ ಕೇಂದ್ರ ಸರಕಾರ, ರಾಜ್ಯ ಸರಕಾರ, ಮುಖ್ಯ ಮಂತ್ರಿ ಮುಲಾಯಂ ಸಿಂಗ್ ಯಾದವ್ ಮತ್ತು ಇತರ ಮೂವರಿಗೆ ನೋಟಿಸ್‌ಗಳನ್ನು ಜಾರಿ ಮಾಡಿದೆ.

ನ್ಯಾ.ಬಿ.ಸಿ. ರೇ ಮತ್ತು ನ್ಯಾ. ಎಂ. ಫಾತಿಮಾ ಬೀವಿ ಈ ಪೀಠದಲ್ಲಿದ್ದಾರೆ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಈ ಹೇಯ ಅತ್ಯಾಚಾರ ಪ್ರಕರಣ ಬೆಳಕಿಗೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಚಳುವಳಿ ತೀವ್ರ: ಹಿಮಾಚಲ ಸೇಬು ಬೆಳೆಗಾರರ ನಿರ್ಧಾರ

ತಮ್ಮ ಬೆಳೆಗಳಿಗೆ ನ್ಯಾಯವಾದ ಬೆಲೆಯ ಬೇಡಿಕೆ ಮುಂದಿಟ್ಟು ಹಿಮಾಚಲ ಪ್ರದೇಶದ ಸೇಬು ಬೆಳೆಗಾರರು ದೀರ್ಘ ಸಮಯದಿಂದ ಹೋರಾಟ ನಡೆಸಿಕೊಂಡು ಬರುತ್ತಿದ್ದಾರೆ. ಈ ಚಳುವಳಿಗೆ ತೋರಿರುವ ಪ್ರತಿಕ್ರಿಯೆಯಿಂದ ಅಲ್ಲಿನ ಬಿಜೆಪಿ ನೇತೃತ್ವದ ಸರಕಾರದ ರೈತವಿರೋಧಿ ನೀತಿ ಬಯಲಾಗಿದೆ. ಸ್ವತಃ ಆ ರಾಜ್ಯದಲ್ಲಿ ಸೇಬು ಬೆಳೆಗಾರರ ಚಳುವಳಿಯೊಂದಿಗೆ ನಿಕಟ ಸಂಬಂಧ ಹೊಂದಿದ ಕಾಮ್ರೇಡ್ ಕಾಶ್ಮೀರಿ ಸಿಂಗ್ ಅವರು ಕೆಲ ತಿಂಗಳ ಹಿಂದೆ 'ಚಕ್ರರಂಗ'ಕ್ಕೆ ನೀಡಿದ ಸಂದರ್ಶನದಲ್ಲಿ ಹೋರಾಟದ ವಿವರಗಳನ್ನು ಕೊಟ್ಟಿದ್ದರು.

ಸರಕಾರ ಇನ್ನೂ ಬೇಡಿಕೆಗಳನ್ನು ಈಡೇರಿಸದಿರುವುದರಿಂದ ಹಲವಾರು ಹಂತಗಳಲ್ಲಿ ನಡೆಸುವ ತಮ್ಮ ಚಳುವಳಿಯನ್ನು ಅಂತಿಮ ಘಟ್ಟಕ್ಕೆ ಒಯ್ಯುವುದಾಗಿ ಸೇಬು ಬೆಳೆಗಾರರು ಈಗ ಘೋಷಿಸಿದ್ದಾರೆ. ನೈಸರ್ಗಿಕವಾಗಿ ಚಳಿಯಿಂದ [illegible] ಈ ಕಾಲದಲ್ಲಿ ಹಿಮಾಚಲ ಪ್ರದೇಶದಲ್ಲಿ ನಡೆಯುವ ದರ್ಗದ ತೀವ್ರ ಚಳುವಳಿ ಹೋರಾಟ, 'ರಾಡು ಸ್ಮರಣೆ' ಮಾಡುವ ಬಿಜೆಪಿ ಸರಕಾರದ ನೇತಾರರ ಎದೆಯಲ್ಲಿ ನಡುಕ ಹುಟ್ಟಿಸಿದೆ.

ಹೆಣ್ಣಿಗೆ ಸಮಾನತೆ ಬೇಡಃ ಶ್ರೇಷ್ಠ ನ್ಯಾಯಾಧೀಶರ ಅಣಿಮುತ್ತು

"ನೀವು ಮನೆಗೆ ವಾಪಸು ಹೋಗಿ ಸಮಾನತೆ ಮರೆತುಬಿಡಿ. ಪುರುಷರೊಂದಿಗೆ ಎಲ್ಲಕ್ಕೂ ಸ್ಪರ್ಧಿಸುವುದನ್ನು ನಿಲ್ಲಿಸಿ".

ಇದು ಯಾರು ಮಾತು?

ಭಾರತದ ಮುಖ್ಯ ನ್ಯಾಯಾಧೀಶ ರಂಗನಾಥ ಮಿಶ್ರ ಬೃಹತ್‌ಕುಮಾರಿಯರ ಸಮ್ಮೇಳನದಲ್ಲಿ ಹೀಗೆ ಕರೆಕೊಟ್ಟಿದ್ದಾರೆ.

ದೇವರು ಪುರುಷ ಹಾಗೂ ಮಹಿಳೆಯನ್ನು ಸಮವಾಗಿ ಸೃಷ್ಟಿಸಿಲ್ಲವಾದ ಕಾರಣ ಸಮಾನತೆ ನೀಡುವ ಸಂವಿಧಾನ ಸರಿಯಲ್ಲ ಎಂಬ ಮಹಾನ್ ಹೇಳಿಕೆ ನೀಡಿರುವ ಮಿಶ್ರ ತಮ್ಮ 40 ನಿಮಿಷಗಳ ಭಾಷಣದಲ್ಲಿ "ಇಂತಹದೇ 'ಮನು' ಸಹ ಉಚ್ಚರಿಸಲಾಗದ ಮಾತುಗಳನ್ನು ಉಚ್ಚರಿಸಿ 'ಮಹಾನ್ ಮನು' ವಾಗಿದ್ದಾರೆ.

ಮಹಿಳೆಯರು ಸಮಾನತೆ ಕೇಳಿದರೆ ಅಲ್ಲಿ ಸ್ಪರ್ಧೆ ಮಾಯವಾಗುತ್ತದೆ. ಮಹಿಳೆಯರು ಜಾಗೃತರಾದರೆ ವಿಶ್ವ ಜಾಗೃತವಾಗುವುದಿಲ್ಲ. ಮಹಿಳೆಯರು ಮಹಿಳೆಯರಾಗೇ ಇದ್ದರೆ ಮಾತ್ರ ವಿಶ್ವ ಜಾಗೃತವಾಗುತ್ತದೆ.

ಹೀಗೆ ಅಣಿಮುತ್ತು ಉದುರಿಸುತ್ತಲೇ ಅವರು ಹೇಳಿರುವುದು ಭಾರತ ಸಂಪ್ರದಾಯದಲ್ಲಿ ಮಹಿಳೆ ಪುರುಷನಿಗಿಂತ ನೂರುಪಾಲು ಮೇಲ್ಪಟ್ಟದವಳು ಆದ್ದರಿಂದ ಆಕೆಗೆ ಸಮಾನತೆಯ ಕಿತ್ತಾಟ ಬೇಕಾಗಿಲ್ಲ ಎಂದು ಅಪ್ಪಣೆ ಕೊಡಿಸುವುದರ ಮೂಲಕ ತಾವು ಮಹಿಳೆ ಅತ್ಯಂತ ಉದಾತ್ತಳೆಂದು ಭಾವಿಸಿರುವುದಾಗಿ ಹೇಳಿದ್ದಾರೆ. ಇದು ಮತ್ತೆ "ಯತ್ರನಾರ್ಯಸ್ತು ಪೂಜ್ಯಂತೇ, ತತ್ರ ರಮಂತೇ ದೇವತಾಃ" ಎಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಇರುತ್ತಾರೆ. ಎಂದು ಹೇಳಿ ಮೋಸ ಮಾಡಿದ ಪುನರುಚ್ಚಾರ.

ಮಹಿಳೆ ಮನೆಯನ್ನು ಕಟ್ಟಿ ಬೆಳೆಸಲು ಹೆಚ್ಚು ಶಕ್ತಳಾಗಿರುವುದರಿಂದ ಮಹಿಳೆಯರು ಈಗ ಕಛೇರಿ ಬಿಟ್ಟು ಮನೆಗೆ ತೆರಳಬೇಕು ಎಂದಿದ್ದಾರೆ.

ಮಾನ್ಯ ಮುಖ್ಯ ನ್ಯಾಯಾಧೀಶರ ಇನ್ನೂ ಕೆಲವು ಅಣಿಮುತ್ತುಗಳು ಹೀಗಿವೆ:

"ಮಹಿಳೆಯರು ಪುರುಷರಿಗಿಂತ ಮೇಲ್ಪಟ್ಟವರು ಆದರೆ ಮಹಿಳೆಯರು ಈಗ ಸಮಾನತೆ ಕೇಳುವುದರ ಮೂಲಕ ಕೆಳಗಿಳಿಯಲು ಪ್ರಯತ್ನಿಸುತ್ತಿದ್ದಾರೆ. ಸಂವಿಧಾನದ ವಿಧಿಗಳ ಬಗ್ಗೆ ನಾವು ಯೋಚಿಸುವುದು ಬೇಡ. ನಾನು ನ್ಯಾಯಾಲಯದಲ್ಲಿ ಜಾರಿ ಮಾಡುವ ವಿಧಿಗಳನ್ನು ಜಾರಿ ಮಾಡದಿರಲು ನಾವು ಪ್ರಯತ್ನಿಸೋಣ".

ಮಹಿಳೆಯರು ಪೂಜೆ ಮಾಡಲು ಅರ್ಹರಾದ ದೇವತೆಗಳು. ಸಮಾನತೆ ಕೇಳುವುದು ಭಾರೀ ತಪ್ಪು.

ಮುಖ್ಯ ನ್ಯಾಯಾಧೀಶರಿಂದ ಕ್ಷಮೆ ಯಾಚನೆ

ಮಹಿಳೆಯನ್ನು ಕೀಳಾಗಿ ಅರ್ಥೈಸುವ ಈ ಹೇಳಿಕೆ ಮಹಿಳಾ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಯಿತು. ಮಹಿಳೆಯರ ವಿಮೋಚನೆ, ಸಮಾನತೆಗಾಗಿ ದುಡಿಯುವ ಸಂಘಟನೆಗಳು, ಅದನ್ನು ಪ್ರತಿಪಾದಿಸುವ ಬೆಂಬಲಿಸುವ ಸಂಘ ಸಂಸ್ಥೆ ರಾಜಕೀ ಪಕ್ಷಗಳು ಮುಖ್ಯ ನ್ಯಾಯಾಧೀಶರ ಬಾಯಿಯಿಂದ ಉದುರಿದ ಇಂಥ ಮಾತುಗಳನ್ನು ಸಹಿಸದಾದವು.

17 ರಾಜ್ಯಗಳಲ್ಲಿ 30 ಲಕ್ಷ ಸದಸ್ಯರನ್ನು ಹೊಂದಿರುವ ಎಐಡಿಡಬ್ಲ್ಯುಎ ನಿಯೋಗವೊಂದು ನವೆಂಬರ್ 19 ರಂದು ನ್ಯಾಯಮೂರ್ತಿ ಮಿಶ್ರಾರವರನ್ನು ಭೇಟಿ ಮಾಡಿ ತಮ್ಮ ಮಾತುಗಳನ್ನು ವಾಪಾಸು ಪಡೆಯಬೇಕೆಂದು ಒತ್ತಾಯಿಸಿತು. ಜಂಟಿ ಕಾರ್ಯದರ್ಶಿ ಬೃಂದಾ ಕಾರಟ್, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರಮಿಳಾ ಫಂದೆ, ಕಾಳಿಂದೀ ದೇಶಪಾಂಡೆ, ಆಶಾಲತಾ, ರಂಜನಾ ನಿರುಲಾ ಮತ್ತು ದಿಲ್ಲಿಯ ವಕೀಲರಾದ ಕೀರ್ತಿ ಸಿಂಗ್ ಈ ನಿಯೋಗದಲ್ಲಿ-ಇದ್ದರು

ತಾನು 'ವೈಯಕ್ತಿಕವಾಗಿ' ಆ 'ಮಾತು ಹೇಳಿದ್ದಾಗಿ ಮೊದಲು ಮುಖ್ಯನ್ಯಾಯಾಧೀಶರು ನಿಯೋಗಕ್ಕೆ ತಿಳಿಸಿದ್ದರು. ತನ್ನ ಹೇಳಿಕೆಯನ್ನು ತಪ್ಪಾಗಿ ತೆಗೆದುಕೊಳ್ಳಲಾಗಿದೆ ಎಂದರು. ಅವರ ಈ ಮಾತುಗಳು ಸ್ವೀಕಾರಾರ್ಹವಾಗಿಲ್ಲ ಎಂದಾಗ ಮನವಿ ಪತ್ರವನ್ನು ಓದಿ ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು. ಎಸ್‌ಎಫ್‌ಐಡಬ್ಲ್ಯು ಮತ್ತಿತರ ಮಹಿಳಾ ಸಂಘಟನೆಗಳು, ಕಾಂಗ್ರೆಸ್ ಕಾರ್ಯಕರ್ತೆಯರು ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ತಾನು ಮುಖ್ಯ ನ್ಯಾಯಾಧೀಶರಾಗಿ ಈ ಮಾತುಗಳನ್ನು ಹೇಳಲಿಲ್ಲ, ವೈಯಕ್ತಿಕವಾಗಿ ಹೇಳಿದೆ ಎಂಬ ಸ್ಪಷ್ಟನೆಯನ್ನು ಯಾರೂ ಸ್ವೀಕರಿಸಲು ಒಪ್ಪಿಲ್ಲ.

ಪ್ರತಿರೋಧ, ಟೀಕೆ ಬಲವಾಗತೊಡಗಿದಾಗ ಮುಖ್ಯ ನ್ಯಾಯಾಧೀಶ ರಂಗನಾಥ ಮಿಶ್ರ ತಮ್ಮ ಹೇಳಿಕೆ ಬಗ್ಗೆ ಕ್ಷಮೆ ಕೋರಿ ಪರಿಸ್ಥಿತಿ ತಿಳಿಯಾಗಲು ಯತ್ನಿಸಿದ್ದಾರೆ.

ಬೃಂದಾ ಕಾರಟ್‌ರಿಗೆ ಒಂದು ಪತ್ರ ಬರೆದಿರುವ ನ್ಯಾ. ಮಿಶ್ರಾ ತಮ್ಮ ಭಾಷಣದ ಬಗ್ಗೆ ತಪ್ಪು ತಿಳಿವಳಿಕೆ ಉಂಟಾಗಿದ್ದ

ಥ್ಯಾಚರ್ ರಾಜೀನಾಮೆ....

ಬ್ರಿಟನನ್ನು ಕಳೆದ ಹನ್ನೊಂದೂವರೆ ವರ್ಷಗಳಿಂದ ಕಬ್ಬಿಣದ ಮುಷ್ಟಿಯಿಂದ ಆಳುತ್ತಿದ್ದ ಮಾರ್ಗರೆಟ್ ಥ್ಯಾಚರ್ ತಮ್ಮ ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ನೀಡಿದ್ದಾರೆ. ಇದರಿಂದ'ಥ್ಯಾಚರ್‌ವಾದ'ದ ಯುಗ ಕೊನೆಗೊಂಡಂತಾಗಿದೆ. ಅಮೇರಿಕಾದಲ್ಲಿ 'ರೀಗನ್‌ವಾದಿ' ಆರ್ಥಿಕ-ರಾಜಕೀಯ ನೀತಿಯ ಜತೆ, ಬ್ರಿಟನ್‌ನಲ್ಲಿ ಆರಂಭವಾದ ಥ್ಯಾಚರ್‌ವಾದ ಬ್ರಿಟನ್‌ನಲ್ಲಿಸ್ಥಾಪಿತವಾಗಿದ್ದ'ಕಲ್ಯಾಣ ರಾಜ್ಯ'ದ ಸವಲತ್ತುಗಳನ್ನು ಒಂದೊಂದಾಗಿ ಕಿತ್ತೊಗೆದು ಕಾರ್ಮಿಕವರ್ಗದ ಚಳುವಳಿಯನ್ನು ಬಗ್ಗುಬಡಿಯುವುದರಲ್ಲಿ ಬಹಳ ಚಾಕಚಕ್ಯತೆ ತೋರಿಸುತ್ತಿತ್ತು. ಬಹಳ ಮಟ್ಟಿಗೆ ಸಫಲವೂ ಆಗಿತ್ತು.

ಆದರೆ ಮುಖ್ಯವಾಗಿ ಥ್ಯಾಚರ್ ಪ್ರಧಾನಿಪಟ್ಟಕ್ಕೆ ಮುಳುವಾದದ್ದು, ಆರ್ಥಿಕ- ರಾಜಕೀಯ ಐಕ್ಯತೆಯತ್ತ ಮುಂದೊತ್ತುತ್ತಿರುವ ಯೂರೋಪ್ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು. ಈ ಬಗ್ಗೆ ಥ್ಯಾಚರ್ ಅಭಿಪ್ರಾಯಗಳು ಟೋರಿ ಪಕ್ಷದ ಸಾಮಾನ್ಯ ಅಭಿಪ್ರಾಯಗಳಿಂದ ತೀರ ವ್ಯತಿರಿಕ್ತವಾಗಿದ್ದವು. ಆಕೆ ಬ್ರಿಟನ್ ಸಾರ್ವಭೌಮತೆಯನ್ನು ಬಿಟ್ಟುಕೊಡುವುದಕ್ಕೆ ಮತ್ತು ಯೂರೋಪಿಗೆ ಸಾಮಾನ್ಯ ನಾಣ್ಯ ವ್ಯವಸ್ಥೆ ಜಾರಿಗೆ ತರುವುದಕ್ಕೆ ವಿರೋಧಿಯಾಗಿದ್ದಾರೆ. ಆಳುವ ಟೋರಿ ಪಕ್ಷದ ಒಂದುದೊಡ್ಡ ಭಾಗ ಮತ್ತುಬ್ರಿಟನ್‌ನ ವಿರೋಧ ಪಕ್ಷಗಳು ಇದಕ್ಕೆ ಪರವಾಗಿವೆ. ಯೂರೋಪಿನ ಸರಕಾರಗಳಲ್ಲೂ ಥ್ಯಾಚರ್‌ರ ದನಿ ಒಂದೇ, ಈ ಒಮ್ಮತದಲ್ಲಿ 'ಅಪಸ್ವರ'ವಾಗಿತ್ತು.

ಇದು ಥ್ಯಾಚರ್ ರಾಜೀನಾಮೆಗೆ ತತ್‌ಕ್ಷಣದ ಕಾರಣವಾದರೂ, ಥ್ಯಾಚರ್‌ರ ಆಡಳಿತ ಶೈಲಿ, ಅತಿ ಬಲಪಂಥೀಯ ನೀತಿಗಳು ಆಳುವ ಟೋರಿ ಪಕ್ಷದ ಜನಪ್ರಿಯತೆ ತೀವ್ರವಾಗಿ ಕುಸಿಯಲು ಕಾರಣವಾಗಿದೆ. ಕಳೆದ ಮೂರು ಚುನಾವಣೆಗಳಲ್ಲಿ ಟೋರಿ ಪಕ್ಷವನ್ನು ವಿಜಯದತ್ತ ಮುನ್ನಡೆಸಿದ ಥ್ಯಾಚರ್‌ರ ನಾಯಕತ್ವವೇ ಪಕ್ಷಕ್ಕೆ ಮಾರಕವಾಗಬಹುದು ಎಂದು ಟೋರಿ ಪಕ್ಷದ ಸಂಸತ್ ಸದಸ್ಯರಿಗೆ ಅನಿಸಲಾರಂಭಿಸಿದೆ. ಈಗ ಚುನಾವಣೆ ನಡೆದರೆ ಫಲಿತಾಂಶ ಏನಾಗಬಹುದು, ಎಂಬ ಸಮೀಕ್ಷೆಗಳ ಪ್ರಕಾರ ಟೋರಿ ಪರಾಜಯ ಖಚಿತ ಎಂದು ತಿಳಿದು ಬಂದಿದೆ. ಇದಕ್ಕೆ ಪ್ರಮುಖ ಕಾರಣ ಥ್ಯಾಚರ್ ನಾಯಕತ್ವ, ಬೇರೆ ನಾಯಕತ್ವದಲ್ಲಿ ಮತದಾರರ ಬಳಿ ಹೋದರೆ ಟೋರಿ ಪಕ್ಷಕ್ಕೆ ಅಧಿಕಾರ ಮರಳಲು ಸ್ವಲ್ಪವಾದರೂ ಭರವಸೆ ಇದೆ ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಮುಖ ಸಚಿವರ ರಾಜೀನಾಮೆಯ ಹಿನ್ನೆಲೆಯಲ್ಲಿ ಟೋರಿ ಪಕ್ಷದ ಸಂಸತ್ ಸದಸ್ಯರ ವಿಶ್ವಾಸಮತ ಗಳಿಸಬೇಕು ಎಂದು ಥ್ಯಾಚರ್‌ಗೆ ನಿರ್ದೇಶನ ನೀಡಲಾಗಿತ್ತು. ಟೋರಿ ಪಕ್ಷದ ನಿಯಮಾವಳಿ ಪ್ರಕಾರ ತಮ್ಮ ಎದುರಾಳಿಗಿಂತ ಶೇಕಡಾ 15 ರಷ್ಟು ಹೆಚ್ಚು ಮತಗಳನ್ನು ಆಕೆ ಗಳಿಸಬೇಕಿತ್ತು. ಆಕೆ ಬಹುಮತ ಗಳಿಸಿದರೂ ಕೆಲವೇ ಮತಗಳ ಅಂತರದಿಂದ ಶೇಕಡಾ 15 ಹೆಚ್ಚು ಮತಗಳಿಸಲು ಸಾಧ್ಯವಾಗಿಲ್ಲ. ಎರಡನೇ ಸುತ್ತಿನ ಮತದಾನದಲ್ಲಿ ಸರಳ ಬಹುಮತ ಗಳಿಸಿದರೆ, ಥ್ಯಾಚರ್ ಪ್ರಧಾನಿಯಾಗಿ ಮುಂದುವರಿಯಬಹುದಿತ್ತು. ಆದರೆ ತಮ್ಮ ನಾಯಕತ್ವದಲ್ಲಿ ಭರವಸೆ ತೀವ್ರವಾಗಿ ಕುಸಿದಿರುವ ಹಿನ್ನೆಲೆಯಲ್ಲಿ ಥ್ಯಾಚರ್ ರಾಜೀನಾಮೆ ನೀಡಲು ನಿರ್ಧರಿಸಿದರು.

ಗಣಿ ಕಾರ್ಮಿಕರ ಒಂದು ವರ್ಷಕ್ಕೂ ಹೆಚ್ಚು ದೀರ್ಘ ಮುಷ್ಕರವನ್ನು ಹತ್ತಿಕ್ಕಿದ ರೀತಿ, ಲೇಬರ್ ನಾಯಕತ್ವದ ಸ್ಥಳೀಯ ಸಂಸ್ಥೆಗಳ ಆರ್ಥಿಕ ಬೆನ್ನೆಲುಬು ಮುರಿದು ಅವನ್ನು ನಿಷ್ಕ್ರಿಯ ಮಾಡಿದ ರೀತಿ, ಬ್ರಿಟನ್‌ನ ಹಲವು ಪ್ರಸಿದ್ಧ ಸಾರ್ವಜನಿಕ ಕ್ಷೇತ್ರದ ಕಂಪನಿಗಳನ್ನು ಖಾಸಗೀಕರಿಸಿದ್ದು, ನಿರುದ್ಯೋಗ ನಾಗಾಲೋಟದಿಂದ ಏರಲು ಕಾರಣವಾದ ಆರ್ಥಿಕ ನೀತಿಗಳು, ಪೆನ್‌ಶನ್ ಮತ್ತಿತರ ಹಲವು ಕಲ್ಯಾಣ ಕ್ರಮಗಳಲ್ಲಿ ತೀವ್ರ ಕಡಿತ, ಅತ್ಯಂತ ಕುಖ್ಯಾತವಾದ ಪೋಲ್-ಟ್ಯಾಕ್ಸ್ - ಇವು ಥ್ಯಾಚರ್‌ವಾದದ ಕರಾಳ ಆಡಳಿತದ ಕುಖ್ಯಾತ ಮೈಲಿಗಲ್ಲುಗಳಾಗಿದ್ದವು. ಥ್ಯಾಚರ್ ವಾದದ ಯುಗದ ಕೊನೆ, ಮತ್ತು ಬಹುಶ: ಮುಂದಿನ ಚುನಾವಣೆಗಳಲ್ಲಿ ಟೋರಿ ಪರಾಜಯ 80ರ ದಶಕದಲ್ಲಿ ಯುರೋಪನ್ನು ಆವರಿಸಿದ ಬಲಪಂಥೀಯ ಸರಕಾರಗಳ ಯುಗದ ಕೊನೆಯ ಆರಂಭವೂ ಆಗಬಹುದು. ಥ್ಯಾಚರ್ ನಿರ್ಗಮನದಿಂದ ಅಮೇರಿಕದ ಮಿಲಿಟರಿ, ವಿದೇಶಿ ನೀತಿಗಳಿಗೆ ಯುರೋಪಿನಿಂದ ಇದ್ದ ಏಕಮಾತ್ರ ಬೆಂಬಲ ಕುಸಿದು ಬಿದ್ದಂತಾಗಿದೆ

ಶೀತ ಸಮರದ ಕೊನೆಯತ್ತ ಚಾರಿತ್ರಿಕ ಒಪ್ಪಂದ

ಯುರೋಪು ಮತ್ತು ಉತ್ತರ ಅಮೇರಿಕದ 34 ದೇಶಗಳ ಸಮ್ಮೇಳನ ಪ್ಯಾರಿಸಿನಲ್ಲಿ ಸಭೆ ಸೇರಿ ಶೀತ ಸಮರವನ್ನು ಕೊನೆಗಾಣಿಸುವತ್ತ ಇನ್ನೊಂದು ದೊಡ್ಡ ಹೆಜ್ಜೆ ಇಟ್ಟಿದೆ. ಅಲ್ಬೇನಿಯಾವನ್ನು ಬಿಟ್ಟು ಯುರೋಪಿನ ಎಲ್ಲಾ ದೇಶಗಳು, ಅಮೇರಿಕ ಮತ್ತು ಕೆನಡಾ ಭಾಗವಹಿಸುತ್ತಿರುವ ಈ ಸಮ್ಮೇಳನ ಯುರೋಪಿನಲ್ಲಿ ಭದ್ರತೆ ಮತ್ತು ಸಹಕಾರದ ಬಗ್ಗೆ ಚರ್ಚಿಸುವ ಉದ್ದೇಶದಿಂದ ನಡೆಯಿತು. ನಾಟೋ ಮತ್ತು ವಾರ್ಸಾ ಕೂಟಗಳ ನಡುವಣ ಶಸ್ತ್ರಾಸ್ತ್ರ ಕಡಿತ ಒಪ್ಪಂದ ಅಣ್ವಸ್ತ್ರ--ರಹಿತ ಶಸ್ತ್ರಾಸ್ತ್ರಗಳ ಕಡಿತದಲ್ಲಿ ಅತ್ಯಂತ ದೊಡ್ಡದು, ಚಾರಿತ್ರಿಕವಾದುದು.

ಈ ಒಪ್ಪಂದದ ಪ್ರಕಾರ ಸುಮಾರು 40 ಸಾವಿರ ಟ್ಯಾಂಕುಗಳು, 40 ಸಾವಿರ ಶಸ್ತ್ರ ಸಜ್ಜಿತ ಸಮರ ವಾಹನಗಳು ಮತ್ತು 50 ಸಾವಿರ ತೋಪುಗಳನ್ನು ನಾಶಮಾಡಲಾಗುವುದು. ಅಥವಾ ಶಾಂತಿ ಉಪಯೋಗಗಳಿಗೆ ಬದಲಾಯಿಸಲಾಗುವುದು.ಅಷ್ಟೇ ಅಲ್ಲ ಈ ಒಪ್ಪಂದ ಮೊದಲಬಾರಿಗೆ ವಾರ್ಸಾ ಮತ್ತು ನಾಟೋ ಕೂಟದ ಒಟ್ಟು ಅಣ್ವಸ್ತ್ರ---ರಹಿತ ಶಸ್ತ್ರಾಸ್ತ್ರಗಳ ಸಂಖ್ಯೆಯ ಮೇಲೆ ಗರಿಷ್ಠ ಮಿತಿ ಹೇರಿದೆ. 20 ಸಾವಿರ ಟ್ಯಾಂಕುಗಳು, 30 ಸಾವಿರ ಸಶಸ್ತ್ರ ಸಮರ ವಾಹನಗಳು 20 ಸಾವಿರ ತೋಪುಗಳು, ಆರು ಸಾವಿರ ಯುದ್ಧ ವಿಮಾನಗಳು ಮತ್ತು ಎರಡು ಸಾವಿರ ಆಕ್ರಾಮಕ ಹೆಲಿಕಾಪ್ಟರುಗಳ---ಗರಿಷ್ಠ ಮಿತಿಯನ್ನು ಎರಡೂ ಕೂಟಗಳು ಮೀರುವಂತಿಲ್ಲ. ಈ ಮಿತಿ ಮೀರದಂತೆ ನೋಡಲು ಸಮಗ್ರ ವ್ಯವಸ್ಥೆ ಬಗ್ಗೆಯೂ ಒಪ್ಪಂದವಾಗಿದೆ. ಇದರಲ್ಲಿ ಅಲ್ಪ ಸಮಯದ ನೋಟೀಸಿನಲ್ಲಿ ಮಿಲಿಟರಿ ವ್ಯವಸ್ಥೆಗಳ ನಿರೀಕ್ಷಣೆ ಮುಂತಾದ ಕ್ರಮಗಳು ಸೇರಿವೆ.

ಯಾವುದೇ ಘರ್ಷಣೆಯ ಸಾಧ್ಯತೆಗಳು ಮುಂತಾದವುಗಳನ್ನು ವೀಕ್ಷಿಸಲು ಈ ದೇಶಗಳು ಶಾಶ್ವತ ಸೆಕ್ರೆಟಾರಿಯಟನ್ನು ಸ್ಥಾಪಿಸಲಿವೆ. ಎರಡು ಕೂಟಗಳು ಪರಸ್ಪರ ವಿರೋಧಿಯಲ್ಲ ಎಂದು ಘೋಷಿಸುವ ಮೂಲಕ ಹೆಚ್ಚು ಕಡಿಮೆ ಅನಾಕ್ರಮಣ ಒಪ್ಪಂದದಂತಾಗಿದೆ. 170 ಪುಟಗಳ ಈ ಒಪ್ಪಂದ ಶಸ್ತ್ರಾಸ್ತ್ರ ಕಡಿತದ ವಿವರಗಳನ್ನು, ಅದರ ನಿರೀಕ್ಷಣೆಯ ಕ್ರಮಗಳನ್ನು ವಿವರಿಸುತ್ತದೆ. ಆದರೆ ಈ ಒಪ್ಪಂದ ಸೈನ್ಯಗಳ ಬಲಾಬಲ ಕಡಿತವನ್ನು ಒಳಗೊಳ್ಳುವುದಿಲ್ಲ. ಈಬಗ್ಗೆ ಮಾತುಕತೆಗಳನ್ನು ವಿಯೆನ್ನಾದಲ್ಲಿ ಮುಂದುವರಿಸಲಾಗುವುದು.

ಈ ಒಪ್ಪಂದ ಎರಡನೆಯ ಮಹಾಯುದ್ಧದ ನಂತರ ಆರಂಭವಾದ ಶೀತ ಸಮರದ ಕೊನೆಯತ್ತ ಇನ್ನೊಂದು ಪ್ರಮುಖ ಹೆಜ್ಜೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ದೂರಗಾಮಿ ಅಣ್ವಸ್ತ್ರಗಳ ಬಗ್ಗೆ ಇಂತಹುದೇ ಒಪ್ಪಂದ ಆಗುವವರೆಗೆ ಮಾನವ ಜಾತಿಯ ನಾಶವಾಗುವ ಭಯ ತೊಲಗಿಲ್ಲ. ಕೊಲ್ಲಿಯಲ್ಲಿ ಅಮೇರಿಕದ ಯುದ್ಧ ಸನ್ನಾಹ ಈ ಹೊಸ 'ಶಾಂತಿ ಪರ್ವದಲ್ಲಿ' ದಲ್ಲಿ ಅಮೇರಿಕ ತನ್ನ ಮಿಲಿಟರಿ ಬಲದಿಂದ ಮೂರನೇ ಜಗತ್ತಿನ ದೇಶಗಳನ್ನು ತನ್ನ ಮನಬಂದಂತೆ ಕುಣಿಸಬಹುದು ಎಂಬ ಭಾವನೆ ಇರುವವರೆಗೆ ನಿಜವಾದ ವಿಶ್ವಶಾಂತಿ ಸಾಧ್ಯವಿಲ್ಲ ಎಂಬುದನ್ನು ಮರೆಯದಿರೋಣ.

ಸಾರ್ಕ್ ಸಮ್ಮೇಳನ ಮಾಲೆಯಲ್ಲಿ

ದಕ್ಷಿಣ ಏಷ್ಯಾದ ಏಳು ದೇಶಗಳ(ಭಾರತ ಸೇರಿದಂತೆ) ಸಾರ್ಕ್ (SAARC) ಸಮ್ಮೇಳನ ಮಾಲ್‌ದೀವ್ಸ್‌ನ ರಾಜಧಾನಿ ಮಾಲೆಯಲ್ಲಿ ನಡೆಯಿತು. ಈ ಮೂರುದಿನಗಳ ಸಮ್ಮೇಳನದಲ್ಲಿ ಏಳು ದೇಶಗಳ ಸರಕಾರಗಳ ಪ್ರಮುಖರು ಭಾಗವಹಿಸಿದ್ದರು. ಈ ಏಳು ದೇಶಗಳ ನಡುವೆ ಬಹುಮುಖ ಸಹಕಾರವನ್ನು ಹೆಚ್ಚಿಸುವುದು ಸಮ್ಮೇಳನದ ಉದ್ದೇಶ. ಸಾರ್ಕ್ ಒಂದು ಆರ್ಥಿಕ ಒಕ್ಕೂಟದ ರೀತಿಯಲ್ಲಿ ಬೆಳೆಯದೆ ಹೆಚ್ಚಿನದೇನನ್ನೂ ಸಾಧಿಸದಂತಾಗುವುದಿಲ್ಲ ಎಂಬ ಬಗ್ಗೆ ಒಮ್ಮತ ಕಂಡು ಬಂತು.

ಸಮ್ಮೇಳನದ ಹೇಳಿಕೆಯಲ್ಲಿ ಇರಾಕ್‌ನ ಕುವೈತ್ ಆಕ್ರಮಣವನ್ನು ಖಂಡಿಸಲಾಯಿತು. ಕೊಲ್ಲಿ ಬಿಕ್ಕಟ್ಟಿನಿಂದ ಸಾರ್ಕ್ ದೇಶಗಳಿಗೆ ಆಗುತ್ತಿರುವ ಪ್ರತಿಕೂಲ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಅಂತರರಾಷ್ಟ್ರೀಯ ನೆರವು ಅಗತ್ಯವೆಂದು ತಿಳಿಸಲಾಗಿದೆ.

90 ರ ದಶಕವನ್ನ 'ಹೆಣ್ಣು ಮಗುವಿನ ಸಾರ್ಕ್ ದಶಕ'ವಾಗಿ ಆಚರಿಸಬೇಕೆಂದು, ಪರಿಸರ, ಪ್ರಾಕೃತಿಕ ಪ್ರಕೋಪಗಳು ಮತ್ತು ಮಾದಕ ವಸ್ತುಗಳ ಸಮಸ್ಯೆಗಳ ಪರಹಾರಕ್ರಮಗಳಲ್ಲಿ ಹೆಚ್ಚಿನ ಸಹಕಾರಕ್ಕೆ ಒಪ್ಪಂದ--- ಇವು ಸಮ್ಮೇಳನದ ನಿರ್ಣಯಗಳು.

ಸಾರ್ಕ್ ದೇಶಗಳ ಸಂಸತ್ ಸದಸ್ಯರು, ಸುಪ್ರೀಂಕೋರ್ಟ್ ಜಡ್ಜ್‌ಗಳು ಮತ್ತಿತರ ಪ್ರಮುಖರಿಗೆ ವೀಸಾ ಇಲ್ಲದೆ ಪರಸ್ಪರ ಭೇಟಿಗೆ ಅವಕಾಶ ಮಾಡಿಕೊಡುವ, ಸಾರ್ಕ್ ದೇಶಗಳ ಪ್ರವಾಸಿಗರಿಗೆ ರಿಯಾಯಿತಿದರದ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಜೆಕ್ ಕಮ್ಯುನಿಸ್ಟ್ ಪಕ್ಷದ ಆಸ್ತಿ ಮುಟ್ಟುಗೋಲು

ಜೆಕೋಸ್ಲೋವಾಕಿಯಾದ ಪಾರ್ಲಿಮೆಂಟು ಅಲ್ಲಿನ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಯುವ ಮುಂತಾದ ಸಾಮೂಹಿಕ ಸಂಘಟನೆಗಳ ಎಲ್ಲಾ ಆಸ್ತಿಗಳನ್ನು ಯಾವುದೇ ಪರಿಹಾರವಿಲ್ಲದೆ ಮುಟ್ಟುಗೋಲು ಹಾಕಿಕೊಳ್ಳಲು ಸರಕಾರಕ್ಕೆ ಅಧಿಕಾರ ಕೊಡುವ ಮಸೂದೆಯನ್ನು ಅಂಗೀಕರಿಸಿದೆ.

ಇದು ಸಂವಿಧಾನ--ವಿರೋಧಿ ಮತ್ತು ಪ್ರಜಾತಂತ್ರ--ವಿರೋಧಿ ಕ್ರಮ ಎಂದು ಜೆಕೋಸ್ಲೋವಾಕಿಯಾದ ಕಮ್ಯುನಿಸ್ಟ್ ಪಕ್ಷ ಬಲವಾಗಿ ಖಂಡಿಸಿದೆ. ವಿರೋಧ ಪಕ್ಷವನ್ನು ದಮನ ಮಾಡುವ ಕೆಲಸ ಮಾಡದಂತೆ ಮಾಡುವ ಪಿತೂರಿ. ಜನತೆಯ ಗಮನವನ್ನು ತೀವ್ರ ಆರ್ಥಿಕ--ಸಾಮಾಜಿಕ--ರಾಜಕೀಯ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯುವ ತಂತ್ರ. ಸಧ್ಯಕ್ಕೆ ನಡೆಯಲಿರುವ ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಬಲಹೀನಗೊಳಿಸುವ ಉಪಾಯ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಬಲಪಂಥೀಯ ಸರಕಾರಗಳು ಅಧಿಕಾರ ವಹಿಸಿರುವ ಹಲವು ಪೂರ್ವ ಯುರೋಪಿನ ದೇಶಗಳಲ್ಲಿ ಜನರ ಸಮಸ್ಯೆಗಳನ್ನು ಯಾವುದೇ ರೀತಿಯಲ್ಲಿ ಬಗೆಹರಿಸಲಾಗದೆ, ಬದಲಿ ವಿರೋಧ ಪಕ್ಷಗಳನ್ನು ನಾಶ ಮಾಡುವ ಉಪಾಯ ಹರಿಯುತ್ತಿವ ಸಾಧ್ಯತೆ ಇದೆ. ಇದು ಆದೇಶಗಳಲ್ಲಿ ಜಾರಿಗೆ ಬಂದಿರುವ 'ಬಹುಪಕ್ಷೀಯ ಪ್ರಜಾತಂತ್ರ'ದ ವೈಖರಿ

ಕೊಲ್ಲಿ ಯುದ್ಧ ಆರಂಭಿಸಲು ಬುಶ್ ತಡೆಗೆ ಕೋರ್ಟಿಗೆ

ಅಧ್ಯಕ್ಷ ಬುಶ್ ಮತ್ತು ಅವರ ವಿದೇಶ ಮಂತ್ರಿ ಲೋಕ ಸಂಚಾರ ಮಾಡುತ್ತಿದ್ದಾರೆ--- ಇರಾಕ್ ವಿಶ್ವ ಸಂಸ್ಥೆ ನಿರ್ಣಯ ಪಾಲಿಸದಿರುವುದರಿಂದ ಬಲಪ್ರಯೋಗ ಅಗತ್ಯ ಎಂದು ಎಲ್ಲಾ ದೇಶದ ನಾಯಕರಿಗೆ ಮನವರಿಕೆ ಮಾಡಲು. ಆದರೆ ಅಮೇರಿಕಾದ ಜನತೆ ಏಕೆ, ಪಾಲಿಮೆಂಟಿನಲ್ಲೇ ಆ ಬಗ್ಗೆ ಒಮ್ಮತವಿಲ್ಲ ಎಂದು ಈಗ ಜಗಜ್ಜಾಹೀರಾಗಿದೆ. ಕೊಲ್ಲಿ ಯುದ್ಧದ ಬಗ್ಗೆ ಅಮೇರಿಕಾ ಪಾರ್ಲಿಮೆಂಟ್‌ನ ಅನುಮತಿ ಪಡೆಯುವುದಕ್ಕೆ ಈವರೆಗೆ ಅಧ್ಯಕ್ಷ ಬುಶ್ ನಿರಾಕರಿಸಿದ್ದಾರೆ. ಇದು ಅಧ್ಯಕ್ಷರ ಹಕ್ಕು. ಅವರು ಕಾಂಗ್ರೆಸ್(-ಅಮೇರಿಕಾದ ಪಾರ್ಲಿಮೆಂಟು) ಕೇಳುವ ಅಗತ್ಯವಿಲ್ಲ ಎಂದು ಅವರ ವಾದ.

ಇದನ್ನು ವಿರೋಧಿಸಿ ಕಾಂಗ್ರೆಸ್‌ನ 45 ಸದಸ್ಯರು ಸುಪ್ರೀಂಕೋರ್ಟಿಗೆ ಹೋಗಿದ್ದಾರೆ. ಇದರಲ್ಲಿ ಕಾಂಗ್ರೆಸ್‌ನ ಬೆಂಬಲ ಕೇಳದೆ, ಅಧ್ಯಕ್ಷರಿಗೆ ಯುದ್ಧ ಆರಂಭಿಸುವ ಹಕ್ಕು ಇಲ್ಲ ಎಂದು ವಾದಿಸಲಾಗಿದೆ.

ಜಪಾನಿನ ಪಾರ್ಲಿಮೆಂಟ್ ಇಂತಹುದೇ ಕ್ರಮವನ್ನು ವಿರೋಧಿಸಿತು ಎಂಬುದನ್ನು ಇಲ್ಲಿ ಗಮನಿಸಬಹುದು.

ಡಿ ಕ್ಲಾರ್ಕ್ ಪಕ್ಷಕ್ಕೆ ಮರುಚುನಾವಣೆ ಜಯ

ದ. ಆಫ್ರಿಕಾದ ಸುಧಾರಣಾವಾದಿ ಅಧ್ಯಕ್ಷ ಡಿ ಕ್ಲಾರ್ಕ್‌ರ ನ್ಯಾಷನಲ್ ಪಾರ್ಟಿ ಅಲ್ಲಿನ ವ್ಯವಸ್ಥೆಯಲ್ಲಿಮಾಡಹೊರಟಿರುವ ಸುಧಾರಣೆಗೆ ವ್ಯಾಪಕ ಬಿಳಿಯರ ಬೆಂ[illegible] ಏದೆ ಎಂದು ಇತ್ತೀಚಿನ ಮರು ಚು[illegible]ಣೆಯೊಂದರಿಂದ ತಿಳಿದು ಬಂದಿದೆ.

ಮರು ಚುನಾವಣೆಯಲ್ಲಿ ಡಿ ಕ್ಲಾ[illegible] ನ್ಯಾಷನಲ್ ಪಾರ್ಟಿ ಮತ್ತು ಈ [illegible] ರಣೆಗಳನ್ನು ವಿರೋಧಿಸುವ ಕನ್ಸರ್ವೇ[illegible] ಪಾರ್ಟಿಗಳು ಪ್ರಮುಖ ಸ್ಪರ್ಧಿಗಳಾ[illegible] ನ್ಯಾಷನಲ್ ಪಾರ್ಟಿಯ ಅಭ್ಯರ್ಥಿ ಶೇ 84 ರಷ್ಟು ಮತಗಳಿಸಿ ಗೆದ್ದರೆ, ಕನ್ಸರ್ವೇಟಿ[illegible] ಪಾರ್ಟಿಯ ಅಭ್ಯರ್ಥಿ ಠೇವಣಿ ಕಳೆದುಕೊ[illegible] ಈ ಚುನಾವಣೆಯಲ್ಲಿ ಬಿಳಿಯರು ಮಾತ್ರ ಮತದಾರರಾಗಿರುವುದರಿಂದ ಈ ಮರು ಚುನಾವಣೆ ಡಿ ಕ್ಲಾರ್ಕ್‌ರ ಸುಧಾರಣಾ ಕ್ರಮಗಳಿಗೆ ಇದು ಜನಮತ ಸಂಗ್ರಹದಂತೆ ಎನ್ನಲಾಗಿತ್ತು. ಬಿಳಿಯರಲ್ಲಿ ಭಾರಿ ಸಂಖ್ಯೆಯಲ್ಲಿ ಸುಧಾರಣೆಯನ್ನು ಸಮರ್ಥಿಸುತ್ತಿದ್ದಾರೆ ಎಂದು ಇದರಿಂದ ತಿಳಿದು ಬಂದಿದೆ. ನ್ಯಾಷನಲ್ ಪಾರ್ಟಿ ಈಗಾಗಲೇ ಕರಿಯ ಸದಸ್ಯರನ್ನು ಸ್ವೀಕರಿಸುತ್ತಿದೆ.

ಹೆಂಚಿನ ಕಾರ್ಮಿಕರ ಯಶಸ್ವೀ ಧೀರ್ಘ ಹೋರಾಟ

ಉತ್ತರ ಕನ್ನಡ ಜಿಲ್ಲೆಯ ಶರಾವತಿ ಟೈಲ್ಸ್ ವರ್ಕ್ಸ್‌ನ ಕಾರ್ಮಿಕರು ಸುಮಾರು 9 ತಿಂಗಳ ಹೋರಾಟದಿಂದ ಬೇಡಿಕೆಗಳು ಇತ್ಯರ್ಥಗೊಂಡು ನವೆಂಬರ್ 6ರಿಂದ ಕೆಲಸ ಆರಂಭಿಸಿದ್ದಾರೆ.

ಕಾನೂನು ಪ್ರಕಾರ ಸಿಗುವ ತುಟ್ಟಿಭತ್ಯೆಗಾಗಿ ಆಡಳಿತ ವರ್ಗವನ್ನು ಒತ್ತಾಯಿಸಿದಾಗ 12-2-90ರಿಂದ ಕಾರ್ಮಿಕರಿಗೆ ಕೆಲಸ ನಿರಾಕರಣೆ ಮಾಡಿದ್ದನ್ನು ಪ್ರತಿಭಟಿಸಿ ಒಂಭತ್ತು ತಿಂಗಳ ಹೋರಾಟದ ಪರಿಣಾಮವಾಗಿ ತಮ್ಮ ಬೇಡಿಕೆಗಳಾದ ಎಲ್ಲರಿಗೂ ಕೆಲಸ ಹಾಗೂ ತುಟ್ಟಿಭತ್ಯೆ ಪಡೆಯುವಲ್ಲಿ ಕಾರ್ಮಿಕರು ಯಶಸ್ವಿಯಾಗಿದ್ದಾರೆ. ಹುಬ್ಬಳ್ಳಿಯ ಸಹಾಯಕ ಕಾರ್ಮಿಕ ಆಯುಕ್ತರ ಸಮಕ್ಷಮದಲ್ಲಿ ನಡೆದ ಮಾತುಕತೆಯಲ್ಲಿ ಸಿಐಟಿಯುವಿನ ಮುಖಂಡರಾದ ಕಾಂ. ಅಬ್ರಹಾಂ ಕರ್ಕಡ, ಶಿವಶಂಕರ್ , ಸಿ.ನಾರಾಯಣ, ರಾಮಲಿಂಗಯ್ಯಗೌಡ ಹಾಗೂ ಶಿಲ್ ಜಬ್ಬೇಗೌಡ ಮೊದಲಾದವರು ಭಾಗವಹಿಸಿದ್ದರು.

ಪ್ರಾಂತ ರೈತ ಸಂಘದ ಘಟಕ ಸ್ಥಾಪನೆ

ವಿಜಾಪುರದ ಹೊನಗನಹಳ್ಳಿ, ಗ್ರಾಮದಲ್ಲಿ ನವೆಂಬರ್ 5 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಘಟಕವನ್ನು ಜಿಲ್ಲಾ ಅಧ್ಯಕ್ಷರಾದ ಶ್ರೀ ಭೀಮಸಿ ಕಲಾದಗಿಯವರು ಉದ್ಘಾಟಿಸುವುದರೊಂದಿಗೆ ಸ್ಥಾಪನೆಯಾಯಿತು. ಈ ಸಂದರ್ಭದಲ್ಲಿ ಗ್ರಾಮ ಘಟಕ ಕಮಿಟಿಯನ್ನು ರಚಿಸಲಾಯಿತು. ಗೌರವ ಅಧ್ಯಕ್ಷರಾಗಿ ಶ್ರೀ ವೇದಮೂರ್ತಿ ನಿಂಗಯ್ಯ ಸ್ವಾಮಿ ಒಡೆಯರ, ಅಧ್ಯಕ್ಷರು-- ನಿಂಗಣ್ಣಾ ಬಿದರಿ, ಉಪಾಧ್ಯಕ್ಷರು,-ರೇವಣ ಸಿದ್ಧಪ್ಪ ಗುಳೆಕಾರ, ಪ್ರಧಾನ ಕಾರ್ಯದರ್ಶಿ--ಪಣ್ಣಾಖ ಒಡೆಯರ, ಉಪ-ಕಾರ್ಯದರ್ಶಿ--ಚಿಕ್ಕಪ್ಪ ಪಿಸಾಳಿ, ಉಪ-ಕಾರ್ಯದರ್ಶಿ-- ಶಿವಪ್ಪ ಬಗಲಿ, ಕೋಶಾಧ್ಯಕ್ಷ--ಮಲ್ಲಪ್ಪ ಚಿಕ್ಕಲಕಿ ಅವರನ್ನೊಳಗೊಂಡ ಕಮಿಟಿಯನ್ನು ರಚಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ವಿ.ಎಸ್ ಪಾಟೀಲರು ವಹಿಸಿದ್ದರು.

ಬೀಡಿ ಕಾರ್ಮಿಕರ ಹೋರಾಟಕ್ಕೆ ಕರೆ

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಮಿಕರ ಸಮಾವೇಶವು ನವಂಬರ್ 17ರಂದು ಸಂಘದ ಅಧ್ಯಕ್ಷರಾದ ಸುಂದರ ನಾಯ್ಕರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯನ್ನುದ್ದೇಶಿಸಿ ಕಾರ್ಯದರ್ಶಿ ವಾಸುದೇವ ಆಚಾರಿ ಹಾಗೂ ಕೋಶಾಧಿಕಾರಿ ಸದಾಶಿವದಾಸ್‌ರವರು ಮಾತನಾಡುತ್ತಾ ಸಾವಿರ ಬೀಡಿಗೆ 25ರೂಪಾಯಿ ಕನಿಷ್ಠ ಕೂಲಿ ನಿಗದಿಯಾಗಬೇಕೆನ್ನುವ ಇತರ 17 ಬೇಡಿಕೆಗಳಿಗಾಗಿ ಬೀಡಿ ಕಾರ್ಮಿಕರು ಇತರ ಸಂಘಟನೆಗಳ ಬೆಂಬಲದೊಂದಿಗೆ ದೇಶವ್ಯಾಪಿ ಹೋರಾಟಕ್ಕೆ ಕರೆಯಿತ್ತರು. ಎಸ್‌ಎಫ್‌ಐನ ವಸಂತ ಆಚಾರಿಯವರು ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಬಗ್ಗೆ ಮಾತನಾಡಿದರು.

ಬೀಡಿ ಕಾರ್ಮಿಕರ ಸಮಾವೇಶ

ಕುಪ್ಪೆಪದವು ಪ್ರದೇಶದ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಬಡಗ ಎಡಪದವು ಗ್ರಾಮದ ದಡ್ಡಿ ಕಲ್ಪನೆ ಪ್ರದೇಶ ಬೀಡಿ ಕಾರ್ಮಿಕರ ಸಭೆಯು ನವೆಂಬರ್ 19 ರಂದು ವಸಂತ ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಕಾರ್ಯದರ್ಶಿ ಕೆ.ವಾಸುದೇವ ಆಚಾರಿಯ.ವರು ಮಾತನಾಡುತ್ತಾ ಕರ್ನಾಟಕದಲ್ಲಿ 1974 ರಿಂದಲೇ ಕಾನೂನು ಜ್ಯಾರಿಯಾಗಿದ್ದರೂ ಅದರ ಸವಲತ್ತನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲದಿರುವುದಕ್ಕೆ ಕಾರ್ಮಿಕರಲ್ಲಿ ಸಂಘಟನಾ ಪ್ರಜ್ಞೆ ಇಲ್ಲದಿರುವುದು ಕಾರಣ ಎಂದು ತಿಳಿಸಿದರು. ಈ ಸಭೆಯಲ್ಲಿ ದಡ್ಡಿ ಕಲ್ಪನೆ ಪ್ರದೇಶದ 23 ಜನರ ಕಮಿಟಿ ಮತ್ತು ಕಾರ್ಯದರ್ಶಿಯಾಗಿ ಹೇಮಲತಾ, ಸಹ ಕಾರ್ಯದರ್ಶಿಯಾಗಿ ದೊಡ್ಡಪ್ಪಗೌಡ ಹಾಗೂ ಎಲ್. ಹೇಮಲತಾರವರನ್ನು ಆಯ್ಕೆಮಾಡಲಾಗಿದೆ.

ಮುಖ್ಯ ನ್ಯಾಯಾಧೀಶರ ಕ್ಷಮೆ ಯಾಚನೆ

ಪುಟ 6 ರಿಂದ

ಎಂದಿದ್ದಾರೆ. ಮಹಿಳೆಯರ ಬಗ್ಗೆ ತಮಗೆ ಗೌರವವಿದ್ದು ಅವರ ಕಲ್ಯಾಣಕ್ಕೆ ನೆರವಾಗುವಂಥ ಕಾರ್ಯಗಳನ್ನು ಹಿಂದೆಯೂ ಮಾಡಿದ್ದು ಅದನ್ನು ಸದಾ ಮುಂದುವರಿಸುವುದಾಗಿ ಹೇಳಿದ್ದಾರೆ.

ತಮ್ಮ ಹೇಳಿಕೆ ಬಗ್ಗೆ [illegible] ತಪ್ಪ ಅಭಿಪ್ರಾಯಗಳ ಬಗ್ಗೆ [illegible] ಎಲ್ಲರಿಗೂ ಸ್ಪಷ್ಟನೆ ನೀಡಲು [illegible] ಧ್ಯವಾಗಿರುವುದರಿಂದ ಪತ್ರದ [illegible] ಎಲ್ಲರಿಗೆ ತಿಳಿಸುವ [illegible] ಅದಾ ಬೃಂದಾ [illegible] ನೀಡಿದ್ದಾರೆ.

ವಿಳಾಸ,

ಡಿಸೆಂಬರ್ 6

• ಪೃಷ್ಠ 1ರಿಂದ

ಹಿನ್ನೆಲೆಯಲ್ಲಿ.

ಅತ್ತ 'ಜಾತ್ಯತೀತತೆ'ಯ ಜಪ ಮಾಡುವ ಕಾಂಗ್ರೆಸ್(ಐ)ಪಕ್ಷವಂತೂ ಅತ್ಯಂತ ಕ್ರಿಮಿನಲ್ ವರ್ತನೆ ತೋರುತ್ತಿದೆ. ಅಧಿಕಾರಕ್ಕೆ ಮರಳುವ ಆಸೆ ಹೊತ್ತು ಜನತಾದಳ(ಎಸ್) ಮೂಲಕ ಬಿ.ಜೆ.ಪಿ.ಯೊಂದಿಗೆ ಕೈ ಮಿಲಾಯಿಸಲೂ ಹೇಸುತ್ತಿಲ್ಲ.

ಬೂರ್ಜ್ವಾ ರಾಜಕೀಯ ಪಕ್ಷಗಳನ್ನು ಸೇರಿರದ ಹೊಸ ಪೀಳಿಗೆಗೆ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದ ಅನುಭವವೂ ಇಲ್ಲ. ಅವಕಾಶ ಬಂದಾಗಲೆಲ್ಲಾ ಸಾಮ್ರಾಜ್ಯಶಾಹಿಗಳ ಜತೆಗೂಡಿದ ಕೋಮುವಾದಿ ಮತ್ತಿತರ ಸ್ಥಳೀಯ ಪ್ರತಿಗಾಮಿಗಳ ವಿರುದ್ಧ ಹೋರಾಟ ನಡೆಸಿದ ಅನುಭವವೂ ಇಲ್ಲ. ಅವರಲ್ಲಿ ಬಹಳ ಮಂದಿಗೆ ತಮ್ಮ ವೈಯಕ್ತಿಕ ರಾಜಕೀಯ ಉನ್ನತಿಯ ಬಗ್ಗೆ ದೊಡ್ಡ ಆಸೆಗಳಿವೆ. ಆದರೆ ಇಂತಹ ಅನೀತಿಯುತ ರಾಜಗಳು ದೇಶದ ಭವಿಷ್ಯಕ್ಕೆ ಎಷ್ಟೊಂದು ಮಾರಕ ಎಂದು ಅವರಿಗೆ ಅರ್ಥವಾಗುತ್ತಿಲ್ಲ.

ಭಾರತದ ಏಕತೆ ಜಾತ್ಯತೀತತೆಯ ಅಡಿಗಲ್ಲಿನ ಮೇಲಷ್ಟೇ ಸಾಧ್ಯ. ಹೌದು, ಈಗ ಇದಕ್ಕಾಗಿ ಎಡ-ಜಾತ್ಯತೀತ ಶಕ್ತಿಗಳು ನಡೆಸುತ್ತಿರುವ ದೀರ್ಘ ಕಾಲದಿಂದ ಹೋರಾಟವನ್ನು ಬುಡಮೇಲು ಮಾಡಲು ತೀವ್ರ ಯತ್ನ ಸಾಗಿದೆ.

ಆದರೆ ನಾವು ಮತ್ತೊಮ್ಮೆ ಹೇಳುತ್ತಿದ್ದೇವೆ--ಈ ದೇಶದಲ್ಲಿ ದೇಶಪ್ರೇಮಿ, ಜಾತ್ಯತೀತ ಜನಗಳಿಗೆ ಬರವಿಲ್ಲ. ಈ ನಿಟ್ಟಿನಲ್ಲಿ ಅವರ ಭಾವನೆಗಳನ್ನು ಜಾಗೃತಗೊಳಿಸಬೇಕು. ಕೋಮುವಾದಿ, ಛಿದ್ರಕಾರಿ ಶಕ್ತಿಗಳ ಬೆದರಿಕೆಯ ಅಪಾಯದ ಬಗ್ಗೆ ಎಚ್ಚರಗೊಳಿಸಬೇಕು, ಮನವರಿಕೆ ಮಾಡಬೇಕು. ಕಾರ್ಮಿಕ ವರ್ಗ, ರೈತಾಪಿ ವರ್ಗ, ಕೃಷಿ ಕೂಲಿಗಾರರು, ನೌಕರರು, ಬುದ್ಧಿಜೀವಿಗಳು, ಕಲಾವಿದರು, ಯುವಜನ, ವಿದ್ಯಾರ್ಥಿಗಳು, ಮಹಿಳೆಯರು, ಎಲ್ಲಾ ಜಾತ್ಯತೀತ ಶಕ್ತಿಗಳನ್ನು ಅಣಿನೆರೆಸಬೇಕು.

ರಾಷ್ಟ್ರೀಯ ವಿಮೋಚನಾ ಆಂದೋಲನಕ್ಕೆ ಈ ಎಲ್ಲಾ ಶಕ್ತಿಗಳನ್ನು ಸ್ವಾತಂತ್ರ್ಯಕ್ಕಾಗಿ ಹೋರಾಟದಲ್ಲಿ ಒಂದುಗೂಡಿಸಲು ಸಾಧ್ಯವಾಯಿತು. ಈಗ ಎಲ್ಲಾ ಶಕ್ತಿಗಳನ್ನು ಈ ಸ್ವಾತಂತ್ರ್ಯದ ರಕ್ಷಣೆಗಾಗಿ ಒಂದುಗೂಡಿಸಬೇಕು.

ಕರ್ನಾಟಕದಲ್ಲಿ ಈ ದಿಸೆಯಲ್ಲಿ ಡಿಸೆಂಬರ್ 6 ಒಂದು ಮಹತ್ವದ ಹೆಜ್ಜೆಯಾಗಲಿ.

ಡಿಸೆಂಬರ್ 8ರಂದು ಡಿವೈಎಫ್ಐ ನ ರ್‍ಯಾಲಿ

ದಶಮಾನೋತ್ಸವದ ಅಂಗವಾಗಿ ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿಯ ಆಶ್ರಯದಲ್ಲಿ ಡಿಸೆಂಬರ್ 8ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ನಡೆಯಲಿದೆ. ರ್‍ಯಾಲಿಯು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆ ಸೇರಿಸಲು ಒತ್ತಾಯಿಸಿ ನಡೆಯುತ್ತದೆ.

ಡಿಸೆಂಬರ್ 8ರಂದು ರಾಜ್ಯದ ಮೂಲೆ-ಮೂಲೆಗಳಿಂದ 10 ಸಾವಿರಕ್ಕೂ ಹೆಚ್ಚು ಯುವಜನರು ಭಾಗವಹಿಸಲಿದ್ದಾರೆ. ಅದೇ ದಿನ ಸಂಘಟನೆಯ ದಶಕದ ಹೋರಾಟದ ಆಕರ್ಷಕ ಸ್ಮರಣ ಸಂಚಿಕೆಯನ್ನು ರಾಜ್ಯ ಸಮಿತಿ ಬಿಡುಗಡೆ ಮಾಡಲಿದೆ.

....ಪ್ರಣಾಳಿಕೆಯೋ?

ಪೃಷ್ಠ 2ರಿಂದ

ದೇಶವನ್ನ ನಾನು ರಕ್ಷಿಸಬೇಕಿದೆ" ಎಂದು ಹೇಳುವುದು ಸ್ವಾಮಾನ್ಯವಾಗಿ ಬಿಟ್ಟಿದೆ, ಆದರೆ ಯಾವ ಧೋರಣೆಗಳ ಆಧಾರದ ಮೇಲೆ?....

ಬೋಫೋರ್ಸ್ ಸತ್ತಿರುವ ವಿಷಯವೇನಲ್ಲ, -ಈ ಬಗ್ಗೆ ಕೆಲವು ಸ್ಪಷ್ಟನೆ ನೀಡಲಾಗಿದೆ. ಸಂತೋಷ. ಆದರೆ ಒಂದು ದೇಶದ ಪ್ರಧಾನ ಮಂತ್ರಿ ಬೋಫೋರ್ಸ್ ಕೇಸ್‌ನ ತನಿಖೆ ಯಂತಹ ಗಂಭೀರ ವಿಷಯದ ಬಗ್ಗೆ ಹಾಸ್ಯ ಚಟಾಕಿಯಲ್ಲಿ ತೊಡಗಲು ಸಾಧ್ಯವಿಲ್ಲ..

ನಾನು ಇನ್ನೊಂದು ವಿಷಯ ಹೇಳಬಯಸುತ್ತೇನೆ. ಇದು ಬಿಜೆಪಿ ಯೊಂದಿಗೆ ಸಂಬಂಧಕ್ಕೆ ಇನ್ನೂ ಚಂದ್ರಶೇಖರ್ ಬಾಗಿಲು ತೆರೆದಿಟ್ಟಿರುವ ಬಗ್ಗೆ...

ಹಿಂದಿನ ವಿ.ಪಿ.ಸಿಂಗ್ ಸರಕಾರ ರಾಮಜನ್ಮಭೂಮಿ ವಿವಾದವನ್ನು ತಪ್ಪು ರೀತಿಯಲ್ಲಿ ನಿರ್ವಹಿಸಿದ್ದಾರೆಂದರೆ ನಿಮ್ಮ ಪರಿಹಾರವೇನು ಎಂದು ಪ್ರಧಾನ ಮಂತ್ರಿಗಳನ್ನು ಕೇಳಬಯಸುತ್ತೇನೆ. ಹೇಗೆ ಅದನ್ನ ನಿರ್ವಹಿಸಬೇಕು? ಡಿಸೆಂಬರ್ 6ರಂದು ಕರಸೇವೆ ನಡೆಸಲು ಅವರು ಅನುಮತಿ ನೀಡುವರೆ? ಈ ಬಗ್ಗೆ ದೃಢ ಉತ್ತರ ಪ್ರಧಾನ ಮಂತ್ರಿಗಳಿಂದ ಬೇಕು.

ಸಾರ್ವಜನಿಕ ವ್ಯವಹಾರಗಳಲ್ಲಿ ಹಣಕಾಸಿನ ಭ್ರಷ್ಟಾಚಾರದ ವಿರುದ್ಧ ಹೋರಾಡುವಂತೆಯೆ ರಾಜಕೀಯ ಭ್ರಷ್ಟಾಚಾರದ ವಿರುದ್ಧವೂ ಹೋರಾಡಬೇಕು. ಒಂದು ಒಮ್ಮತದ ಧೋರಣೆ, ಕಾರ್ಯಕ್ರಮಗಳಿಲ್ಲದ ವ್ಯಕ್ತಿಗಳು, ಪಕ್ಷಗಳ ಕೂಟ ದೇಶದ ಯಾವುದೇ ಮೂಲಭೂತ ಸಮಸ್ಯೆಯನ್ನು ಪರಿಹರಿಸಲಾರದು.

ಈ ವಾರ...

(ಪಂಜಾಬ್‌ನಲ್ಲಿ) ಪೋಲೀಸ್ ಸೂಪರಿಂಟೆಂಡೆಂಟ್‌ರಂಥ ಉಚ್ಚ ಅಧಿಕಾರಿಗಳಿಗೂ ಆತ್ಮರಕ್ಷಣೆ ಮಾಡಿಕೊಳ್ಳಲು ಸಾಧ್ಯವಾಗದಿರುವ ಆಡಳಿತ ಶಿಥಿಲಗೊಂಡಿರುವಾದ ಶಾಂತಿ ನೆಲೆಗೊಳಿಸುವ ಪ್ರಯತ್ನ ವ್ಯರ್ಥವಾಗುವ ಸಂಭವತೆ ಹೆಚ್ಚು. ಆದ್ದರಿಂದ ಪ್ರಧಾನ ಮಂತ್ರಿಗಳು ಉಗ್ರಗಾಮಿಗಳೊಂದಿಗೆ ಸಂಧಾನ ನಡೆಸಲು ಮುಂದಾಗುವ ಬದಲು ರಾಜ್ಯದಲ್ಲಿ ಕಾಯ್ದೆ ಸುವ್ಯವಸ್ಥೆಯನ್ನು ಭದ್ರವಾಗಿ ನೆಲೆಗೊಳಿಸಲು ಗಮನಹರಿಸಲಿ. ಪೋಲೀಸ್ ಪಡೆಯೇ ಸ್ಥೈರ್ಯ ಕಳೆದುಕೊಂಡಿರುವಂಥ ವಾತಾವರಣದಲ್ಲಿ ಉಗ್ರಗಾಮಿಗಳನ್ನು ಓಲೈಸುವುದು ತರವಲ್ಲ. ಸಂಧಾನ, ಒಪ್ಪಂದ ಹೊಣೆಗಾರ ವ್ಯಕ್ತಿಗಳೊಂದಿಗೆ ನಡೆಯಬೇಕು.

'ಸಂಯುಕ್ತ ಕರ್ನಾಟಕ' ನ.28

ಗುರುವಾರ ಬಿಹಾರ ವಿಧಾನ ಸಭೆಯಲ್ಲಿ ವಿಶ್ವಾಸ ಮತ ನಿರ್ಣಯದ ಮೇಲೆ ನಡೆದ ಮತದಾನದ ರೀತಿ ನೋಡಿದರೆ ಲಲ್ಲೂ ಪ್ರಸಾದ್ ಯಾದವ್ ಸಂಪುಟದ ತಕ್ಷಣದ ಭವಿಷ್ಯದ ಬಗೆಗಿನ ಊಹಾಪೋಹಗಳಿಗೆಲ್ಲಾ ತೆರೆಬಿದ್ದಂತಾಗಿದೆ. ಮಾತ್ರವಲ್ಲ ಚಂದ್ರಶೇಖರ್‌ಗೆ ನಿಷ್ಠೆ ಬದಲಾಯಿಸಲು ನಿರಾಕರಿಸಿದ ಮುಖ್ಯಮಂತ್ರಿ(ಯಾದವ್)ರವರ ರಾಜಕೀಯ ಜಾಣ್ಮೆಯನ್ನು ತೋರಿಸುತ್ತದೆ.

'ದಿ ಸ್ಟೇಟ್ಸ್ ಮ್ಯಾನ್'
ನವೆಂಬರ್ 24

ಸ್ವತ: ತಮ್ಮದೇ ಬಲದಿಂದ ರಾಜ್ಯ ನಾಯಕತ್ವ ಉಳಿಸಿಕೊಳ್ಳುವ ಸಾಮರ್ಥ್ಯ ಇದೆಯೆಂಬುದನ್ನು ಸಾಬೀತು ಪಡಿಸಿರುವುದರಿಂದ ಬಿಹಾರ ಅಸೆಂಬ್ಲಿಯಲ್ಲಿ ಲಲ್ಲೂ ಪ್ರಸಾದ್ ಯಾದವ್ ವಿಶ್ವಾಸ ಮತ ನಿರ್ಣಯದಲ್ಲಿ ಗೆಲುವು ಸಾಧಿಸಿದ್ದು ಗಮನಾರ್ಹವಾಗಿದೆ. ಉಳಿವುಗಾಗಿ ಕಾಂಗ್ರೆಸ್(ಐ)ನ ಮೊರೆ ಹೊಕ್ಕ ಉತ್ತರಪ್ರದೇಶ ಮತ್ತು ಗುಜರಾತ್ ಮುಖ್ಯಮಂತ್ರಿಗಳಂತಲ್ಲದೆ ಲಲ್ಲೂ ತೀರಾ ಪ್ರತಿಕೂಲ ವಾತಾವರಣದಲ್ಲೂ ಬಹುತೇಕ ಇಡೀ ಜನತಾ ದಳ ಶಾಸಕಾಂಗ ಪಕ್ಷದ ಮತ್ತು ಮೈತ್ರಿಯುತ ಎಡ ಪಕ್ಷಗಳು ಹಾಗೂ ಜಾರ್ಖಂಡ್ ಮುಕ್ತಿ ಮೋರ್ಚಾದ ಬೆಂಬಲವನ್ನು ಉಳಿಸಿಕೊಳ್ಳುವ ಸಾಧನೆ ತೋರಿದ್ದಾರೆ.

'ಹಿಂದೂಸ್ತಾನ್ ಟೈಮ್ಸ್' ನ.24

ಅತ್ಯಂತ ಶಿಸ್ತಿನ, ನಿಷ್ಠೆಯ ಕಾರ್ಯಕರ್ತರನ್ನು ಹೊಂದಿರುವ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿ ಬಿಹಾರದಲ್ಲಿ ಒಡೆದು ಹೋಳಾಗಿದೆ. ಒಂದು ಗುಂಪು ಪಕ್ಷದ ಆದೇಶ(ವಿಪ್)ವನ್ನು ಉಲ್ಲಂಘಿಸಿ ಲಲ್ಲೂ ಪ್ರಸಾದ್‌ರಿಗೆ ಅನುಕೂಲಕರವಾಗಿ ವರ್ತಿಸಿದ ಸಂಗತಿ ಇದೀಗ ಬಯಲಾಗಿದೆ. ಲಲ್ಲೂ ಪ್ರಸಾದ್ ಯಾದವ್‌ರ ವಿರುದ್ಧ ಮತ ನೀಡಿ ಅವರನ್ನು ಉರುಳಿಸಬೇಕೆಂದು ಬಿಜೆಪಿ ಕೇಂದ್ರ ನಾಯಕತ್ವ ಕಟ್ಟುನಿಟ್ಟಿನ ಆದೇಶ ನೀಡಿದ್ದರೂ ಬಿಹಾರ ವಿಧಾನ ಸಭೆಯ 10 ಮಂದಿ ಬಿಜೆಪಿ ಶಾಸಕರು ಮತದಾನ ಸಮಯದಲ್ಲಿ ಗೈರುಹಾಜರಾದರು.

..............ಇವರೆಲ್ಲ ಆದಿವಾಸಿ ಪ್ರದೇಶಗಳಿಂದ, ಹಿಂದುಳಿದ ವರ್ಗಗಳಿಂದ ಬಂದಿದ್ದಾರೆಂಬುದು ಗಮನಾರ್ಹ. ಹೀಗಾಗಿ ಶ್ರೀರಾಮನ ಹೆಸರಿನಲ್ಲಿ ಹಿಂದೂಗಳನ್ನೆಲ್ಲಾ ಒಂದುಗೂಡಿಸುವ ಆರ್.ಎಸ್.ಎಸ್.--ಬಿಜೆಪಿ ಯತ್ನಕ್ಕೆ ಬಿಹಾರದಲ್ಲಿ ಪೆಟ್ಟು ಬಿದ್ದಿದೆ. ಪಕ್ಷದ ಆದೇಶ ಉಲ್ಲಂಘಿಸಿದ ಶಾಸಕರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಬಿಜೆಪಿ ನಾಯಕ ಅದ್ವಾನಿ ಹೇಳಿದ್ದರೂ ಭಿನ್ನಮತೀಯರು ಅದಕ್ಕೆ ಸೊಪ್ಪು ಹಾಕಲಿಲ್ಲ.

ನ.28 'ಸಂಯುಕ್ತ ಕರ್ನಾಟಕ'

ಐಎಂಎಫ್(ಅಂತರರಾಷ್ಟ್ರೀಯ ಹಣಕಾಸು ನಿಧಿ) ಸಾಲವಿಲ್ಲದೆ ಅನ್ಯ ಮಾರ್ಗವಿಲ್ಲ ಎಂದು ಅಧಿಕಾರಿಗಳು, ವ್ಯಾಪಾರಿಗಳು ಮತ್ತು ಅಕಾಡೆಮಿಕ್ ವಲಯಗಳಲ್ಲಿ ವ್ಯಾಪಕವಾಗಿ ಒಪ್ಪಲಾಗಿರುವುದು ನೋವಿನ ಸಂಗತಿಯಾಗಿದೆ.

ವಿಸ್ತರಿತ ಹಣಕಾಸು ಸೌಲಭ್ಯಗಳನ್ವಯ ಈ ಸಾಲಕ್ಕೆ ವಿಧಿಸಲಾಗುವ ಷರತ್ತುಗಳು ರಾಷ್ಟ್ರದ ಸಾರ್ವಭೌಮತೆಗೆ ಧಕ್ಕೆ ತರಲಿವೆ. ವಸ್ತುಸ್ಥಿತಿ ಏನೆಂದರೆ, ಈ ಭಾರಿ ಅಪಾಯ ತರುವಂಥ ಬಗೆಗಿನ ಪ್ರಾಥಮಿಕ ಮಾತುಕತೆಗಳು ಈಗಾಗಲೇ ಆರಂಭವಾಗಿವೆ.

ಇಂಥ ಸಾಲವನ್ನು ನಿವಾರಿಸಲು ರಾಷ್ಟ್ರೀಯ ರಂಗ ಸರಕಾರ ಭಾರಿ ಪ್ರಯತ್ನಗಳನ್ನು ನಡೆಸಿತ್ತು.


'ಡೆಕ್ಕನ್ ಹೆರಾಲ್ಡ್' ಲೇಖನದಲ್ಲಿ
ಬಲರಾಜ್ ಮೆಹ್ತಾ ನವೆಂಬರ್ 28

ಚಾಟಿಂಗೋಟಿ

ಇಡೀ ಜಾಗದಲ್ಲಿ(ಅಯೋಧ್ಯೆಯ ವಿವಾದಾತ್ಮಕ ಸ್ಥಳ) ಪೂಜೆ ಸಲ್ಲಿಸದಿದ್ದರೆ ಹಿಂದುಗಳಿಗೆ ಮುಕ್ತಿ ಸಿಗಲಿಕ್ಕಿಲ್ಲ.

----ವಿಶ್ವ ಹಿಂದೂ ಪರಿಷತ್ ನಾಯಕ
ಅಶೋಕ್ ಸಿಂಘಾಲ್ ಉವಾಚ

ಹಾಗಾದರೆ ಎಲ್ಲಾ ಹಿಂದೂಗಳಿಗೆ ಅಯೋಧ್ಯೆಗೆ ಉಚಿತ ಪ್ರವಾಸ ಯೋಗ!



ಭಾರತದ ಕಾರ್ಮಿಕ ವರ್ಗದ ಇನ್ನೊಬ್ಬ ಮುಂದಾಳು

ಕಾಮ್ರೇಡ್ ಮಹ್ಮದ್ ಇಸ್ಮಾಯಿಲ್

ಶ್ರಮಜೀವಿಯ ನೋವನ್ನು ತನ್ನ ಸ್ವಂತ ಅನುಭವದಿಂದಲೇ ಉಂಡು ದೇಶದ ಒಬ್ಬ ಪ್ರಮುಖ ಕಾರ್ಮಿಕ ಮುಂದಾಳಾಗಿ ಬೆಳೆದ ಕಾರ್ಮಿಕ ವರ್ಗದ ಪ್ರಮುಖ ಸಂಘಟನೆ ಸಿಐಟಿಯುನ ಸಂಸ್ಥಾಪಕ ಮುಖಂಡರಲ್ಲೊಬ್ಬರಾಗಿದ್ದ ಕಾಮ್ರೇಡ್ ಮಹ್ಮದ್ ಇಸ್ಮಾಯಿಲ್ ನವೆಂಬರ್ 14ರಂದು ನಿಧನ ಹೊಂದಿದ್ದಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಕಾಮ್ರೇಡ್ ಮಹ್ಮದ್ ಇಸ್ಮಾಯಿಲ್ ಸಿಐಟಿಯುನ ಅಖಿಲ ಭಾರತ ಉಪಾಧ್ಯಕ್ಷರೂ, ಪಶ್ಚಿಮ ಬಂಗಾಳ ರಾಜ್ಯ ಸಿಐಟಿಯುನ ಅಧ್ಯಕ್ಷರೂ, ಸಿಪಿಐ(ಎಂ)ನ ಪ. ಬಂಗಾಳ ರಾಜ್ಯ ಸಮಿತಿಯ ಸದಸ್ಯರೂ ಆಗಿದ್ದರು.

ಕಾಮ್ರೇಡ್ ಇಸ್ಮಾಯಿಲ್‌ರವರ ಇಡೀ ಜೀವನವೇ ದಣಿವರಿಯದ ಹೋರಾಟದ ಉಜ್ವಲ ಉದಾಹರಣೆ. ಉತ್ತರ ಪ್ರದೇಶದ ಉನ್ನಾವ್‌ನಲ್ಲಿ 1910ರಲ್ಲಿ ಭೂಹೀನ ರೈತ ಕುಟುಂಬದಲ್ಲಿ ಜನಿಸಿದ ಇಸ್ಮಾಯಿಲ್ ಒಂದು ವರ್ಷದೊಳಗೆ ತಂದೆಯನ್ನು ಕಳೆದುಕೊಂಡು ಕಡುಬಡತನದಲ್ಲಿ ತನ್ನ ಬಾಲ್ಯ ಕಳೆದರು. ಬದುಕು ಸಾಗಿಸಲು ಅಣ್ಣನೊಂದಿಗೆ ಕಲ್ಕತ್ತೆ ಸೇರಿದಾಗ ಅವರ ವಯಸ್ಸು 18. ಅಂದಿನಿಂದ ಕಲ್ಕತ್ತಾದ ನಿವಾಸಿ ಅವರು. ಕಾರ್ಮಿಕರಾಗಿ ವಿಭಿನ್ನ ಕೆಲಸ ಮಾಡಿ ಹೊಟ್ಟೆ ಹೊರೆಯಬೇಕಾಗಿದ್ದ ಅವರಿಗೆ ಶಾಲಾ ಶಿಕ್ಷಣವೆಂಬುದು ಸಿಗಲೇ ಇಲ್ಲ. ಆದರೆ ತನ್ನ ಸ್ವಂತ ಶ್ರಮ ಹಾಗೂ ಸಂಗಾತಿಗಳ ನೆರವಿನಿಂದ ಅವರು ಭಾಷೆ ಹಾಗೂ ರಾಜಕೀಯದಲ್ಲಿ ಪರಿಣಿತರಾದರು.

ಹಿಂದೂ---ಮುಸ್ಲಿಂ ಜನಸಮೂಹಗಳ ನಡುವೆ ಸೌಹಾರ್ದ ಮೂಡಿಸಿದ ಗಾಂಧೀಜಿಯವರ ಖಿಲಾಫತ್ ಆಂದೋಲನದಿಂದ ತನ್ನ ರಾಜಕೀಯ ಜೀವನ ಆರಂಭಿಸಿದ ಕಾಮ್ರೇಡ್ ಇಸ್ಮಾಯಿಲ್ ತನ್ನ 18ನೇ ವಯಸ್ಸಿನಿಂದಲೇ ಜೈಲುಯಾತ್ರೆ ಆರಂಭಿಸಿದರು.

ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಪ್ರಾಂತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ದುಡಿದರು. ಇತರ ರಾಷ್ಟ್ರೀಯವಾದಿ ಸಹಯೋಗಿಗಳೊಂದಿಗೆ ಕಾಮ್ರೇಡ್ ಇಸ್ಮಾಯಿಲ್ ಕಲ್ಕತ್ತೆಯ ಮುಸ್ಲಿಂರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಣಿನೆರೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕಾಮ್ರೇಡ್ ಅಬ್ದುಲ್ ಹಲೀಂರಿಂದ ಮಾರ್ಕ್ಸ್‌ವಾದದ ದೀಕ್ಷೆ ಪಡೆದ ಇಸ್ಮಾಯಿಲ್ 1935ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಸಹಜವಾಗಿಯೇ ಟ್ರೇಡ್ ಯೂನಿಯನ್ ರಂಗಕ್ಕೆ ಪ್ರವೇಶಿಸಿದರು. ಅಂದಿನಿಂದ ಐದು ದಶಕಗಳ ಕಾಲ ಅವಿರತವಾಗಿ ಕಾರ್ಮಿಕ ಆಂದೋಲನ ಕಟ್ಟಿ ಬೆಳೆಸುವುದಕ್ಕೆ ಜೀವನ ಮುಡಿಪಿಟ್ಟರು.

ಟ್ರಾಂ ನೌಕರರನ್ನು ಸಂಘಟಿಸುವಲ್ಲಿ ಚಾರಿತ್ರಿಕ ಪಾತ್ರ ವಹಿಸಿ ಬ್ರಿಟಿಷ್ ಅಧಿಕಾರಿಗಳೊಂದಿಗೆ ನೇರ ಹಣಾಹಣಿಗಿಳಿದರು. ಮುವತ್ತರ, ನಲವತ್ತರ ದಶಕಗಳಲ್ಲಿ ಸಣಬು ಕಾರ್ಮಿಕರ ಪ್ರಮುಖ ಸಂಘಟಕರಾಗಿ ಮೂಡಿಬಂದರು. ಕಾರ್ಮಿಕರ ಹೋರಾಟಗಳಲ್ಲಿ ತಿಂಗಳುಗಟ್ಟಲೆ ಕಾರ್ಮಿಕರೊಂದಿಗೆ ಇದ್ದು ಪೋಲೀಸರನ್ನು ಸದಾ ಬೆಸ್ತುಗೊಳಿಸುತ್ತಾ ಬಂದರು. ಅಸಂಘಟಿತ ಬೀಡಿ ಕಾರ್ಮಿಕರಲ್ಲಿ ಆತ್ಮಾಭಿಮಾನ ಮೂಡಿಸಿದರು. ರೈಲ್ವೇ ಕಾರ್ಮಿಕರ ಆಂದೋಲನಗಳಲ್ಲಿ ಅಗ್ರಣಿ ಪಾತ್ರ ವಹಿಸಿದರು. ನಲ್ವತ್ತರ ದಶಕದ ಹೊತ್ತಿಗೆ ಸಮರಧೀರ ಕಾರ್ಮಿಕ ವರ್ಗದ ಅತ್ಯಂತ ಜನಪ್ರಿಯ ಮುಖಂಡರಲ್ಲಿ ಒಬ್ಬರಾಗಿ ಮಾನ್ಯತೆ ಪಡೆದರು. 1945 ರಲ್ಲಿ ಕಲ್ಕತ್ತಾ ಮಹಾನಗರ ಪಾಲಿಕೆಯ ಕಾರ್ಮಿಕರ ಕ್ಷೇತ್ರದಿಂದ ಕಮ್ಯುನಿಸ್ಟ್ ಅಭ್ಯರ್ಥಿಯಾಗಿ ಅತ್ಯಂತ ಹೆಚ್ಚು ಮತದಿಂದ ಆರಿಸಿ ಬಂದರು.

1948ರಲ್ಲಿ ಎರಡನೇ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಗೊಂಡರು. 1949ರಲ್ಲಿ ಮರು ಸಂಘಟನೆಗೊಂಡ ಬಂಗಾಲದ ಪ್ರಾಂತೀಯ ಸಮಿತಿಯ ಕಾರ್ಯದರ್ಶಿಯಾದರು. 1985ರರಿಂದ ಏಐಟಿಯುಸಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, 1957ರಿಂದ 1970ರವರೆಗೆ ಏಐಟಿಯುಸಿಯ ಉಪಾಧ್ಯಕ್ಷರಾಗಿ ದುಡಿದರು. 1970ರಲ್ಲಿ ಸಿಐಟಿಯು ಸ್ಥಾಪನೆಗೊಂಡಾಗ ಅಖಿಲ ಭಾರತ ಉಪಾಧ್ಯಕ್ಷರಾದರು, ಪಶ್ಚಿಮ ಬಂಗಾಳ ಸಮಿತಿಯ ಅಧ್ಯಕ್ಷರಾದರು. 1967ರಲ್ಲಿ ಮೊದಲ ಬಾರಿಗೆ ಬ್ಯಾರಕ್‌ಪುರ್ ಕ್ಷೇತ್ರದಿಂದ ಸಂಸತ್ತಿಗೆ ಚುನಾಯಿತರಾದರು. ಒಟ್ಟು ಮೂರು ಬಾರಿ ಅವರು ಸಂಸತ್ ಸದಸ್ಯರಾಗಿ ಆಯ್ಕೆಗೊಂಡರು.

ಕಾರ್ಮಿಕ ವರ್ಗದ ನೂರಾರು ಹೋರಾಟಗಳೊಂದಿಗೆ ಬೆಸೆದ ಹೆಸರು ಮಹ್ಮದ್ ಇಸ್ಮಾಯಿಲ್‌ರದ್ದು. ಸಾವಿರಾರು ಟ್ರೇಡ್ ಯೂನಿಯನ್ ಕಾರ್ಯಕರ್ತರ ನಿಕಟ ಸ್ನೇಹಿತರು, ಪ್ರೇರಣಾ ಸೆಲೆಯಾಗಿದ್ದವರು ಕಾಮ್ರೇಡ್ ಇಸ್ಮಾಯಿಲ್. ಮಾರ್ಕ್ಸ್‌ವಾದ--ಲೆನಿನ್‌ವಾದದಲ್ಲಿ ಅಚಲ ನಂಬಿಕೆ, ಜಗತ್ತನ್ನು ಬದಲಿಸುವ ಕಾರ್ಮಿಕರ ಸಾಮರ್ಥ್ಯದಲ್ಲಿ ದೃಢ ವಿಶ್ವಾಸ ಅವರನ್ನು ಉತ್ಸಾಹಿ ಸಂಘಟಕರನ್ನಾಗಿಸಿತು---ಕೊನೆಯುಸಿರಿನವರೆಗೂ ನಿಜವಾದ ಅರ್ಥದಲ್ಲಿ ಸರಳ ಜೀವಿ ಕಾಮ್ರೇಡ್ ಮಹ್ಮದ್ ಇಸ್ಮಾಯಿಲ್‌ರ ಕುಟುಂಬವೆಂದರೆ ಪಕ್ಷ ಮತ್ತು ಸಿಐಟಿಯು ಸಂಗಾತಿಗಳೇ.

ಈ ದು:ಖದ ಸುದ್ದಿ ಕೇಳಿದ ಸಾವಿರಾರು ಸಿಐಟಿಯು ಕಾರ್ಯಕರ್ತರು ರಾಜ್ಯ ಸಮಿತಿ ಕಛೇರಿಗೆ ಧಾವಿಸಿದರು. ಮುಖ್ಯಮಂತ್ರಿ ಜ್ಯೋತಿಬಸು ಮತ್ತಿತರ ಸಿಪಿಐ(ಎಂ), ಸಿಐಟಿಯು ಮುಖಂಡರು, ಇತರ ಎಡ ಪಕ್ಷಗಳ, ಅವುಗಳ ನೇತೃತ್ವದ ಕಾರ್ಮಿಕ ಸಂಘಟನೆಗಳ ಮುಖಂಡರು ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು. ನವೆಂಬರ್ 15ರ ಬೆಳಗ್ಗೆ ಕಾಮ್ರೇಡ್ ಮಹ್ಮದ್ ಇಸ್ಮಾಯಿಲ್‌ರ ದೇಹವನ್ನು ಪಕ್ಷದ ಕಛೇರಿ ಮುಜಫರ್ ಭವನಕ್ಕೆ ತರಲಾಯಿತು. ಮಧ್ಯಾಹ್ನ ನಡೆದ ಅಂತಿಮ ಸಂಸ್ಕಾರದ ಮೆರವಣಿಗೆಯಲ್ಲಿ 80 ಕೆಂಪು ಸ್ವಯಂ ಸೇವಕರು, ಅವರ ಹಿಂದೆ ಕಾಮ್ರೇಡ್ ಇಸ್ಮಾಯಿಲ್‌ರನ್ನು ಹೊತ್ತ ಟ್ರಕ್, ಅದರ ಹಿಂದೆ 80ಟ್ರಾಮ್ ಕಾರ್ಮಿಕರು, ಅವರ ಹಿಂದೆ ಸಾವಿರಾರು ಕಾರ್ಮಿಕರು ಭಾಗವಹಿಸಿದ್ದರು.

1944ರಿಂದ ಅವರ ಜೊತೆಗೆ ದುಡಿದ ಮುಖ್ಯಮಂತ್ರಿ ಜ್ಯೋತಿ ಬಸು ತಾನು ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ಆರಂಭಿಸಿದಾಗ ಅವರಿಂದ ವೈಯಕ್ತಿಕವಾಗಿ ಬಹಳ ವಿಷಯಗಳನ್ನು ಕಲಿತೆ ಎಂದು ನೆನಪಿಸಿಕೊಂಡರು.

Printed and published by P.Ramachandra Rao on behalf of communist Party of India (Marxist), Karnatak a State Committee, 95A, 2nd Cross, Muneshwara Block, Palace Guttahalli, Bangalore - 560003 Phone : 366489. Editor : P. RAMACHANDRA RAO